

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜನವರಿ 21 ಭಾನುವಾರ 2024

ಸಂಪುಟ: 44 | ಸಂಚಿಕೆ: 274 | ಪುಟಗಳು: 12


ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ತಮಿಳುನಾಡಿನ ಅಗ್ನಿ ತೀರ್ಥ ಕಡಲತೀರದಲ್ಲಿ ಪ್ರಧಾನಿ ಮೋದಿ ಪವಿತ್ರ ಸ್ನಾನ, ವಿಶೇಷ ಪ್ರಾರ್ಥನೆ



ರಾಮೇಶ್ವರಂ (ತಮಿಳುನಾಡು): ತಮಿಳುನಾಡು ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು ಇಂದು ರಾಮೇಶ್ವರಂ ಹಾಗೂ ತಿರುಚಿರಾಪಳ್ಳಿಯಲ್ಲಿ ರೋಡ್ ಶೋ ನಡೆಸಿದ್ದು, ರಸ್ತೆಗಳ ಎರಡೂ ಬದಿಗಳಲ್ಲಿ ನಿಂತಿದ್ದ ಜನ ಹೂಗಳ ಸುರಿಮಳೆಗರೆದು ಸ್ವಾಗತಿಸಿದರು. ಪ್ರಧಾನಿ ಮೋದಿ ಎರಡು ದಿನಗಳ ತಮಿಳುನಾಡು ಪ್ರವಾಸದಲ್ಲಿದ್ದು, ಇಂದು ರಾಮೇಶ್ವರಂನ ಶ್ರೀ ಅರುಲ್ಮಿಗು ರಾಮನಾಥಸ್ವಾಮಿ ದೇವಸ್ಥಾನ ಹಾಗೂ ತಿರುಚಿರಾಪಳ್ಳಿಯಲ್ಲಿರುವ ಶ್ರೀ ರಂಗನಾಥಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಿ, ದೇವರ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿದರು.

ರೋಡ್ ಶೋ ವೇಳೆ ಪ್ರಧಾನಿ ಅವರನ್ನು ಸ್ವಾಗತಿಸಲು ರಸ್ತೆಯ ಇಕ್ಕೆಲಗಳಲ್ಲಿ ಸಾವಿರಾರು ಜನರು ಹಾಗೂ ಬಿಜೆಪಿ ಕಾರ್ಯಕರ್ತರು ಸೇರಿದ್ದರು. ಸ್ಥಳೀಯ ನಿವಾಸಿಗಳು ಮೋದಿ ಅವರು ಸಾಗಿದ ದಾರಿ ಉದ್ದಕ್ಕೂ ಅವರ ಮೇಲೆ ಪುಷ್ಪಮಳೆ ಸುರಿಸಿದರು. ಇನ್ನೂ ಕೆಲವರು ಮೋದಿಯತ್ತ ಬಿಜೆಪಿ ಬಾವುಟವನ್ನು ಬೀಸಿದರು. ಅವರ ಅಭಿಮಾನಕ್ಕೆ ಮೋದಿ ಕೂಡ ಜನರತ್ತ, ಕೈಬೀಸಿ ಹಾಗೂ ನಮಸ್ಕರಿಸುವ ಮೂಲಕ ಸಂತೋಷ ವ್ಯಕ್ತಪಡಿಸಿದರು.

ರಾಮೇಶ್ವರಂನಲ್ಲಿ ರೋಡ್ ಶೋ ಬಳಿಕ 'ಅಗ್ನಿ ತೀರ್ಥ' ಕಡಲತೀರದಲ್ಲಿ ಸ್ನಾನ ಮಾಡಿದರು. ರುದ್ರಾಕ್ಷಿ ಮಾಲೆ ಧರಿಸಿದ್ದ ಮೋದಿ ತಮಿಳುನಾಡಿನ ಪುರಾತನ ಶಿವ ದೇವಾಲಯದ ರಾಮನಾಥಸ್ವಾಮಿ ದೇಪದ್ಯಗಳನ್ನು ಪಠಿಸುವುದನ್ನು ಕೆಲಹೊತ್ತು ಆಲಿಸಿದರು. ಜೊತೆಗೆ ದೇವಾಲಯದ ಆವರಣದಲ್ಲಿರುವ 'ಆಂಡಾಳ್' ಎಂಬ ಆನೆಯಿಂದ ಆಶೀರ್ವಾದ ವನ್ನೂ ಪಡೆದರು. ಇಲ್ಲಿ ಪೂಜೆ ಸಲ್ಲಿಸಿದ ಬಳಿಕ ವಾಯುಪಡೆಯ ಹೆಲಿಕಾಪ್ಟರ್ ಮೂಲಕ ರಾಮೇಶ್ವರಂಗೆ ಆಗಮಿಸಿದ ಪ್ರಧಾನಿ ಮೋದಿಗೆ ಬಿಜೆಪಿ ಕಾರ್ಯಕರ್ತರು ಹಾಗೂ ಸ್ಥಳೀಯ ಜನರು ಅದ್ಧೂರಿ ಸ್ವಾಗತ ಕೋರಿದರು.



ನಾಳೆ ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ

ರಾಜ್ಯದಲ್ಲಿ ಕಟ್ಟೆಚ್ಚರ


ಧಾರ್ಮಿಕ ಸಭೆ, ಮೆರವಣಿಗೆ ನಿಷಿದ್ಧ; ದೇವಸ್ಥಾನ ಆವರಣದಲ್ಲಿ ಧಾರ್ಮಿಕ ಕಾರ್ಯಗಳು ಸೀಮಿತ

- ಕಿಡಿಗೇಡಿಗಳ ದುಷ್ಕೃತ್ಯಕ್ಕೆ ಅವಕಾಶವಾಗದಂತೆ ಭಾರಿ ಭದ್ರತೆ; ಮುಖ್ಯಮಂತ್ರಿ ಸಿದ್ದರಾಮಯ್ಯ ಸಭೆ
- ರೌಡಿಶೀಟರ್‌ಗಳು, ಗಲಭೆಗಳಲ್ಲಿ ಪಾಲ್ಗೊಂಡವರ ಮೇಲೆ ಪೊಲೀಸ್ ಇಲಾಖೆ ತೀವ್ರ ನಿಗಾ

ಬೆಂಗಳೂರು, ಜ.20(ಕೆಎಂಶಿ)– ಅಯೋಧ್ಯೆಯ ಶ್ರೀರಾಮ ಮಂದಿರದಲ್ಲಿ ಬರುವ ಸೋಮವಾರ ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ರಾಜ್ಯದಲ್ಲಿ ಧಾರ್ಮಿಕ ಸಭೆ, ಮೆರವಣಿಗೆಗಳನ್ನು ನಿಷೇಧಿಸಲಾಗಿದ್ದು, ದೇವಸ್ಥಾನದ ಆವರಣದಲ್ಲಿ ಮಾತ್ರ ಪೂಜೆಗೆ ಸರ್ಕಾರ ಅವಕಾಶ ಮಾಡಿಕೊಟ್ಟಿದೆ.

ಕಾಂಗ್ರೆಸ್ ಆಡಳಿತ ಇರುವ ಕರ್ನಾಟಕದಲ್ಲಿ ಕಿಡಿಗೇಡಿಗಳು ಈ ಸಂದರ್ಭವನ್ನು ದುರುಪಯೋಗ ಮಾಡಿಕೊಂಡು ಕಾನೂನು–ಸುವ್ಯವಸ್ಥೆ ಹಾಳು ಮಾಡಬಹುದೆಂಬ ಮಾಹಿತಿ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಉನ್ನತ ಮಟ್ಟದ ಸಭೆ ನಡೆಸಿ, ಪೊಲೀಸರಿಗೆ ಬಿಗಿ ಭದ್ರತೆ ಕೈಗೊಳ್ಳುವಂತೆ ಆದೇಶಿಸಿದ್ದಾರೆ.

ನಾಳೆಯಿಂದ ಮೂರು ದಿನಗಳ ಕಾಲ ಯಾವುದೇ ಪೊಲೀಸ್ ಸಿಬ್ಬಂದಿ ರಜೆ ತೆಗೆದುಕೊಳ್ಳುವಂತಿಲ್ಲ, ರಜೆ ಮೇಲೆ ಹೋಗಿರುವವರೂ ಕರ್ತವ್ಯಕ್ಕೆ ಹಾಜರಾಗುವಂತೆ ಗೃಹ ಇಲಾಖೆ ಸೂಚಿಸಿದೆ. ಈ ಹಿಂದಿನ ಕೋಮು ಗಲಭೆಗಳ ಬಗ್ಗೆ ಮಾಹಿತಿ ಪಡೆದಿರುವ ಪೊಲೀಸರು, ಅಂತಹ ಗಲಭೆಗಳಲ್ಲಿ ಭಾಗಿಯಾಗಿದ್ದವರ ಮೇಲೂ



ಹದ್ದಿನ ಕಣ್ಣು ಇಡಬೇಕು.. ಜೊತೆಗೆ ಆಯಾ ಪೊಲೀಸ್ ಠಾಣೆಗಳ ರೌಡಿಶೀಟರ್‌ಗಳು ಮತ್ತು ಹಳೆಯ ಆರೋಪಿಗಳು, ಸಮಾಜದ ಸ್ವಾಸ್ಥ್ಯ ಕದಡುವ ವ್ಯಕ್ತಿಗಳ ಚಟುವಟಿಕೆಗಳ ಮೇಲೆ ನಿಗಾ ವಹಿಸಲಾಗಿದೆ. ಕೋಮು ಗಲಭೆಗಳು ಮರುಕಳಿಸಬಹುದಾದ ಪ್ರದೇಶಗಳಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಹೆಚ್ಚಾಗಿ ಅಳವಡಿಸುವುದು, ಕಾನೂನುಬಾಹಿರ ಚಟುವಟಿಕೆಗಳ ಮೇಲೆ ● 9ನೇ ಪುಟಕ್ಕೆ

ಒಳ ಮೀಸಲಾತಿ ಪರಿಶೀಲನೆಗೆ ಸಮಿತಿ ರಚಿಸಿದ ಕೇಂದ್ರ

ದಲಿತರ ದಾರಿ ತಪ್ಪಿಸುವ ಕುತಂತ್ರ: ಮುಖ್ಯಮಂತ್ರಿ ಸಿದ್ದರಾಮಯ್ಯ



ಬೆಂಗಳೂರು: ಕೇಂದ್ರ ಸರ್ಕಾರ ಪರಿಶಿಷ್ಟ ಜಾತಿಗಳಿಗೆ ಒಳ ಮೀಸಲಾತಿ ಕಲ್ಪಿಸುವ ಕುರಿತು ಪರಿಶೀಲನೆ ನಡೆಸಲು ಸಂಪುಟ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಿದ್ದು, ಇದು ದಲಿತ ಸಮುದಾಯದ ದಾರಿ ತಪ್ಪಿಸುವ ಕುತಂತ್ರವಷ್ಟೇ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಟೀಕಿಸಿದ್ದಾರೆ.

ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಸಿಎಂ, ಪರಿಶಿಷ್ಟ ಜಾತಿಗಳಿಗೆ ಒಳ ಮೀಸಲಾತಿಯ ಪರಿಶೀಲನೆ ನಡೆಸಲು ಕೇಂದ್ರ ಸರ್ಕಾರ ಸಂಪುಟ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಿರುವುದು "ದಲಿತ ಸಮುದಾಯದ ದಾರಿ ತಪ್ಪಿಸುವ ಕುತಂತ್ರವಷ್ಟೇ". ಇದರ ಹಿಂದೆ ಯಾವುದೇ ಪ್ರಾಮಾಣಿಕವಾದ ಕಾಳಜಿ ಇಲ್ಲ ಎಂದಿದ್ದಾರೆ.

ಇದೇ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರ ರಚಿಸಿದ್ದ ನ್ಯಾಯಮೂರ್ತಿ ಉಷಾ ಮೆಹ್ರಾ ಆಯೋಗ ಕೂಡಾ ಅಂತಿಮವಾಗಿ ಪರಿಶಿಷ್ಟಜಾತಿಗಳ ಉಪವರ್ಗೀಕರಣ ಮಾಡಿ ಒಳಮೀಸಲಾತಿ ನೀಡಲು ಸಂವಿಧಾನ ತಿದ್ದುಪಡಿಯೊಂದೇ ಪರಿಹಾರ ಎಂದು ವರದಿ ನೀಡಿತ್ತು. ಆಂಧ್ರಪ್ರದೇಶದ ಪರಿಶಿಷ್ಟ ಜಾತಿಗಳ ಉಪವರ್ಗೀಕರಣದ ಬಗ್ಗೆ ಅಧ್ಯಯನ ನಡೆಸಿದ್ದ ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗ ಕೂಡಾ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿತ್ತು. ಹೀಗಿರುವಾಗ ಇದಕ್ಕೆ ಇನ್ನೊಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸುವ ಅಗತ್ಯವಾದರೂ ಏನಿದೆ. ಇದು ಕೇವಲ "ಸಮಯ ಕೊಲ್ಲುವ" ತಂತ್ರ ಅಷ್ಟೇ ಆಗಿದೆ ಎಂದು ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ● 9ನೇ ಪುಟಕ್ಕೆ

ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆ ಸುಳ್ಳು, ತಿರುಚಿದ ಸುದ್ದಿ ವರದಿ ಮಾಡದಂತೆ ಮಾಧ್ಯಮ, ಸಾಮಾಜಿಕ ಜಾಲತಾಣಗಳಿಗೆ ಕೇಂದ್ರ ಸೂಚನೆ


ನವದೆಹಲಿ, ಜ.20– ಅಯೋಧ್ಯೆ ರಾಮಮಂದಿರದಲ್ಲಿ ಜ.22ರಂದು ನೆರವೇರಲಿರುವ ರಾಮಲಲ್ಲಾ ವಿಗ್ರಹದ ಪ್ರಾಣ ಪ್ರತಿಷ್ಠಾಪನೆ ಸಮಾರಂಭದ ಹಿನ್ನೆಲೆಯಲ್ಲಿ ಯಾವುದೇ ಸುಳ್ಳು ಅಥವಾ ತಿರುಚಿದ ವಿಷಯಗಳನ್ನು ಪ್ರಕಟಿಸದಂತೆ ಕೇಂದ್ರ ಸರ್ಕಾರ ಶನಿವಾರ ಮಾಧ್ಯಮ ಸಂಸ್ಥೆಗಳು ಮತ್ತು ಸಾಮಾಜಿಕ ಜಾಲತಾಣ ವೇದಿಕೆಗಳಿಗೆ ಸೂಚನೆ ನೀಡಿದೆ. ಈ ಕುರಿತು ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ಪ್ರಕಟಣೆ ಹೊರಡಿಸಿದ್ದು, ಕೆಲವು ಪರಿಶೀಲಿಸದ, ಪ್ರಚೋದನಕಾರಿ ಮತ್ತು ನಕಲಿ ಸಂದೇಶಗಳನ್ನು ಹರಡುವುದನ್ನು ಗಮನಿಸಲಾಗಿದೆ. ವಿಶೇಷವಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ಇಂತಹ ವಿಷಯಗಳನ್ನು ಹೆಚ್ಚಾಗಿ ಹರಡಲಾಗುತ್ತಿದೆ. ● 9ನೇ ಪುಟಕ್ಕೆ

ತಾತ–ಅಜ್ಜಿಗೆ 90.51 ಲಕ್ಷ ರೂ. ವಂಚಿಸಿದ ಮೊಮ್ಮಗ ಜೈಲು ಪಾಲು!

ತಲೆಮರೆಸಿಕೊಂಡಿರುವ ಅಳಿಯನಿಗೆ ಶೋಧ

ಮೈಸೂರು, ಜ. 20(ಆರ್‌ಕೆ)– ಕೈತುತ್ತು ಹಾಕಿ; ಸಾಕಿ–ಸಲುಹಿ, ಜವಾಬ್ದಾರಿಯುತ ಮನುಷ್ಯನನ್ನಾಗಿ ಮಾಡಿದ ಅಜ್ಜಿ–ತಾತನಿಗೆ 90,51,000 ರೂ. ಮೋಸ ಮಾಡಿದ್ದಲ್ಲದೆ, ಅವರ ಮೇಲೆ ತೀವ್ರ ಹಲ್ಲೆ ಮಾಡಿ ಪ್ರಾಣ ಬೆದರಿಕೆ ಹಾಕಿದ ಮೊಮ್ಮಗನನ್ನು ಬಂಧಿಸಿರುವ ಮೈಸೂರಿನ ಲಕ್ಷ್ಮೀಪುರಂ ಠಾಣೆ ಪೊಲೀಸರು, ಅಂತಿಮವಾಗಿ ಆತನನ್ನು ಜೈಲಿಗಟ್ಟಿದ್ದಾರೆ.

ಮೈಸೂರಿನ ಬನ್ನೂರು ರಸ್ತೆಯ ಕೆಬಿಎಲ್ ಬಡಾವಣೆ ನಿವಾಸಿ ಅಭಿಲಾಷ್ ಅಲಿಯಾಸ್ ತೇಜಸ್(33) ಬಂಧಿತ ಆರೋಪಿಯಾಗಿದ್ದು, ಆತನ ತಂದೆ ಟಿ.ಸಿ. ನಾಗರಾಜು(55) ತಲೆಮರೆಸಿಕೊಂಡಿದ್ದಾರೆ. ನಜರ್‌ಬಾದ್‌ನ ವಸಂತಮಹಲ್ ರಸ್ತೆಯ ಸೆಂಚುರಿ ಪಾರ್ಕ್ ಲೇಔಟ್ ನಿವಾಸಿಗಳಾದ ವಯೋವೃದ್ಧ ದಂಪತಿ ಶಂಕರಲಿಂಗಯ್ಯ (87) ಮತ್ತು ನಾಗರತ್ನ(80) ನೀಡಿದ ಲಿಖಿತ ದೂರಿನನ್ವಯ ಜನವರಿ 1ರಂದು ಅಳಿಯ ಮತ್ತು ಮೊಮ್ಮಗನ ವಿರುದ್ಧ ಐಪಿಸಿ ಸೆಕ್ಷನ್ 406, 420, 504 ಮತ್ತು 506 ರೀತ್ಯಾ ಪ್ರಕರಣ ದಾಖಲಿಸಿಕೊಂಡಿದ್ದರು. ತಮ್ಮ ಮಗಳ ಮಗನಾದ ಅಭಿಲಾಷ್ ವ್ಯಾಪಾರಕ್ಕೆಂದು ನಮ್ಮಿಂದ 90,51,000 ರೂ. ಹಣ ಪಡೆದುಕೊಂಡು, ಅದನ್ನು ವಾಪಸ್ ಕೊಡದೇ ಮೋಸ ಮಾಡಿದ್ದಾನೆ. 2023ರ ಡಿಸೆಂಬರ್ 15 ರಂದು ಮೊಮ್ಮಗ ● 9ನೇ ಪುಟಕ್ಕೆ



ಬಾಲರಾಮ ಮೂರ್ತಿಯ ಶಿಲಾ ಸ್ಥಳದಲ್ಲಿ ಶ್ರೀರಾಮಮಂದಿರ

- ನಾಳೆ ಭೂಮಿ ಪೂಜೆ: ಶಾಸಕ ಜಿ.ಟಿ.ದೇವೇಗೌಡ
- ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಅವರಿಂದಲೇ ಇಲ್ಲಿನ ಶ್ರೀರಾಮನ ಮೂರ್ತಿ ರೂಪಿಸಲು ನಿರ್ಧಾರ



ಸುದ್ದಿಗೋಷ್ಠಿಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಮಾತನಾಡಿದರು. ಚಿತ್ರದಲ್ಲಿ ಜಮೀನಿನ ಮಾಲೀಕರಾದ ರಾಮದಾಸ ಹಾಗೂ ಶಿಲೆ ಹೊರತೆಗೆಯುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಶ್ರೀನಿವಾಸ ಹಾಗೂ ಇತರರು ಉಪಸ್ಥಿತರಿದ್ದರು.

ನಮ್ಮ ಜಮೀನಿನಲ್ಲಿ ಮೂರ್ತಿಯ ಶಿಲೆ ದೊರೆತಿರುವುದು ಪೂರ್ವಜನ್ಮದ ಪುಣ್ಯ

ಜಮೀನಿನ ಮಾಲೀಕ ರಾಮದಾಸ ಧನ್ಯತಾಭಾವ

ಮೈಸೂರು, ಜ.20(ಆರ್‌ಕೆ)–ಅಯೋಧ್ಯೆಯ ರಾಮಮಂದಿರದಲ್ಲಿ ಪ್ರತಿಷ್ಠಾಪನೆಗೆ ಸಿದ್ಧವಾಗಿರುವ ರಾಮಲಲ್ಲಾ ಮೂರ್ತಿಗೆ ನಮ್ಮ ಜಮೀನಿನಲ್ಲಿ ಕಲ್ಲು ಸಿಕ್ಕಿರುವುದು ನಮ್ಮ ಪೂರ್ವಜನ್ಮದ ಪುಣ್ಯ ಎಂದು ಮೈಸೂರು ತಾಲೂಕು ಹಾರೋಹಳ್ಳಿ ಗ್ರಾಮದ ಜಮೀನು ಮಾಲೀಕ ರಾಮದಾಸ ತಿಳಿಸಿದ್ದಾರೆ. ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಶಾಸಕ ಜಿ.ಟಿ. ದೇವೇಗೌಡರೊಂದಿಗೆ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದ ಅವರು, ನಮ್ಮದು ಸಣ್ಣ ರೈತ ಕುಟುಂಬವಾಗಿದ್ದು, ತಾತ–ಮುತ್ತಾತರ ಕಾಲದಿಂದಲೂ ಕೃಷಿ ಮಾಡಿಕೊಂಡು ಬಂದಿದ್ದೇವೆ.

ಜಮೀನಿನಲ್ಲಿ ಸಣ್ಣ ಬಂಡೆ ಕಲ್ಲುಗಳಿದ್ದವು. ಕಲ್ಲನ್ನು ಒಡೆದು ಜಮೀನು ಸಮತಟ್ಟು ಮಾಡಲು ಮುಂದಾದಾಗ ಎಷ್ಟು ಅಗೆದರೂ ಬರೀ ಕಲ್ಲೇ ಸಿಗುತ್ತಿತ್ತು ಎಂದರು. ಆದರೆ, ಅಲ್ಲಿ ರಾಮಲಲ್ಲಾ ವಿಗ್ರಹಕ್ಕೆ ಕಲ್ಲು ಸಿಗುತ್ತದೆ ಎಂದು ನಾವು ಕನಸು–ಮನಸ್ಸಿನಲ್ಲೂ ನೆನೆಸಿರಲಿಲ್ಲ. ಮೇಲ್ನೋಟಕ್ಕೆ ಬಂಡೆ ಕಲ್ಲಿನಂತಿದ್ದ ಸ್ಥಳದಲ್ಲಿ ಈ ಗುಣಮಟ್ಟದ ಶಿಲೆ ದೊರೆತಿರುವುದು ಸಂತಸವಾಗಿದೆ ಎಂದ ಅವರು, ನಮ್ಮ ಜಮೀನಿನಲ್ಲಿ ಶ್ರೀರಾಮ ಮಂದಿರ ನಿರ್ಮಾಣಕ್ಕೆ ಎಷ್ಟು ಜಾಗ ಬೇಕೋ ಅಷ್ಟನ್ನೂ ಬಳಸಿಕೊಳ್ಳಬಹುದು. ತುಂಬಾ ಸಂತೋಷದಿಂದಲೇ ನಾವು ಜಾಗವನ್ನು ದೇವಸ್ಥಾನ ನಿರ್ಮಾಣಕ್ಕೆ ಕೊಡುತ್ತೇವೆ ಎಂದರು.

ಶಿಲೆಯನ್ನು ಭೂಮಿಯಿಂದ ಹೊರತೆಗೆಯುವಲ್ಲಿ ಪ್ರಮುಖ ಪಾತ್ರ ವಹಿಸಿದ ಶ್ರೀನಿವಾಸ ಮಾತನಾಡಿ, ಕಲ್ಲು ಹೊರತೆಗೆಯುವ ಕೆಲಸವನ್ನು ಪಾರಂಪರ್ಯವಾಗಿ ಮಾಡಿಕೊಂಡು ಬಂದಿರುವ ನಮಗೆ ರಾಮದಾಸರು ತಮ್ಮ ಜಮೀನಿನ ಕಲ್ಲನ್ನು ತೆಗೆದು ಉಳುಮೆ ಮಾಡಲು ಸಮತಟ್ಟು ● 9ನೇ ಪುಟಕ್ಕೆ

ಮೈಸೂರು, ಜ. 20(ಆರ್‌ಕೆ)– ಅಯೋಧ್ಯೆಯಲ್ಲಿ ನಿರ್ಮಿಸಿರುವ ಶ್ರೀರಾಮಮಂದಿರದಲ್ಲಿ ಪ್ರತಿಷ್ಠಾಪಿಸಲಾಗುತ್ತಿರುವ ರಾಮಲಲ್ಲಾ ವಿಗ್ರಹ ಶಿಲೆ ಸಿಕ್ಕ, ಮೈಸೂರು ತಾಲೂಕು, ಹಾರೋಹಳ್ಳಿ ಗ್ರಾಮದ ಜಮೀನಿನಲ್ಲಿ ಶ್ರೀರಾಮ ಮಂದಿರ ನಿರ್ಮಿಸಲಾಗುವುದು ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ತಿಳಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಜ.22ರಂದು ಶ್ರೀರಾಮಮಂದಿರ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಗುವುದು. ಉತ್ತರ ಪ್ರದೇಶದ ಅಯೋಧ್ಯೆಯ ರಾಮಮಂದಿರದಲ್ಲಿ ಪ್ರಾಣ ಪ್ರತಿಷ್ಠಾಪನೆಗೊಳ್ಳುತ್ತಿರುವ ಶ್ರೀರಾಮನ ವಿಗ್ರಹದ ಮಾದರಿಯಲ್ಲೇ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್‌ರಿಂದಲೇ ಮೂರ್ತಿ ಕೆತ್ತಿಸಲು ನಿರ್ಧರಿಸಲಾಗಿದೆ ಎಂದರು. ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ಮೈಸೂರು ತಾಲೂಕು ಹಾರೋಹಳ್ಳಿಯ ಸರ್ವೆ ನಂಬರ್ 196 ಮತ್ತು 197ರ 2.16 ಎಕರೆ ಜಮೀನು ಗ್ರಾಮದ ರಾಮದಾಸ ಎಂಬ ರೈತರದ್ದಾಗಿದ್ದು, ಇಲ್ಲಿ ಸಿಕ್ಕಿರುವ ಕೃಷ್ಣ ಶಿಲೆಯಲ್ಲಿ ರಾಮಲಲ್ಲಾ ವಿಗ್ರಹವನ್ನು ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಕೆತ್ತಿರುವುದು ಹೆಮ್ಮೆಯ ಸಂಗತಿ. ಅಯೋಧ್ಯೆಯಲ್ಲಿ ನಿರ್ಮಿಸಿರುವ ಶ್ರೀರಾಮಮಂದಿರದಲ್ಲಿ ಬಾಲರಾಮನ ಪ್ರಾಣಪ್ರತಿಷ್ಠಾಪನೆಯ ಪೂಜಾ ಕೈಂಕರ್ಯಗಳಲ್ಲೂ ಕರ್ನಾಟಕದ ಅರ್ಚಕರೇ ಭಾಗವಹಿಸುತ್ತಿರುವುದು ರಾಜ್ಯಕ್ಕೆ ಹೆಮ್ಮೆ ತಂದಿದೆ. ಹಾರೋಹಳ್ಳಿ ಪುಣ್ಯಭೂಮಿಯಲ್ಲಿ ದೊರೆತ ಶಿಲೆಯಲ್ಲಿ ಅರುಣ್ ಯೋಗಿರಾಜ್ ಕೆತ್ತಿರುವ ರಾಮಲಲ್ಲಾ ಮೂರ್ತಿಯನ್ನು ಪ್ರತಿಷ್ಠಾಪನೆಗೆ ಆಯ್ಕೆ ಮಾಡಿದ ನಂತರ ಪ್ರಧಾನಿ ನರೇಂದ್ರ ಮೋದಿ ಅವರೇ ಅಭಿನಂದನೆ ಸಲ್ಲಿಸಿರುವುದು ಮೈಸೂರಿನ ಹಿರಿಮೆ ಹೆಚ್ಚಿಸಿದೆ ● 9ನೇ ಪುಟಕ್ಕೆ

> “ಇದೊಂದು ಮಹಾ ಪುಣ್ಯ ಕಾರ್ಯ. ಈ ಕಾರ್ಯ ಮಾಡುವ ಭಾಗ್ಯ ಕಲ್ಪಿಸಿದಂತಹ ಶ್ರೀರಾಮ ಪ್ರಭುವಿಗೆ ಕೋಟಿ ನಮನಗಳು. ಆ ಜಗನ್ಮಾತೆ ಚಾಮುಂಡೇಶ್ವರಿಯ ಕೃಪೆಯಿಂದ ಇದೆಲ್ಲಾ ನೆರವೇರುತ್ತಿದೆ. ಆ ತಾಯಿಯ ಪ್ರೇರಣೆಯಂತೆ ಜನಸೇವೆ ಮಾಡುತ್ತಿದ್ದೇನೆ.
>
> –ಜಿ.ಟಿ.ದೇವೇಗೌಡ, ಶಾಸಕರು



ರಾಮಮಂದಿರ ನಿರ್ಮಾಣಕ್ಕೆ ಶಂಕುಸ್ಥಾಪನೆಯ ಸ್ಥಳವನ್ನು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಪರಿಶೀಲಿಸುತ್ತಿರುವುದು.

ರಾಮಲಲ್ಲಾ ಮೂರ್ತಿಗೆ ಬಳಸಿರುವುದು ಪುರಾತನ ಶ್ರೇಷ್ಠ ಶಿಲೆ: ಪ್ರೊ.ಸಿ.ಶ್ರೀಕಂಠಪ್ಪ

ಮೈಸೂರು, ಜ. 20(ಆರ್‌ಕೆ)– ರಾಮಲಲ್ಲಾ ಮೂರ್ತಿಗೆ ಬಳಸಿರುವುದು 3.5 ಬಿಲಿಯನ್‌ನಷ್ಟು ಪುರಾತನವಾದ ಶಿಲೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಭೂಗರ್ಭಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರೊ. ಸಿ. ಶ್ರೀಕಂಠಪ್ಪ ತಿಳಿಸಿದ್ದಾರೆ.

ಮೈಸೂರು ತಾಲೂಕು ಹಾರೋಹಳ್ಳಿ ಸುತ್ತಮುತ್ತಲ ಭೂಗರ್ಭದಲ್ಲಿ ದೊರೆಯುವ ಶಿಲೆಗಳ ಮೇಲೆ ಸಂಶೋಧನೆ ನಡೆಸಲಾಗಿದ್ದು, ರಾಮಲಲ್ಲಾ ಮೂರ್ತಿಗೆ ಬಳಸಿದ ಶಿಲೆಯು ರೂಪಾಂತರಿ ಕಲ್ಲು ಭೂಗರ್ಭದಲ್ಲಾಗುವ ಅನೇಕ ಬದಲಾವಣೆಗೆ ಒಗ್ಗಿಕೊಂಡಿರುವ ಈ ಶಿಲೆಯು ಹಿಂದೆ ಅಗ್ನಿಶಿಲೆಯಾಗಿದ್ದು, ಕಾಲಾನಂತರ ಪರಿವರ್ತನೆಯಾಗಿದೆ ಎಂದು ಅವರು ತಿಳಿಸಿದ್ದಾರೆ. ಅದನ್ನು ಬಳಪದ ಕಲ್ಲು ಎಂದೂ ಹೇಳಲಾಗುತ್ತದೆ. ಮೆದುವಾದ ಗುಣ ಹೊಂದಿರುವ ಈ ಶಿಲೆಯು ಹೆಚ್.ಡಿ.ಕೋಟೆ, ನಂಜನಗೂಡಿನ ಹಲವು ಭಾಗಗಳ ಭೂಗರ್ಭದಲ್ಲಿ ಸಿಗುತ್ತದೆ. ದೇವರ ಮೂರ್ತಿ ಕೆತ್ತಲು ಯೋಗ್ಯವಾದ ಈ ಕಲ್ಲನ್ನು ಯೂರೋಪ್ ದೇಶಗಳಲ್ಲಿ ಹೆಚ್ಚಾಗಿ ಬಳಸಲಾಗುತ್ತದೆ. ಇಂತಹ ಶಿಲೆಯು ಅಯೋಧ್ಯೆಯಲ್ಲಿ ರಾಮಲಲ್ಲಾ ಮೂರ್ತಿಯಾಗಿ ಪ್ರತಿಷ್ಠಾನೆಯಾಗುತ್ತಿರುವುದು ಸಂತಸ ತಂದಿದೆ ಎಂದು ಅವರು ನುಡಿದರು.

ಲೋಕಸಭಾ ಚುನಾವಣೆಯಲ್ಲಿ ಅಧಿಕ ಸ್ಥಾನ ಗೆಲ್ಲಿಸಿ ಪಕ್ಷಕ್ಕೆ ಬಲ ತುಂಬಿ

- ರಾಜ್ಯ ಬಿಜೆಪಿ ನಾಯಕರಿಗೆ ಪ್ರಧಾನಿ ನರೇಂದ್ರ ಮೋದಿ ಸಲಹೆ
- ವಿಮಾನ ನಿಲ್ದಾಣದಲ್ಲಿ ಗೆಲುವಿಗೆ ರಣತಂತ್ರಕ್ಕೆ ಸೂಚನೆ
- ರಾಜ್ಯ ಕಾಂಗ್ರೆಸ್ ಸರ್ಕಾರದ ವೈಫಲ್ಯಗಳ ವಿರುದ್ಧ ಹೋರಾಡಿ



ಬೆಂಗಳೂರು, ಜ.20(ಕೆಎಂಶಿ)– ರಾಜ್ಯ ಸರ್ಕಾರದ ವೈಫಲ್ಯಗಳ ವಿರುದ್ಧ ಬೀದಿಗಿಳಿದು ಹೋರಾಟ ನಡೆಸಿ, ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಿಂದ ಹೆಚ್ಚು ಸ್ಥಾನ ಗೆಲ್ಲಿಸಿ, ಪಕ್ಷಕ್ಕೆ ಬಲ ತುಂಬಿ ಎಂದು ಪ್ರಧಾನಿ ನರೇಂದ್ರ ಮೋದಿ ಬಿಜೆಪಿ ನಾಯಕರಿಗೆ ಸೂಚಿಸಿದ್ದಾರೆ.

ಅಧಿಕೃತ ಕಾರ್ಯಕ್ರಮ ನಿಮಿತ್ತ ಶುಕ್ರವಾರ ರಾಜ್ಯಕ್ಕೆ ಆಗಮಿಸಿದ್ದ ಪ್ರಧಾನಿ ಅವರು, ದೆಹಲಿಗೆ ವಾಪಸಾಗುವ ಮುನ್ನ ವಿಮಾನ ನಿಲ್ದಾಣದಲ್ಲಿ ಬಿಜೆಪಿ ನಾಯಕರೊಂದಿಗೆ ಚುನಾವಣಾ ರಣತಂತ್ರ ಕುರಿತು ಚರ್ಚೆ ಮಾಡಿದ್ದಾರೆ.

ಕಳೆದ ಬಾರಿ ಕರ್ನಾಟಕದಲ್ಲಿ ಒಗ್ಗಟ್ಟಿನಿಂದ ಹೋರಾಡಿ, ಹಿಂದೆಂದಿಗಿಂತಲೂ ಹೆಚ್ಚಿನ ಸ್ಥಾನಗಳಲ್ಲಿ ಜಯಗಳಿಸಿ, ನಮ್ಮ ಕೈ ಬಲ ಪಡಿಸಿದ್ದೀರಿ. ಪೂರ್ಣ ಪ್ರಮಾಣದ ಕಾಂಗ್ರೆಸ್ ಆಡಳಿತ ರಾಜ್ಯದಲ್ಲಿದ್ದು ಅವರೂ ಕರ್ನಾಟಕದಿಂದ ಹೆಚ್ಚು ಸ್ಥಾನಗಳನ್ನು ಗೆಲ್ಲಲು ಪ್ರಯತ್ನಿಸುವುದು ಸಹಜ. ನೀವೂ ಒಗ್ಗಟ್ಟಿನಿಂದ ಹೋರಾಟ ಮಾಡಿ ಕಳೆದ ಬಾರಿಗಿಂತ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲಲು ಪ್ರಯತ್ನಿಸಿ ಎಂದಿದ್ದಾರೆ.

ನಿಮಗೆ ಎಲ್ಲಾ ಸಹಕಾರ ನೀಡುತ್ತೇವೆ. ಅದನ್ನು ಸದುಪಯೋಗಪಡಿಸಿಕೊಂಡು ನೀವು ಹೆಚ್ಚು ಸ್ಥಾನಗಳನ್ನು ಗೆಲ್ಲುವ ಪಣ ತೊಡಿ ಎಂದಿದ್ದಾರೆ. ಕಲಬುರಗಿ ವಿಮಾನ ನಿಲ್ದಾಣದಲ್ಲಿ ಕೆಲಕಾಲ ತಂಗಿದ್ದ ಸಂದರ್ಭದಲ್ಲೂ ಆ ಭಾಗಕ್ಕೆ ಸೇರಿದ ಪಕ್ಷದ ಮುಖಂಡರಿಗೂ ಇದೇ ಸಲಹೆ–ಸೂಚನೆಗಳನ್ನು ನೀಡಿದ್ದಾರೆ.

> **"ವೈಮನಸ್ಸುಗಳನ್ನು ಬಿಡಿ, ಚುನಾವಣೆ ಎದುರಿಸಲು ಈಗಿನಿಂದಲೇ ಸಂಘಟನಾತ್ಮಕವಾಗಿ ಹೋರಾಟ ನಡೆಸಿ, ವಿರೋಧಿಗಳನ್ನು ವೈಯಕ್ತಿಕವಾಗಿ ನಿಂದಿಸಬೇಡಿ. ಯಾವುದೇ ಜಾತಿ, ಮತ, ಧರ್ಮಗಳ ವಿರುದ್ಧ ಹೇಳಿಕೆಗಳನ್ನು ನೀಡಬೇಡಿ, ಸರ್ಕಾರದ ವೈಫಲ್ಯಗಳನ್ನು ಎತ್ತಿ ತೋರಿಸುವ ಕೆಲಸ ಮಾಡಿ. ಕೇಂದ್ರ ಸರ್ಕಾರದ ಜನಪರ ಕಾರ್ಯಕ್ರಮಗಳನ್ನು ಮನೆ–ಮನೆ ಬಾಗಿಲಿಗೆ ತಲುಪಿಸುವ ಕೆಲಸ ಮಾಡಿ.**
> **–ನರೇಂದ್ರ ಮೋದಿ, ಪ್ರಧಾನಿ**

ವಿಮಾನ ನಿಲ್ದಾಣದಲ್ಲಿ ನಡೆದ ಸಭೆಗೆ ಜೆಡಿಎಸ್ ರಾಜ್ಯಾಧ್ಯಕ್ಷ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರಿಗೂ ಆಹ್ವಾನವಿತ್ತು. ಆದರೆ ಅನಾರೋಗ್ಯದಿಂದಾಗಿ ಸಭೆಗೆ ಹಾಜರಾಗಲು ಆಗಲಿಲ್ಲ. ಉಳಿದಂತೆ ವಿಧಾನಸಭೆಯಲ್ಲಿನ ಪ್ರತಿಪಕ್ಷದ ನಾಯಕ ಆರ್.ಅಶೋಕ್, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಡಿ.ವಿ.ಸದಾನಂದಗೌಡ, ಸಂಸದ ತೇಜಸ್ವಿ ಸೂರ್ಯ ಸೇರಿದಂತೆ ವಿಧಾನಸಭೆ ಮತ್ತು ಪರಿಷತ್‌ನ ಕೆಲವು ಹಿರಿಯ ಸದಸ್ಯರು ಹಾಜರಿದ್ದರು. ಸುಮಾರು 30 ರಿಂದ 40 ನಿಮಿಷಗಳ ಕಾಲ ಚುನಾವಣೆಗೆ ಸಂಬಂಧಿಸಿದಂತೆ ಪ್ರಧಾನಿ ಚರ್ಚೆ ನಡೆಸಿದ್ದಾರೆ.

ವಾರ್ಡ್ ಸಮಿತಿ ರಚನೆ, ಫುಟ್‌ಪಾತ್ ಅಕ್ರಮ ಒತ್ತುವರಿ ತೆರವಿಗೆ ಆಗ್ರಹಿಸಿ

ಮೈಸೂರು ಪಾಲಿಕೆ ಮುಂದೆ ಗ್ರಾಹಕರ ಪರಿಷತ್ ಪ್ರತಿಭಟನೆ

- ಘೋಷಣಾ ಫಲಕ ಪ್ರದರ್ಶಿಸಿ ಅಧಿಕಾರಿಗಳಿಗೆ ಎಚ್ಚರಿಕೆ
- ಅಧಿಕಾರಿಗಳ ಬಳಿ ಹೋಗುವುದಿಲ್ಲವೆಂದು ಪಟ್ಟು
- ಪ್ರತಿಭಟನಾ ಸ್ಥಳಕ್ಕೆ ಬಾರದೆ ಅಧಿಕಾರಿಗಳ ಉದ್ಧಟತನ
- ಜನರ ನಿರಾಸಕ್ತಿಗೆ ಪರಿಷತ್ ಪದಾಧಿಕಾರಿಗಳ ಆಕ್ರೋಶ

ಮೈಸೂರು, ಜ.20(ಬಿಎಲ್‌ಯು)– ಮೈಸೂರು ನಗರಪಾಲಿಕೆಯಲ್ಲಿ ವಾರ್ಡ್ ಸಮಿತಿ ರಚನೆ, ಫುಟ್‌ಪಾತ್ ಅಕ್ರಮ ಒತ್ತುವರಿ ತೆರವು ಸೇರಿದಂತೆ ನಗರದ ಹಲವು ಸಮಸ್ಯೆ ಪರಿಹಾರಕ್ಕೆ ಆಗ್ರಹಿಸಿ ಮೈಸೂರು ಗ್ರಾಹಕರ ಪರಿಷತ್‌ನವರು ಮೈಸೂರು ನಗರಪಾಲಿಕೆ ಪ್ರಧಾನ ಕಚೇರಿ ಮುಂದೆ ಇಂದು ಪ್ರತಿಭಟನೆ ನಡೆಸಿದರು.

ಗ್ರಾಹಕರನ್ನು ರಾಜನನ್ನಾಗಿ ಮಾಡಿ, ಮತದಾರರು ಯಜಮಾನರೇ ಹೊರತು ಸೇವಕರಲ್ಲ... ಘೋಷಣಾ ಫಲಕ ಹಿಡಿದು ಪ್ರತಿಭಟನೆ ನಡೆಸಿದ ಮೈಸೂರು ಗ್ರಾಹಕರ ಪರಿಷತ್‌ನವರು, ಜಢತ್ವ ಹೊಂದಿರುವ ಮೈಸೂರು ನಗರಪಾಲಿಕೆ ಆಡಳಿತಕ್ಕೆ ಚುರುಕು ಮುಟ್ಟಿಸಿದರು.

ಪ್ರತಿಭಟನೆಗಳು ಅಂದರೆ ಸಾಮಾನ್ಯವಾಗಿ ಏರುಧ್ವನಿಯ ಘೋಷಣೆಗಳಿರುತ್ತವೆ. ಆದರೆ ಮೈಸೂರು ಗ್ರಾಹಕರ ಪರಿಷತ್‌ನವರು ಘೋಷಣೆ ಕೂಗಲಿಲ್ಲ. ಬದಲಿಗೆ ನಗರಪಾಲಿಕೆಯ ಬೇಜವಾಬ್ದಾರಿತನ ಯಾವ ರೀತಿ ಇದೆ ಎಂಬುದನ್ನು ಘೋಷಣಾ ಫಲಕಗಳ ಮೂಲಕ ಪ್ರದರ್ಶಿಸಿದರು. ಈ ಮೂಲಕ ಜನ ಸಾಮಾನ್ಯರಲ್ಲಿ ಕೂಡ ಪರಿಣಾಮಕಾರಿ ಜಾಗೃತಿ ಮೂಡಿಸುವ ಪ್ರಯತ್ನ ಮಾಡಿದರು.

ಏಳಿ, ಎದ್ದೇಳಿ ಜವಾಬ್ದಾರಿಯುತ ಪೌರತ್ವವನ್ನು ಪ್ರಚಾರಗೊಳಿಸಲು ನಿಮ್ಮನ್ನು ನೀವೇ ತೊಡಗಿಸಿಕೊಳ್ಳಿ... ಘೋಷವಾಕ್ಯದೊಂದಿಗೆ ಜನರನ್ನು ಕೂಡ ಎಚ್ಚರಿಸಿದರು.

ಈ ವೇಳೆ ಮಾತನಾಡಿದ ಮೈಸೂರು ಗ್ರಾಹಕರ ಪರಿಷತ್ ಸಂಸ್ಥಾಪಕರೂ ಆದ ಸಂಚಾಲಕ ಡಾ.ಭಾಮಿ ವಿ.ಶೆಣೈ, ವಾರ್ಡ್ ಸಮಿತಿ ರಚನೆ ಮಾಡುವಂತೆ ಹೈಕೋರ್ಟ್ ನಿರ್ದೇಶನ ನೀಡಿದೆ. ಈ ಹಿನ್ನೆಲೆಯಲ್ಲಿ ವಾರ್ಡ್ ಸಮಿತಿ ರಚಿಸುವಂತೆ ಇಲ್ಲಿ ತನಕ ಅಧಿಕಾರದಲ್ಲಿದ್ದ ನಗರಪಾಲಿಕೆಯ ಐವರು ಆಯುಕ್ತರಿಗೆ ಮನವಿ ಮಾಡಿದ್ದೆವು. ಆದರೂ ಈ ತನಕ ವಾರ್ಡ್ ಸಮಿತಿ ರಚನೆ ಮಾಡಿಲ್ಲ. ಈ ಮೂಲಕ ಜನ ಸಾಮಾನ್ಯರ ಬೇಡಿಕೆಗೆ ಕಿಂಚಿತ್ತೂ ಸ್ಪಂದಿಸುತ್ತಿಲ್ಲ ಎಂದು ಆರೋಪಿಸಿದರು.

ಮೈಸೂರು ನಗರದ ಬಹುತೇಕ ಕಡೆ ಫುಟ್‌ಪಾತ್ ಹಾಗೂ ಉದ್ಯಾನವನಗಳನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಇದನ್ನು ತೆರವು ಮಾಡುವ ಪ್ರಯತ್ನ ಕೂಡ ಮಾಡಿಲ್ಲ. ಏಕಬಳಕೆ ಪ್ಲಾಸ್ಟಿಕ್ ಬಳಸುವಂತಿಲ್ಲ ಎಂದು ಕಾನೂನು ಇದ್ದರೂ ಪಾಲಿಕೆ ಇದಕ್ಕೆ ಕಡಿವಾಣ ಹಾಕಿಲ್ಲ ಎಂದು ಆಪಾದಿಸಿದರು.

ಇಂತಹ ಹತ್ತು ಹಲವು ಸಮಸ್ಯೆ ಬಗ್ಗೆ ತಿಳಿಸಲು ಅಧಿಕಾರಿಗಳು ಕೈಗೆ ಸಿಗುವುದಿಲ್ಲ. ಭೇಟಿಗೆ ಸಮಯ ನಿಗದಿ ಮಾಡಿದ್ದರೂ ಆ ವೇಳೆ ಕಚೇರಿಯಲ್ಲಿರುವುದಿಲ್ಲ. ಒಂದು ವೇಳೆ ಭೇಟಿ ಮಾಡಿ ಸಮಸ್ಯೆ ತಿಳಿಸಿದರೂ ಇದೆಲ್ಲಾ ಚಿಕ್ಕ ವಿಚಾರ ಎಂದು ಬೇಜವಾಬ್ದಾರಿ ತೋರುತ್ತಾರೆ ಎಂದು ಡಾ.ಭಾಮಿ ವಿ.ಶೆಣೈ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಸಮಸ್ಯೆ ಮುಂದಿಟ್ಟುಕೊಂಡು ನಡೆಸುತ್ತಿರುವ ನಮ್ಮ ಪ್ರತಿಭಟನೆಗೆ ಜನರು ಬೆಂಬಲ ನೀಡುತ್ತಿಲ್ಲ. ಪ್ರಜೆಗಳಾದ ನಾವು ಪ್ರಭುಗಳು ಎಂಬುದನ್ನು ಮರೆತು ಸಾರ್ವಜನಿಕ ಸೇವೆಗೆ ಮೀಸಲಾದ ಅಧಿಕಾರಿಗಳ ಭೇಟಿಗೆ ಗಂಟೆಗಟ್ಟಲೆ ಕಾಯುತ್ತಾರೆ. ಅಧಿಕಾರಿಗಳಿಗೆ ಬಿಸಿ ಮುಟ್ಟಿಸಲು ನಾವು ನಡೆಸುವ ಪ್ರತಿಭಟನೆಯಲ್ಲಿ ಭಾಗವಹಿಸದೆ ನಿರಾಸಕ್ತಿ ತೋರಿದ್ದಾರೆ ಎಂದು ಕಿಡಿಕಾರಿದರು.

ನಿವೃತ್ತ ಮೇಜರ್ ಜನರಲ್ ಎಸ್.ಜಿ.ಒಂಬತ್ಕೆರೆ, ಆದಿತ್ಯ ಅಧಿಕಾರಿ ಆಸ್ಪತ್ರೆಯ ವ್ಯವಸ್ಥಾಪಕ ಪಾಲುದಾರ ಡಾ.ಎನ್.ಚಂದ್ರಶೇಖರ್, ಪರಿಸರ ಬಳಗದ ಪರಶುರಾಮೇಗೌಡ, ನಿವೃತ್ತ ಪ್ರಾಂಶುಪಾಲ ಡಾ.ಎಸ್.ಶಾಂಭಶಿವನ್, ನಿವೃತ್ತ ಪ್ರಾಧ್ಯಾಪಕ ಆರ್.ಅಹ್ಮದ್, ಎಎಪಿಯ ಮಾಳವಿಕ ಗುಬ್ಬಿವಾಣಿ, ಕರ್ನಾಟಕ ಬ್ಯಾಂಕ್ ನಿವೃತ್ತ ಅಧಿಕಾರಿ ರಾಮಚಂದ್ರ ಪ್ರತಿಭಟನೆಯಲ್ಲಿದ್ದರು.



ಮೈಸೂರು ನಗರ ಪಾಲಿಕೆ ವಾರ್ಡ್ ಸಮಿತಿ ರಚನೆ ಸೇರಿದಂತೆ ಹಲವು ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮೈಸೂರು ಗ್ರಾಹಕರ ಪರಿಷತ್‌ನವರು ಪಾಲಿಕೆ ಪ್ರಧಾನ ಕಚೇರಿ ಮುಂದೆ ಶನಿವಾರ ಪ್ರತಿಭಟನೆ ನಡೆಸಿದರು.

ಮೈಸೂರು ನಗರವನ್ನು ಸುಂದರ ನಗರವನ್ನಾಗಿಸದೆ, ಅಕ್ರಮಗಳ ನಗರವಾಗಿಸುತ್ತಿರುವ ಅಧಿಕಾರಿಗಳಿಗೆ ಧಿಕ್ಕಾರ, ನಿಯಮಗಳನ್ನು ಸಮಾಜದ ಒಳಿತಿಗಾಗಿ ಬಳಸದೆ, ಅಕ್ರಮ ಲಾಭಕ್ಕಾಗಿ ಬಳಸಿಕೊಳ್ಳುತ್ತಿರುವ ಅಧಿಕಾರಿಗಳಿಗೆ ಧಿಕ್ಕಾರ, ಲಂಚದ ಆಸೆಗೆ ಅಕ್ರಮ ಕಟ್ಟಡಗಳಿಗೆ ಅವಕಾಶ ಮಾಡಿಕೊಡುತ್ತಿರುವ ಅಧಿಕಾರಿಗಳಿಗೆ ಧಿಕ್ಕಾರ, ಅಕ್ರಮ ಕಟ್ಟಡಗಳ ನಿರ್ಮಾಣವನ್ನು ಪ್ರಾರಂಭದಲ್ಲೇ ತಡೆಯದೆ, ಕುಲಕರ್ಣಿಯಂತಹ ಪ್ರಾಮಾಣಿಕ ಜೀವಗಳು ಬಲಿಯಾಗುವಂತೆ ಬೇಜವಾಬ್ದಾರಿ ತೋರುತ್ತಿರುವ ಅಧಿಕಾರಿಗಳಿಗೆ ಧಿಕ್ಕಾರ ಘೋಷಣಾ ಫಲಕಗಳನ್ನು ಹಿಡಿದಿದ್ದರು. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು. ಇದರಿಂದ ಪಾಲಿಕೆ ಅಧಿಕಾರಿಗಳ ಬಳಿ ಹೋಗಿ ನಾವು ಮನವಿ ಪತ್ರ ಸಲ್ಲಿಸುವುದಿಲ್ಲ. ನಗರಪಾಲಿಕೆ ಅಧಿಕಾರಿಗಳೇ ಪ್ರತಿಭಟನಾ ಸ್ಥಳಕ್ಕೆ ಬರಬೇಕೆಂದು ಮೈಸೂರು ಗ್ರಾಹಕರ ಪರಿಷತ್‌ನವರು ಪಟ್ಟು ಹಿಡಿದರು. ಆದರೆ ಬೆಳಿಗ್ಗೆ 10ರಿಂದ 12 ಗಂಟೆ ತನಕ ಪ್ರತಿಭಟನೆ ನಡೆಸಿದರೂ ನಗರ ಪಾಲಿಕೆಯ ಯಾವ ಅಧಿಕಾರಿಯೂ ಬಂದು ಮನವಿ ಸ್ವೀಕರಿಸಲಿಲ್ಲ. ಪ್ರತಿಭಟನೆ ಏಕೆ ನಡೆಸುತ್ತಿದ್ದಾರೆ ಎಂದು ಸೌಜನ್ಯಕ್ಕೂ ಪ್ರತಿಭಟನಾನಿರತರನ್ನು ಭೇಟಿ ಮಾಡಲಿಲ್ಲ. ಕೊನೆಗೆ ನಗರ ಪಾಲಿಕೆ ಅಧಿಕಾರಿಗಳ ಜನ ವಿರೋಧಿ ಧೋರಣೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಅಲ್ಲಿಂದ ನಿರ್ಗಮಿಸಿದರು.

ಅಮೂಲ್ಯ ಮರಗಳ ಸಂರಕ್ಷಣೆಗೆ ಜಿಯೋ ಟ್ಯಾಗ್‌ಗೆ ಸೂಚನೆ



ಬೆಂಗಳೂರು, ಜ.20(ಕೆಎಂಶಿ)– ಶ್ರೀಗಂಧ, ಬೀಟೆ, ತೇಗದ ಮರಗಳನ್ನು ಅಕ್ರಮವಾಗಿ ಕಡಿಯುವುದನ್ನು ತಡೆಗಟ್ಟಲು ಹಾಗೂ ಅಮೂಲ್ಯ ವೃಕ್ಷ ಸಂಪತ್ತಿನ ಸಂರಕ್ಷಣೆಗೆ ಮರಗಳ ಜಿಯೋ ಟ್ಯಾಗ್‌ಗೆ ಸೂಚಿಸಲಾಗಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಖಾತೆ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

ಗ್ರಾಮಗಳಿಗೆ ಹೊಂದಿಕೊಂಡ ಕಾಡಂಚಿನ ಎಲ್ಲ ಜಮೀನಿನಲ್ಲಿನ ವನಪ್ರದೇಶ, ಪಟ್ಟಾ ಭೂಮಿ ಮತ್ತು ಸರ್ಕಾರಿ ಜಮೀನಿನಲ್ಲಿರುವ ಬೀಟೆ (ರೋಸ್‌ವುಡ್), ತೇಗ (ಟೀಕ್) ಮತ್ತು ಶ್ರೀಗಂಧ (ರಕ್ತಚಂದನ) ಮರಗಳಿಗೆ 3 ತಿಂಗಳ ಅವಧಿಯೊಳಗೆ ಜಿಯೋ ಟ್ಯಾಗ್ ಮಾಡಿ ವಲಯವಾರು ಪಟ್ಟಿ ಸಲ್ಲಿಸುವಂತೆ ಆದೇಶಿಸಲಾಗಿದೆ.

ಹಾಸನ ಜಿಲ್ಲೆ ಬೇಲೂರು ತಾಲೂಕು, ನಂದಗೋಡನಹಳ್ಳಿ, ಸಕಲೇಶಪುರದ ಕೌಡಳ್ಳಿ ಮತ್ತು ಉತ್ತರಕನ್ನಡ ಜಿಲ್ಲೆಯ ಇಡಗುಂದಿ ಸೇರಿದಂತೆ ಹಲವೆಡೆ ಇತ್ತೀಚೆಗೆ ಅಕ್ರಮವಾಗಿ ನೂರಾರು ಅಮೂಲ್ಯ ಮರಗಳನ್ನು ಕಡಿದ ಪ್ರಕರಣಗಳು ಬೆಳಕಿಗೆ ಬಂದಿವೆ. ಶುಂಠಿ ಬೆಳೆ ಹೆಸರಲ್ಲಿ ಮರಗಳ ಹನನ ಆಗುತ್ತಿರುವುದನ್ನು ತಪ್ಪಿಸಲು ಶ್ರೀಗಂಧ, ತೇಗ ಮತ್ತು ಬೀಟೆ ಮರಗಳ ಜಿಯೋ ಟ್ಯಾಗ್ ಮಾಡಿಸುವಂತೆ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಸಚಿವರು ಪತ್ರ ಬರೆದು ತಿಳಿಸಿದ್ದಾರೆ.

ಅರಣ್ಯದೊಳಗೆ ಬೆಲೆ ಬಾಳುವ ಮರ ಕಡಿದು ಸಾಗಾಟ ಮಾಡಲು ಸಾಧ್ಯವಾಗದಂತೆ ಕಳ್ಳಬೇಟೆ ನಿಗ್ರಹ ತಂಡಗಳನ್ನು ನಿಯೋಜಿಸಲಾಗಿದೆ, ಆದರೂ, ಕಾಡಂಚಿನಲ್ಲಿ ಮತ್ತು ಸರ್ಕಾರಿ ಭೂಮಿಯಲ್ಲಿ, ಅರಣ್ಯ ಇಲಾಖೆ ಗುತ್ತಿಗೆ ನೀಡಿರುವ ಎಸ್ಟೇಟ್ ಹಾಗೂ ಪಟ್ಟಾ ಜಮೀನಿನಲ್ಲಿರುವ ಬೆಲೆ ಬಾಳುವ ವೃಕ್ಷಗಳ ಸಂರಕ್ಷಣೆ ಅರಣ್ಯ ಇಲಾಖೆಗೆ ಸವಾಲಾಗಿದೆ. ಈ ಹಿನ್ನೆಲೆಯಲ್ಲಿ ಜಿಯೋ ಟ್ಯಾಗ್ ಮಾಡಿದರೆ ವೃಕ್ಷ ಸಂರಕ್ಷಣಾ ಕಾಯಿದೆಯಡಿ ಪೂರ್ವಾನುಮತಿ ಪಡೆಯದೆ ಮರಗಳನ್ನು ಕಡಿಯಲು ಸಾಧ್ಯವಿಲ್ಲ ಎಂದಿದ್ದಾರೆ.

ಶಕ್ತಿಧಾಮದಿಂದ ಮಹಿಳೆ ನಾಪತ್ತೆ

ಮೈಸೂರು,ಜ.20(ಎಂಕೆ)–ಮೈಸೂರಿನ ಶಕ್ತಿಧಾಮದಲ್ಲಿ ಆಶ್ರಯ ಪಡೆದಿದ್ದ ವಿಶೇಷಚೇತನ ಮಹಿಳೆಯೊಬ್ಬರು ನಾಪತ್ತೆಯಾಗಿರುವ ಘಟನೆ ನಡೆದಿದೆ. ಸವಿತಾ(25) ನಾಪತ್ತೆಯಾಗಿರುವ ಮಹಿಳೆ. ಅವರಿಗೆ ಮಾತು ಬರುವುದಿಲ್ಲ ಹಾಗೂ ಕಿವಿ ಕೇಳುವುದಿಲ್ಲವೆಂದು ಜ.15ರಂದು ಉದಯಗಿರಿ ಪೊಲೀಸ್ ಠಾಣೆಯಿಂದ ಕರೆತಂದು ತಾತ್ಕಾಲಿಕ ಆಶ್ರಯಕ್ಕಾಗಿ ಶಕ್ತಿಧಾಮಕ್ಕೆ ಬಿಡಲಾಗಿತ್ತು. ಆದರೆ ಜ.17ರಂದು ಸಂಜೆ 4 ಗಂಟೆ ವೇಳೆಗೆ ರೂಂನಿಂದ ಎದ್ದು ಹೋಗಿರುವ ಸವಿತಾ ಅವರನ್ನು ಶಕ್ತಿಧಾಮ ಆವರಣವನ್ನೆಲ್ಲಾ ಹುಡುಕಿದರೂ ಪತ್ತೆಯಾಗಿಲ್ಲ ಎಂದು ಶಕ್ತಿಧಾಮದ ದೇವಮ್ಮ ಎಂಬುವರು ಕೃಷ್ಣರಾಜ ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಮಾಹಿತಿ ದೊರೆತಲ್ಲಿ ಕೆ.ಆರ್.ಪೊಲೀಸ್ ಠಾಣೆ ದೂ.ಸಂ.0821–2418319, 2418519 ಹಾಗೂ ಕಂಟ್ರೋಲ್ ರೂಂ ನಂ. 0821–2418339ಗೆ ಸಂಪರ್ಕಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ಕೋರಲಾಗಿದೆ.

ವಿಕಲಚೇತನರಿಗೆ ಕೃತಕ ಕೈ-ಕಾಲು ಜೋಡಣೆ



ವಿವಿಧ ಸಂಸ್ಥೆಗಳ ವತಿಯಿಂದ ವಿಕಲಚೇತನರಿಗೆ ಕೃತಕ ಅಂಗಾಂಗ ವಿತರಿಸಲಾಯಿತು.

ಮೈಸೂರು,ಜ.20–ದೇಶದಲ್ಲಿ ಸೇವಾ ಮನೋಭಾವವುಳ್ಳ ಸೇವಾ ಸಂಸ್ಥೆಗಳ ಸಂಖ್ಯೆ ಹೆಚ್ಚಳವಾಗಬೇಕು. ಆಗ ಜನರಿಗೆ ಅನುಕೂಲವಾಗುತ್ತದೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅಭಿಪ್ರಾಯಪಟ್ಟರು.

ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಲಯನ್ಸ್ ಅಂತರರಾಷ್ಟ್ರೀಯ ಸೇವಾ ಸಂಸ್ಥೆ, ಜೈನ್ ಮಿಲನ್ ಚಾರಿಟಬಲ್ ಟ್ರಸ್ಟ್, ನಾರಾಯಣ ಸೇವಾ ಸಂಸ್ಥಾನ, ಬಳ್ಳಾರಿಯ ಶ್ರೀಗುರು ಪುಷ್ಕರ ಜೈನ್ ಸೇವಾ ಸಮಿತಿ ಸಹಯೋಗದಲ್ಲಿ ನಡೆದ ವಿಕಲಚೇತನರಿಗೆ ಕೃತಕ ಕೈ–ಕಾಲುಗಳ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸ್ವಾರ್ಥವೇ ತುಂಬಿರುವ ಸಮಾಜದಲ್ಲಿ ನಿಸ್ವಾರ್ಥ ಸೇವೆ ಮಾಡುವ ಇಂತಹ ಸಂಸ್ಥೆಗಳ ಸೇವೆ ಮೆಚ್ಚುವಂತಹದ್ದು. ಚುನಾವಣೆಯಲ್ಲಿ ಗೆಲ್ಲುವ ಸಲುವಾಗಿ ರಾಜಕಾರಣಿಗಳು ಸಾಮಾಜಿಕ ಕಾರ್ಯಕ್ರಮ ಮಾಡುತ್ತಾರೆ. ಆದರೆ ಇಂತಹ ಸಂಸ್ಥೆಗಳ ನಿಸ್ವಾರ್ಥ ಸೇವೆ ದೇವರು ಮೆಚ್ಚುವಂತಹದ್ದು. ಯಾವುದೇ ಜಾತಿ ಭೇದವಿಲ್ಲದೇ ಸುಮಾರು 400 ಮಂದಿಗೆ ಕೃತಕ ಅಂಗಾಂಗಗಳ ಜೋಡಣೆ ಮಾಡುತ್ತಿದ್ದಾರೆ. ಸರ್ಕಾರವೇ ಎಲ್ಲವನ್ನೂ ಮಾಡಲೂ ಸಾಧ್ಯವಿಲ್ಲದ ಕಾರಣ ಇಂತಹ ಕಾರ್ಯಗಳಿಗೆ ದಾನಿಗಳು ಕೈಗೂಡಿಸಬೇಕು ಎಂದ ಅವರು, ಇಂತಹ ಕಾರ್ಯಕ್ಕೆ ವೈಯಕ್ತಿಕವಾಗಿ ತಾವು ಲಕ್ಷ ರೂ. ದೇಣಿಗೆ ನೀಡುವುದಾಗಿ ತಿಳಿಸಿದರು.

ಈ ವೇಳೆ ಲಯನ್ ಹೇಮಂತ್‌ಕುಮಾರ್ ಬನ್ಸಾಲಿ, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಕಾರ್ಪೊರೇಟರ್ ಶಿವಣ್ಣ, ಟಿ.ಸುರೇಶ್ ಗೋಲ್ಡ್, ಲಯನ್ ಸುಬ್ರಹ್ಮಣ್ಯ, ಪ್ರಮೀಳಾ ಎಸ್.ಆಚಾರ್, ಮುಖೇಶ್ ಕುಮಾರ್ ಶರ್ಮಾ, ಅಶೋಕ್ ಭಂಡಾರಿ, ಗುರುರಾಜ್, ವಿನೋದ್ ತಿವಾರಿ, ವಿಜಯಲಕ್ಷ್ಮಿ, ಮದನ್‌ಲಾಲ್ ಮಾರೋ, ಮಹಾವೀರ್ ಚಂದ್ ಬನ್ಸಾಲಿ, ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯ ನಿವೃತ್ತ ಅಧಿಕಾರಿ ಡಾ. ಶಂಕರೇಗೌಡ ಉಪಸ್ಥಿತರಿದ್ದರು.

ಬಸವಣ್ಣ ಕರ್ನಾಟಕದ ಸಾಂಸ್ಕೃತಿಕ ನಾಯಕ: ಮೈಸೂರಲ್ಲಿ ಬಸವ ಅಭಿಮಾನಿಗಳ ಸಂಭ್ರಮ



ಮೈಸೂರಿನ ಗನ್‌ಹೌಸ್ ವೃತ್ತದಲ್ಲಿರುವ ಬಸವೇಶ್ವರ ಪುತ್ಥಳಿ ಬಳಿ ಬಸವ ಭಕ್ತರು ಸಿಹಿ ಹಂಚಿ ಪಟಾಕಿ ಸಿಡಿಸಿ, ಸಂಭ್ರಮ ಆಚರಿಸಿದರು.

ಮೈಸೂರು: ವಿಶ್ವಗುರು ಬಸವಣ್ಣ ಅವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಸಿದ್ಧರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ನಿರ್ಣಯಿಸಿದ್ದು ಸಂತೋಷ ಉಂಟು ಮಾಡಿದೆ ಎಂದು ಕೆಆರ್ ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ ಹರ್ಷ ವ್ಯಕ್ತಪಡಿಸಿದರು.

ಜಾತಿರಹಿತ ಸಮಾಜದ ಕನಸು ಕಂಡು ಸಮಾಜದಲ್ಲಿ ಸಾಮರಸ್ಯ ತರುವಲ್ಲಿ ಅಣ್ಣ ಬಸವಣ್ಣನವರ ಪಾತ್ರ ಮಹತ್ತರವಾಗಿದೆ. ಕರ್ನಾಟಕ ಸಾಂಸ್ಕೃತಿಕ ನಾಯಕರನ್ನಾಗಿ ಗೌರವಿಸಿರುವುದಕ್ಕೆ ನಾಡಿನ ಬಸವ ಭಕ್ತರು ಹಾಗೂ ಬಸವಾಭಿಮಾನಿಗಳು ಸೇರಿ ನಾಡಿನ ಜನತೆ ಸರಕಾರದ ನಿರ್ಧಾರಕ್ಕೆ ಸಂತೋಷ ವ್ಯಕ್ತಪಡಿಸಿದ್ದಾರೆ. ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದ್ದರಿಂದ ರಾಜ್ಯ ಸರ್ಕಾರದ ಘನತೆ, ಗೌರವ ಹೆಚ್ಚಾಗಿದೆ. ಸರ್ಕಾರದ ಅನೇಕ ಯೋಜನೆಗಳಿಗೆ ಬಸವಣ್ಣನವರ ಚಿಂತನೆಗಳೇ ಪ್ರೇರಣೆ ಎಂದು ಮುಖ್ಯಮಂತ್ರಿ ಹೇಳಿರುವುದು ಜನರಲ್ಲಿ ಹೆಮ್ಮೆಯ ಭಾವ ಮೂಡಿಸಿದೆ ಎಂದರು.

ಇದೇ ವೇಳೆ ಆಲನಹಳ್ಳಿ ಪುಟ್ಟಸ್ವಾಮಿ, ನಂ.ಸಿದ್ದಪ್ಪ, ಎಚ್.ವಿ.ಮಹದೇವ್‌ಸ್ವಾಮಿ, ಗೌರಿಶಂಕರನಗರದ ಶಿವು, ಅಪೂರ್ವ ಸುರೇಶ್, ಅರುಣ್ ಸಿದ್ದಪ್ಪ ಕೆಆರ್. ಬ್ಯಾಂಕ್ ನಿರ್ದೇಶಕ ಎಚ್.ಬಿ.ಭಾಸ್ಕರ್, ದೂರ ರಾಜಣ್ಣ, ನಂಜುಂಡಸ್ವಾಮಿ, ಕಂಸಾಳೆ ರವಿ, ಜಟ್ಟಿಹುಂಡಿ ಗೋಪಾಲ್ ಇನ್ನಿತರರಿದ್ದರು.



ಅಯೋಧ್ಯೆಯ ರಾಮಮಂದಿರದಲ್ಲಿ ಬಾಲರಾಮನ ಪ್ರಾಣಪ್ರತಿಷ್ಠಾಪನೆಯ ಅಂಗವಾಗಿ ಮೈಸೂರಿನ ಅರಸು ರಸ್ತೆಯಲ್ಲಿರುವ ಮೈಸೂರು ಟಾರ್ಪಲಿನ್ಸ್ ನೂತನವಾಗಿ ತಯಾರಿಸಿರುವ ಶ್ರೀರಾಮನ ಭಾವಚಿತ್ರವುಳ್ಳ ಬ್ಯಾಗ್‌ಗಳನ್ನು ಶಿಲ್ಪಿ ಅರುಣ್ ಯೋಗಿರಾಜ್ ಅವರ ತಾಯಿ ಸರಸ್ವತಮ್ಮ ಶನಿವಾರ ಬಿಡುಗಡೆಗೊಳಿಸಿದರು. ಈ ವೇಳೆ ಮೈಸೂರು ಟಾರ್ಪಲಿನ್ಸ್ ಮಾಲೀಕ ವೈ.ವೀರಭದ್ರ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.1.2024 ಭಾನುವಾರ, ಮಳೆ ನಕ್ಷತ್ರ: ಉತ್ತರಾಷಾಢ 11.1.2024ರಿಂದ 23.01.2024 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ರೋಹಿಣಿ ರಾಹುಕಾಲ: ಸಂಜೆ 4.30ರಿಂದ 6ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸಿ.ಎಫ್.ಟಿ.ಆರ್.ಐ ಶೋಧ ಅನುಶೋಧ– ಪ್ರಾಯೋಜಿತ ಕಾರ್ಯಕ್ರಮ, ಪ್ರಸ್ತುತಿ–ಕೇಶವ ಪ್ರಕಾಶ್ ಎಂ.ಎನ್., 6.40 ಪದ ಸಂಸ್ಕೃತಿ–ಡಾ.ಆರ್.ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ನಂದಿಸದಿರಿ ನಂದಾದೀಪ–ಪ್ರಾಯೋಜಿತ ಕಾರ್ಯಕ್ರಮ, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ, 10.00 ಕೆ.ವಿ.ಕೃಷ್ಣ–ವೀಣಾವಾದನ **ಮಧ್ಯಾಹ್ನ:** 12.30 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆ–ರಾಧಿಕಾ ಐ ಭಟ್, 3.30 ಮಕ್ಕಳ ಮಂಟಪ–ಶ್ರೀರಂಗಪಟ್ಟಣ ತಾಲೂಕು ಪಾಲಹಳ್ಳಿಯ ಶ್ರೀ ಶಾರದಾ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ "ಅಮರ ವ್ಯಾಪ್ರ" ರಚನೆ– ರಾಜಾನಂದ, ನಿರ್ಮಾಣ–ವಿ.ಮಾ.ಜಗದೀಶ್, 6.50 ಕೃಷಿರಂಗ–ತೋರಣ ಹೂರಣ–ವಾರದ ಗ್ರಾಮೀಣ ಕಾರ್ಯಕ್ರಮ, ಪ್ರಸ್ತುತಿ–ಎನ್.ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ.ಮೈಸೂರ್ ಉಮೇಶ್, ಪರಾಗ–ಬೇಸಾಯದ ಬದುಕು ಸರಾಗ–ಬಾನುಲಿ ಸರಣಿ, 8.15 ಯುವವಾಣಿ –ರಾಷ್ಟ್ರೀಯ ಹೆಣ್ಣು ಮಗುವಿನ ದಿನದ ಕುರಿತ ಕಾರ್ಯಕ್ರಮ, 9.30 ಸಂವಿಧಾನ ತಿದ್ದುಪಡಿಯ ವಿಧಿ ವಿಧಾನಗಳು ಕುರಿತು ಮಾತನಾಡುವವರು ಸಂವಿಧಾನ ತಜ್ಞ ಡಾ.ಸುಧಾಕರ ಹೊಸಳ್ಳಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಪಂಡಿತ್ ಗೋಕುಲೋತ್ಸವ್ ಮಹಾರಾಜ್ –ಗಾಯನ

- **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.
- **ಸುರಭಿ ಗಾನ ಕಲಾಮಂದಿರ ಚಾರಿಟಬಲ್ ಟ್ರಸ್ಟ್:** ಅರಳು ಪ್ರತಿಭೆ, 'ಪ್ರತಿಭಾಂಕುರ'–ನೂತನ ಸಂಗೀತ ಮಾಲಿಕೆ–ಅಷ್ಟಮ ಸುಮ, ಗಾಯನ: ವಿದುಷಿ ಡಾ.ಸುಭಾಷಿಣಿ ಎನ್.ಎಸ್., ಪಿಟೀಲು: ವಿದ್ವಾನ್ ಕೇಶವ್ ಮೋಹನ್‌ಕುಮಾರ್, ಮೃದಂಗ: ವಿದ್ವಾನ್ ಪವನ್ ಮಾಧವ್ ಮೈಸೂರ್, ಸ್ಥಳ: ರಾಸವೃಂದ, 1095, ದೇವ ಪಾರ್ಥಿವ ರಸ್ತೆ, ಚಾಮರಾಜಪುರಂ, ಬೆಳಗ್ಗೆ 10.30ಕ್ಕೆ.
- **ರಾಗ ಮ್ಯೂಸಿಕ್ ಅಕಾಡೆಮಿ, ಮೈಸೂರು:** ಆರೋಗ್ಯಕ್ಕಾಗಿ ಸಂಗೀತ, ಗಾಯನ: ವಿದುಷಿ ಕವಿತ ಸರಳಾಯ ಮತ್ತು ವಿದುಷಿ ತ್ರಿವೇಣಿ ಸರಳಾಯ (ಸರಳಾಯ ಸಹೋದರಿಯರು). ವೈಯಲಿನ್: ವಿದ್ವಾನ್ ಅದಿತಿ ಕೃಷ್ಣಪ್ರಕಾಶ್, ಮೃದಂಗ: ವಿದ್ವಾನ್ ತುಮಕೂರು ಬಿ.ರವಿಶಂಕರ್, ಘಟಂ: ವಿದ್ವಾನ್: ರಘುನಂದನ್ ರಾವ್, ಸ್ಥಳ: ಶ್ರೀ ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರ, ಸಂಜೆ 6 ಗಂಟೆಗೆ.
- **ಶ್ರೀ ಶ್ರೀ ಶ್ರೀ ಡಾ.ಶಿವಕುಮಾರ್ ಸ್ವಾಮೀಜಿ ಭಕ್ತ ಮಂಡಳಿ:** ಪುಣ್ಯಸ್ಮರಣೆ ದಾಸೋಹ ದಿವಸ, ದಿವ್ಯ ಸಾನ್ನಿಧ್ಯ: ಕುದೇರು ಮಠದ ಶ್ರೀಗುರುಶಾಂತ ಸ್ವಾಮಿಗಳು, ಮಡಿವಾಳೇಶ್ವರ ಮಠದ ಶ್ರೀ ಇಮ್ಮಡಿ ಮಡಿವಾಳ ಸ್ವಾಮಿಗಳು, ದೇವಲಾಪುರ ಮಠದ ಶ್ರೀ ಜಡೆ ಸ್ವಾಮಿಗಳು, ಹುಲ್ಲಿನ ಬೀದಿ ಮಠದ ಶ್ರೀ ಚಂದ್ರಶೇಖರ ಮಹಾಸ್ವಾಮಿಗಳು, ಕುಂದೂರು ಮಠದ ಶ್ರೀ ಡಾ.ಶರತ್‌ಚಂದ್ರ ಮಹಾಮಸ್ವಾಮಿಗಳು, ಮೆರವಣಿಗೆ, ಕುಂಭ ಮೇಳ. ಸ್ಥಳ: 101 ಗಣಪತಿ ದೇವಸ್ಥಾನ, ಕೆ.ಆರ್.ಮೊಹಲ್ಲಾ, ಬೆಳಗ್ಗೆ 9 ಗಂಟೆಗೆ.
- **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮಹಿಮಾ ಪ್ರಕಾಶನ (ಮೈಸೂರು), ವಂಶಿ ಪ್ರಕಾಶನ (ಬೆಂಗಳೂರು):** 'ಪತ್ರಕರ್ತ ಗಾಂಧಿ', 'ಶೋಷಣೆಗಳ ಅನ್ವೇಷಣೆ', 'ಅಸಮಾನತೆಯ ಉದಾರೀಕರಣ' ಕೃತಿಗಳ ಬಿಡುಗಡೆ, ಉದ್ಘಾಟನೆ: ಹಿರಿಯ ಸಾಹಿತಿ ಡಾ.ಕಾಳೇಗೌಡ ನಾಗವಾರ, ಕೃತಿಗಳ ಬಿಡುಗಡೆ: ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಕುಲಪತಿ ಡಾ.ನಾಗೇಶ್ ವಿ.ಬೆಟ್ಟಕೋಟೆ, ಅಧ್ಯಕ್ಷತೆ: ಮೈಸೂರು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ, ಮೊದಲನೆ ಹಂತ, ಬೆಳಗ್ಗೆ 10.30ಕ್ಕೆ.
- **ಮೈಸೂರ್ ಲಿಟೆರರಿ ಅಸೋಸಿಯೇಷನ್:** ಮೈಸೂರು ಲಿಟೆರರಿ ಫೆಸ್ಟ್–2024, ಉದ್ಘಾಟನೆ: ಲೇಖಕಿ ಡಾ.ನಂಜಮ್ಮ ಚಿನ್ನಪ್ಪ, ಅಧ್ಯಕ್ಷತೆ: ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳು ಮತ್ತು ಮೈಸೂರ್ ಲಿಟೆರರಿ ಅಸೋಸಿಯೇಷನ್ ಅಧ್ಯಕ್ಷರಾದ ಪ್ರೊ.ಕೆ.ಸಿ.ಬೆಳ್ಳಿಯಪ್ಪ, ಸ್ಥಳ: ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಬೆಳಗ್ಗೆ 10.30ರಿಂದ.
- **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಜೆಎಸ್‌ಎಸ್ ಮೇನ್ ಹಾಸ್ಟೆಲ್ (ಪ್ರಧಾನ ಭವನ), ಮೈಸೂರು:** ದತ್ತಿ ಕಾರ್ಯಕ್ರಮ, ಅಂತರ್ ವಿದ್ಯಾರ್ಥಿನಿಲಯಗಳ ಚರ್ಚಾ ಸ್ಪರ್ಧೆ ಮತ್ತು ರಸಪ್ರಶ್ನೆ (ಶರಣ ದರ್ಶನ), ಸ್ಥಳ: ಜೆಎಸ್‌ಎಸ್ ಮೇನ್ ಹಾಸ್ಟೆಲ್, ಆರ್‌ಟಿಓ ಹತ್ತಿರ, ಬೆಳಗ್ಗೆ 10.30ಕ್ಕೆ.
- **ಶ್ರೀ ಸುಬ್ರಮಣ್ಯಸ್ವಾಮಿ ದೇವಸ್ಥಾನ (ಶ್ರೀ ಸುಬ್ರಹ್ಮಣ್ಯಸ್ವಾಮಿ ಟೆಂಪಲ್ ಟ್ರಸ್ಟ್):** 58ನೇ ವರ್ಷದ ತೈಪೂಜಾ ಮಹೋತ್ಸವ–2024, ಸ್ಥಳ: ದೇವಸ್ಥಾನದ ಆವರಣ, ವಿಶ್ವೇಶ್ವರನಗರ, ಬೆಳಗ್ಗೆಯಿಂದ.
- **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಯುಕ್ತಶಾನಂದ ಅವರಿಂದ 'ಶ್ರೀಮಾತೆ ಶಾರದಾದೇವಿ' ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6 ಗಂಟೆಗೆ.
- **ನಟನ, ಮೈಸೂರು:** ನಟನ ಪಯಣ: ರೆಪರ್ಟರಿ ತಂಡದ ಪ್ರಯೋಗ 'ಸಂಸಾರದಲ್ಲಿ ಸನಿದಪ', ಮೂಲ: ದಾರಿಯೋಪೊ, ಮರುರೂಪ: ಅಕ್ಷರ ಕೆ.ವಿ., ನಿರ್ದೇಶನ: ಮಂಡ್ಯ ರಮೇಶ್, ಸ್ಥಳ: ನಟನ ರಂಗಶಾಲ, ರಾಮಕೃಷ್ಣನಗರ, ಸಂಜೆ 6.30ಕ್ಕೆ.
- **ಮೈಸೂರು ಮೆಡಿಲ್ ಕಾಲೇಜು ಹಳೆಯ ವಿದ್ಯಾರ್ಥಿಗಳ ಸಂಘ:** ಜಾಗತಿಕ ಹಳೆಯ ವಿದ್ಯಾರ್ಥಿಗಳ ಸಮಾಗಮ, ಹಳೆಯ ವಿದ್ಯಾರ್ಥಿಗಳ ಸಮ್ಮಿಲನದೊಂದಿಗೆ ಕಾರ್ಯಕ್ರಮ ಮುಕ್ತಾಯ ಸಮಾರಂಭ, ಉದ್ಘಾಟನೆ: ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಅಧ್ಯಕ್ಷತೆ: ಮೈಸೂರು ಮೆಡಿಕಲ್ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆಯ ಡೀನ್ ಹಾಗೂ ನಿರ್ದೇಶಕ ಡಾ.ಕೆ.ಆರ್.ದಾಕ್ಷಾಯಿಣಿ, ಸ್ಥಳ: ಪ್ಲಾಟಿನಂ ಜುಬಲಿ ಸಭಾಂಗಣ, ಎಂಎಂಸಿ ಸ್ಪೋರ್ಟ್ ಮೈದಾನ (ಜೆ.ಕೆ.ಗ್ರೌಂಡ್), ಬೆಳಗ್ಗೆಯಿಂದ.
- **ಹರಿ ವಿದ್ಯಾಲಯ ಸಂಯುಕ್ತ ಪಿಯು ಕಾಲೇಜು:** 10ನೇ ತರಗತಿ ವಿದ್ಯಾರ್ಥಿಗಳಿಗೆ ಚೇತನ್‌ರಾಮ್‌ರಿಂದ ಕಾರ್ಯಾಗಾರ, ವಿಷಯ: 'ಪರೀಕ್ಷೆ ಒಂದು ಹಬ್ಬ–ಆಚರಿಸಿ', ಸ್ಥಳ: ಹರಿವಿದ್ಯಾಲಯ, ಬೋಗಾದಿ, ಬೆಳಗ್ಗೆಯಿಂದ.
- **ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀಉತ್ತರಾದಿ ಮಠ :** ಅಯೋಧ್ಯೆಯಲ್ಲಿ ಶ್ರೀರಾಮಮಂದಿರ ಉದ್ಘಾಟನಾ ಪರ್ವಕಾಲದ ನಿಮಿತ್ತ ಸಮಗ್ರ ರಾಮಾಯಣ ಕುರಿತು ಪ್ರವಚನ ಮಾಲಿಕೆ, ಪಂಡಿತ್ ಶ್ರೀ ಕಾಂತಾಚಾರ್ಯ ಕಳಸಾಪುರ ಅವರಿಂದ ಯುದ್ಧಕಾಂಡ ಕುರಿತು ಉಪನ್ಯಾಸ, ಸ್ಥಳ: ಶ್ರೀ ಉತ್ತರಾದಿ ಮಠ, ಅಗ್ರಹಾರ, ಸಂಜೆ 6ರಿಂದ.
- **ಅರಸು ಮಹಿಳಾ ಜಾಗೃತಿ ಸಭಾ ಟ್ರಸ್ಟ್ (ಮೈಸೂರು):** 'ವಸಂತೋತ್ಸವ ಸಂಭ್ರಮ', ದಿವ್ಯಸಾನ್ನಿಧ್ಯ, ಉದ್ಘಾಟನೆ: ಮಳವಳ್ಳಿ ಆದಿ ಹೊನ್ನನಾಯಕನಹಳ್ಳಿ ಮತ್ತು ಕಪ್ಪಡಿ ಕ್ಷೇತ್ರ, ಮಂಟೇಸ್ವಾಮಿ ಮಠದ ಪೀಠಾದಿಪತಿ ಶ್ರೀ ಎಂ.ಎಲ್.ವರ್ಚಸ್ವಿ ಶ್ರೀಕಂಠ ಸಿದ್ದಲಿಂಗರಾಜೇ ಅರಸ್, ಕುಲದೇವತೆ ತಾಯಿ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ: ಶ್ರೀ ಜಯಚಾಮರಾಜೇಂದ್ರ ಶಿಕ್ಷಣ ಸಂಸ್ಥೆ ಉಪಾಧ್ಯಕ್ಷರಾದ ಶ್ರೀಮತಿ ಡಾ.ಎಂ.ಆರ್.ಭಾರತಿ ಶ್ರೀಧರ್‌ರಾಜೇ ಅರಸ್, ಅಧ್ಯಕ್ಷತೆ: ಅರಸು ಮಹಿಳಾ ಜಾಗೃತಿಸಭಾ ಟ್ರಸ್ಟ್ ಅಧ್ಯಕ್ಷೆ ಡಾ.ಪಿ.ಬಿ.ಇಂದುಕಲಾ ಅರಸ್, ಸ್ಥಳ: ರೋಟರಿ ವೆಸ್ಟ್ ಸಭಾಂಗಣ, ಬೆಳಗ್ಗೆ 11 ಗಂಟೆಗೆ.
- **ಶ್ರೀ ಯೋಗಾ ನರಸಿಂಹಸ್ವಾಮಿ ದೇವಸ್ಥಾನ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟ (ಮೈಸೂರು), ನೈನಿಷ ಫೌಂಡೇಷನ್ (ಬೆಂಗಳೂರು):** ಡಾ.ಎನ್.ಎಂ. ಗಿರಿಜಾಪತಿ ವಿರಚಿತ 'ಶ್ರೀ ರಾಮಭಾರತಂ' ಶ್ರೀ ಸಾಮಾನ್ಯ ಭಾರತಂ, ರಾಮಾಯಣ ಕಥಾಧಾರಿತ ಕಾವ್ಯ ಕೃತಿಯ ಕಾವ್ಯಾನುಸಂಧಾನ, ದಿವ್ಯಸಾನ್ನಿಧ್ಯ: ಶ್ರೀ ಯೋಗನರಸಿಂಹಸ್ವಾಮಿ ದೇವಸ್ಥಾನ ಸಂಸ್ಥಾಪಕರು, ಸಂಸ್ಕೃತ ವಿದ್ವಾಂಸಕರಾದ ನಾಡೋಜ ಡಾ.ಭಾಷ್ಯಂ ಸ್ವಾಮೀಜಿ, ಕಾವ್ಯಾವಲೋಕನ: ಹಿರಿಯ ವಿದ್ವಾಂಸ ಪ್ರೊ.ಸಿ.ಪಿ. ಕೃಷ್ಣಕುಮಾರ್, ಕಾವ್ಯ ಪೀಠಿಕೆ: ಸಾಹಿತ್ಯ, ಸಂಸ್ಕೃತಿ ಚಿಂತಕ ಗ.ನಾ.ಭಟ್ಟ, ಅಧ್ಯಕ್ಷತೆ: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ಯೋಗನರಸಿಂಹಸ್ವಾಮಿ ದೇವಸ್ಥಾನ, ವಿಜಯನಗರ, ಸಂಜೆ 5 ಗಂಟೆಗೆ.
- **ಅಖಿಲ ನಾಮಧಾರಿಗೌಡ ಸಂಘ (ಕೇಂದ್ರ ಸಮಿತಿ):** ಅಮೃತ ಮಹೋತ್ಸವ ವರ್ಷಾಚರಣೆ 2023, ಉಚಿತ ವಾಕ್ ಮತ್ತು ಶ್ರವಣ ಹಾಗೂ ಆಯುರ್ವೇದ ತಪಾಸಣಾ ಶಿಬಿರ, ಸ್ಥಳ: ಅಖಿಲ ನಾಮಧಾರಿಗೌಡ ಬಾಲಕರ ವಿದ್ಯಾರ್ಥಿನಿಲಯ, ಗಂಗೋತ್ರಿ ಬಡಾವಣೆ, ಬೆಳಗ್ಗೆ 10 ಗಂಟೆಗೆ.

ಮೈಸೂರಿನ ಬಿವಿಬಿಯಲ್ಲಿ ಸಂಗೀತ ವಿದ್ಯಾನಿಧಿ ವಿದ್ವಾನ್ ಡಾ.ವಿದ್ಯಾಭೂಷಣರ ಗಾಯನ; ನೆರೆದಿದ್ದವರು ಭಕ್ತಿ-ಭಾವ ಪರವಶ



ಮೈಸೂರಿನ ಭಾರತೀಯ ವಿದ್ಯಾಭವನದಲ್ಲಿ ಶನಿವಾರ ನಡೆದ 123ನೇ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಕೇಂದ್ರದ ಅಧ್ಯಕ್ಷರೂ ಆದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ದೀಪ ಬೆಳಗಿಸಿ, ಉದ್ಘಾಟಿಸಿದರು. ಕೇಂದ್ರದ ಕಾರ್ಯದರ್ಶಿ ಪಿ.ಎಸ್.ಗಣಪತಿ, ವಿದ್ವಾನ್ ಡಾ.ವಿದ್ಯಾಭೂಷಣ್, ಖಜಾಂಚಿ ಡಾ.ಎ.ಟಿ. ಭಾಷ್ಯಂ, ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಡಾ.ತುಳಸಿ ರಾಮಚಂದ್ರ, ಆಡಳಿತಾಧಿಕಾರಿ ರವಿಕುಮಾರ್ ಚಿತ್ರದಲ್ಲಿದ್ದಾರೆ.



ಸಂಗೀತ ವಿದ್ಯಾನಿಧಿ ವಿದ್ವಾನ್ ಡಾ.ವಿದ್ಯಾಭೂಷಣ ಅವರ ಸುಮಧುರ ಕಂಠದಿಂದ ಹೊರಹೊಮ್ಮಿದ 'ದಾಸವಾಣಿ', ನೆರೆದಿದ್ದವರನ್ನು ಪುಳಕಿತಗೊಳಿಸಿತು.



ದಾಸವಾಣಿ ಆಸ್ವಾದಿಸಲು ಕಿಕ್ಕಿರಿದಿದ್ದ ಸಂಗೀತ ಪ್ರೇಮಿಗಳು.

ಮೈಸೂರು,ಜ.20(ಎಸ್‌ಬಿಡಿ)–ಮೈಸೂರಿನ ಭಾರತೀಯ ವಿದ್ಯಾಭವನ (ಬಿವಿಬಿ)ದಲ್ಲಿ ಸಂಗೀತ ವಿದ್ಯಾನಿಧಿ ವಿದ್ವಾನ್ ಡಾ.ವಿದ್ಯಾಭೂಷಣ ಅವರ ಸುಮಧುರ ಕಂಠದಿಂದ ಹೊರಹೊಮ್ಮಿದ 'ದಾಸವಾಣಿ' ನೆರೆದಿದ್ದವರನ್ನು ಭಕ್ತಿ-ಭಾವ ಪರವಶಗೊಳಿಸಿತು.

ವಿಜಯನಗರ ಮೊದಲ ಹಂತದ ಭಾರತೀಯ ವಿದ್ಯಾಭವನ(ಬಿವಿಬಿ)ದಲ್ಲಿ ಬಿವಿಬಿ ಬೆಂಗಳೂರು ಕೇಂದ್ರ ಹಾಗೂ ಇನ್ಫೋಸಿಸ್ ಪ್ರತಿಷ್ಠಾನದ ಸಹಯೋಗದಲ್ಲಿ ಶನಿವಾರ ನಡೆದ 123ನೇ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಡಾ.ವಿದ್ಯಾಭೂಷಣ ಅವರು ತನ್ಮಯತೆಯಿಂದ ಪ್ರಸ್ತುತಪಡಿಸಿದ 'ದಾಸವಾಣಿ' ದೈವಲೋಕವನ್ನೇ ಸೃಷ್ಟಿಸಿತ್ತು. ಕಿಕ್ಕಿರಿದಿದ್ದ ಸಂಗೀತ ಪ್ರೇಮಿಗಳಲ್ಲಿ ಭಕ್ತಿಭಾವ ಆವರಿಸಿತ್ತು. ಪ್ರತಿಯೊಂದು ಪ್ರಸ್ತುತಿಯನ್ನೂ ನಿರುಮ್ಮಳವಾಗಿ ಆಸ್ವಾದಿಸುತ್ತಾ, ದೇವರ ಸ್ಮರಣೆಯಲ್ಲಿ ಮಿಂದೆದ್ದರು. ಕರತಾಡನದ ಮಳೆಗರೆಯುವ ಮೂಲಕ ತಮಗಾದ ಪರಮಾನಂದವನು ಹೊರಹಾಕಿದರು.

'ಗಜವದನ ಪಾಲಿಸೋ... ಲಾಲಿಸೋ...' ಎಂದು ವಿಘ್ನ ನಿವಾರಕನ ಸ್ಮರಣೆಯೊಂದಿಗೆ ಗಾಯನ ಆರಂಭಿಸಿದ ವಿದ್ವಾನ್ ವಿದ್ಯಾಭೂಷಣರು, ನಾವೆಲ್ಲರೂ ಬಾಲರಾಮನ ಸಂಭ್ರಮದಲ್ಲಿ ಪುಳಕಿತರಾಗುತ್ತಿದ್ದೇವೆ. ಸುಂದರ ವಿಗ್ರಹವನ್ನು ನೀಡಿರುವ ದೊಡ್ಡ ಹೆಮ್ಮೆ ಮೈಸೂರಿನವರಿಗಿದೆ. ಧರ್ಮ ಸ್ಥಾಪನೆಗಾಗಿ ಭಗವಂತ ಅವತರಿಸುತ್ತಿರುತ್ತಾನೆ ಎಂದು 'ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ...' ಭಗವದ್ಗೀತೆಯ ಶ್ಲೋಕವನ್ನು ಸುಶ್ರಾವ್ಯವಾಗಿ ಹಾಡಿದರು.

'ಜಯತು ಕೋದಂಡರಾಮ ಜಯತು ದಶರಥರಾಮ, ಜಯತು ಸೀತಾರಾಮ, ಜಯತು ರಘುರಾಮ ಜಯತು ಜಯತು....', 'ಹರಿ ಭಜನೆ ಮಾಡೋ ನಿರಂತರ, ಪರಗತಿಗಿದು ನಿರ್ಧಾರ ನೋಡೋ, ಮೊದಲು ತೋರುತಿದೆ ಮಧುರ ವಿಷಯ ಸುಖ, ಕಡೆಯಲಿ ದುಃಖ ಅನೇಕ....', 'ಇಂದು ನಿನ್ನ ಮೊರೆಯ ಹೊಕ್ಕೆ ವೆಂಕಟೇಶನೆ, ಎಂದಿಗಾದರೆನ್ನ ಕಾಯೊ ಶ್ರೀನಿವಾಸನೆ...'–ಮನೋಜ್ಞ ಗಾಯನದ ಮೂಲಕ ನೆರೆದಿದ್ದವರ ಹೃನ್ಮನ ತಣಿಸಿದರು.

'ಇಷ್ಟು ದಿನ ಈ ವೈಕುಂಠ ಎಷ್ಟು ದೂರವೋ ಎನುತಲಿದ್ದೆ ದೃಷ್ಟಿಯಿಂದಲಿ ನಾನು ಕಂಡೆ ಸೃಷ್ಟಿಗೀಶನೇ ಶ್ರೀರಂಗಶಾಯಿ...', 'ನೆರೆನಂಬಿದೆ ಮದ ಹೃದಯ ಮಂಟಪದೊಳು ಪರಿಶೋಭಿಸುತಿರು ಪಾಂಡುರಂಗ...', 'ಕೃಷ್ಣ ನೀ ಬೇಗನೇ ಬಾರೋ, ಬೇಗನೇ ಬಾರೋ ನೀ ಮುಖವನ್ನು ತೋರೋ...', 'ಮಲಗಿ ಪರಮಾದರದಿ ಪಾಡಲು ಕುಳಿತು ಕೇಳುವ...', ಕೃಷ್ಣಭಕ್ತರ ನೆಚ್ಚಿನ 'ಪಿಳ್ಳಂಗೋವಿಯ ಚೆಲ್ವ ಕೃಷ್ಣನ ಎಲ್ಲಿ ನೋಡಿದಿರಿ, ರಂಗನ ಎಲ್ಲಿ ನೋಡಿದಿರಿ, ಎಲ್ಲಿ ನೋಡಿದರಲ್ಲಿ ತಾನಿಲ್ಲವಿಲ್ಲವೆಂಬರು ಬಲ್ಲ ಜಾಣರು...' ಗೀತೆಗಳು ಎಲ್ಲರನ್ನೂ ಪುಳಕಿತಗೊಳಿಸಿದವು.

'ಸುಂದರ ಮೂರುತಿ ಮುಖ್ಯಪ್ರಾಣ ಬಂದ ಮನೆಗೆ, ಪ್ರಾಣ ಬಂದ ಮನೆಗೆ, ಶ್ರೀರಾಮದ್ದನಿಗೆ...' ಗೀತೆಯ ಕೊನೆಯಲ್ಲಿ ವಿದ್ಯಾಭೂಷಣರು, ಜೈ ಜೈ ರಾಮ್... ಉದ್ಘೋಷದೊಂದಿಗೆ ರಾಮ ಸ್ಮರಣೆ ಮಾಡಿದರು. ಇದರಿಂದ ನೆರೆದಿದ್ದವರಲ್ಲಿ ಭಕ್ತಿ ಸಂಚಲನವಾದಂತೆ ಭಾವುಕರಾಗಿ ತಾವೂ ರಾಮಸ್ಮರಣೆಯಲ್ಲಿ ಮುಳುಗಿದರು. 'ಜಗದೋದ್ಧಾರನ ಮಗನೆಂದು ತಿಳಿಯುತ, ಸುಗುಣಾಂತ ರಂಗನ ಆಡಿಸಿದಳೆ ಶೋಧೆ...' ಹಾಡಿನ ಮೂಲಕ ಮಾತೃವಾತ್ಸಲ್ಯದ ಮಹತ್ವವನ್ನು ಕೇಳುಗರ ಮನಮುಟ್ಟಿಸಿದರು.

ವಿದ್ವಾನ್ ವಿದ್ಯಾಭೂಷಣರ ಗಾಯನ ಮೋಡಿಗೆ ವಿದ್ವಾನ್ ಪ್ರಾದೇಶ್ (ಪಿಟೀಲು), ವಿದ್ವಾನ್ ಶಿವಶಂಕರಸ್ವಾಮಿ(ಮೃದಂಗ) ಹಾಗೂ ವಿದ್ವಾನ್ ರಘುನಂದನ ರಾವ್ (ಘಟ) ವಾದ್ಯ ಸಹಕಾರದೊಂದಿಗೆ ಸಾಥ್ ನೀಡಿದರು. ದಾಸವಾಣಿಯ ನಡುವೆ ಕೆಲ ಕಾಲ ವಾದ್ಯ ವಿದ್ವಾನ್‌ಗಳ ಜುಗಲ್‌ಬಂದಿ ಸಂಗೀತಾಸಕ್ತರ ಹೃನ್ಮನ ಸೆಳೆಯಿತು.

ಘಟ ಮತ್ತು ಮೃದಂಗ ಮೇಳಕ್ಕೆ ಚಪ್ಪಾಳೆ ತಟ್ಟಿ ಮೆಚ್ಚುಗೆ ವ್ಯಕ್ತಪಡಿಸಿದರು. ಮಕ್ಕಳಾದಿಯಾಗಿ ಎಲ್ಲಾ ವಯೋಮಾನದ ನೂರಾರು ಸಂಗೀತ ಭಕ್ತರು ನೆರೆದಿದ್ದರು. ಸಭಾಂಗಣದಲ್ಲಿ ಆಸನವಿಲ್ಲದೆ, ಹಲವು ಮಂದಿ ಹೊರ ಆವರಣದಲ್ಲಿ ನಿಂತು ಆಸ್ವಾದಿಸಿದರು. ಇದಕ್ಕೂ ಮುನ್ನ ಭಾರತೀಯ ವಿದ್ಯಾಭವನ ಮೈಸೂರು ಕೇಂದ್ರದ ಅಧ್ಯಕ್ಷರೂ ಆದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರು ವಿದ್ವಾನ್ ಡಾ.ವಿದ್ಯಾಭೂಷಣ್ ಅವರೊಂದಿಗೆ ದೀಪ ಬೆಳಗುವ ಮೂಲಕ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ವಿಧ್ಯುಕ್ತವಾಗಿ ಚಾಲನೆ ನೀಡಿದರು. ಕೇಂದ್ರದ ಕಾರ್ಯದರ್ಶಿ ಪಿ.ಎಸ್.ಗಣಪತಿ, ಖಜಾಂಚಿ ಡಾ.ಎ.ಟಿ. ಭಾಷ್ಯಂ, ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಡಾ.ತುಳಸಿ ರಾಮಚಂದ್ರ ಆಡಳಿತಾಧಿಕಾರಿ ರವಿಕುಮಾರ್ ವೇದಿಕೆಯಲ್ಲಿದ್ದರು. ಉಪಾಧ್ಯಕ್ಷ ಸಿ.ನಾಗಣ್ಣ, ಸದಸ್ಯ ಮರೀಗೌಡ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ನರೇಗಾ ಯೋಜನೆಯಲ್ಲಿ 150 ಕೋಟಿ ಅಕ್ರಮ
ದೇವದುರ್ಗ ತಾಲೂಕಿನ 32 ಪಿಡಿಒಗಳ ಅಮಾನತು

ರಾಯಚೂರು: 2020ರಿಂದ 2023ರ ಅವಧಿಯಲ್ಲಿನ ನರೇಗಾ ಯೋಜನೆಯಲ್ಲಿ ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಯಚೂರು ಜಿಲ್ಲಾ ಪಂಚಾಯ್ತಿ ಸಿಇಓ ಪಿ.ರಾಹುಲ್ ತುಕಾರಾಂ, ದೇವದುರ್ಗ ತಾಲೂಕಿನ 32 ಪಿಡಿಓಗಳನ್ನು ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ. ನರೇಗಾ ಯೋಜನೆಯಲ್ಲಿ 150 ಕೋಟಿ ರೂ.ಗೂ ಹೆಚ್ಚಿನ ಅಧಿಕ ಹಣ ಅಕ್ರಮ ನಡೆದಿರುವುದು ಲೆಕ್ಕ ಪರಿಶೋಧನಾ ಸಮಿತಿಯ ತನಿಖೆಯಲ್ಲಿ ಬಹಿರಂಗಗೊಂಡಿತ್ತು. ಇನ್ನು ದೇವದುರ್ಗ ಠಾಣೆಯಲ್ಲಿ ಇಬ್ಬರು ಗೆಜೆಟೆಡ್ ಅಧಿಕಾರಿಗಳ ವಿರುದ್ಧ ಇತ್ತೀಚೆಗೆ ಎಫ್‌ಐಆರ್ ದಾಖಲಾಗಿತ್ತು. ತಾಲೂಕಿನ 33 ಗ್ರಾಪಂಗಳಲ್ಲಿ ಅನುಷ್ಠಾನಗೊಂಡ ಒಟ್ಟು 5,385 ಕಾಮಗಾರಿಗಳಲ್ಲಿ ಭಾರಿ ಅಕ್ರಮ ನಡೆದಿದ್ದು, ಸುಮಾರು 100 ಕೋಟಿಗೂ ಅಧಿಕ ಹಣ ದುರುಪಯೋಗವಾಗಿದೆ ಅಂತ ಸಾಮಾಜಿಕ ಪರಿಶೋಧನಾ ಸಮಿತಿ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಇನ್ನು 32 ಗ್ರಾಪಂಗಳ ಕಾಮಗಾರಿಗಳ ಸಾಮಗ್ರಿಗಳನ್ನು ಒಂದೇ ಸಂಸ್ಥೆಯಲ್ಲಿ ಖರೀದಿಸಲಾಗಿದೆ. ಒಟ್ಟು 102.32 ಕೋಟಿ ರೂ. ಒಂದೇ ಸಂಸ್ಥೆಗೆ ಪಾವತಿಸಿರುವುದು ತನಿಖೆಯಿಂದ ಬೆಳಕಿಗೆ ಬಂದಿತ್ತು.

ದಿ ಗ್ರಾಜ್ಯುಯೇಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ಚಾಮರಾಜ ಜೋಡಿ ರಸ್ತೆ, ಮೈಸೂರು - 570024

ನಿರ್ದೇಶಕರುಗಳ ಚುನಾವಣೆ : 2024-2029

ಗೌರವಾನ್ವಿತರೇ
ಈ ಕೆಳಕಂಡ ನಾವುಗಳು ಬ್ಯಾಂಕಿನ ನಿರ್ದೇಶಕರುಗಳ ಚುನಾವಣೆಗೆ ಸ್ಪರ್ಧಿಸಿದ್ದು, ತಮ್ಮ ಅಮೂಲ್ಯವಾದ ಮತವನ್ನು ತಾವೂ ನೀಡಿ, ತಮ್ಮ ಮಿತ್ರರಿಗೂ ನೀಡುವಂತೆ ಪ್ರೇರೇಪಿಸಬೇಕೆಂದು ತಮ್ಮಲ್ಲಿ ಸವಿನಯ ಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುತ್ತೇವೆ
ಒಟ್ಟು 11 ಮತಗಳನ್ನು ಮಾತ್ರ ಚಲಾಯಿಸಲು ತಮಗೆ ಅವಕಾಶವಿರುತ್ತದೆ.

ಕ್ರ.ಸಂಖ್ಯೆ	ಭಾವಚಿತ್ರ	ಹೆಸರು	ಚಿಹ್ನೆ
7		ಎ.ಬಂಗಾರಗಿರಿವಾಸ, ಬಿ.ಕಾಂ, ಎಲ್‌ಎಲ್‌ಬಿ ವಕೀಲರು (ಸಾಮಾನ್ಯ), ದಿ|| ಕೆ.ಆರ್.ಸುಬ್ಬಕೃಷ್ಣರವರ ಸಹೋದರ	
11		ಲಕ್ಷ್ಮೀಶ ಕೆ., ಹಿಂದುಳಿದ ವರ್ಗ	
6		ಟಿ.ಜೆ. ಪೂರ್ಣಿಮಾ, ಎಂ.ಕಾಂ (ಮಹಿಳಾ ಮೀಸಲು)	

ಹಾರ್ಡ್ವಿಕ್ ಹೈಸ್ಕೂಲ್, ಜೆಎಲ್‌ಬಿ ರಸ್ತೆ, ಮೈಸೂರು. ದಿನಾಂಕ: 21.04.2024 ರಂದು ಬೆಳಗ್ಗೆ 9.00 ರಿಂದ, ಮಧ್ಯಾಹ್ನ: 4.00 ಗಂಟೆಯವರೆಗೆ
ಪ್ರಕಟಣೆ : ಯುವ ವಕೀಲರು

ಆಟೋದಲ್ಲಿ ಮರೆತು ಹೋಗಿದ್ದ ಚಿನ್ನಾಭರಣ ಮಾಲೀಕರಿಗೆ ವಾಪಸ್

ಲಷ್ಕರ್ ಠಾಣೆ ಪೊಲೀಸರ ಕ್ಷಿಪ್ರ ಕಾರ್ಯಾಚರಣೆ

ಮೈಸೂರು,ಜ20–ಮೈಸೂರಿನ ಲಷ್ಕರ್ ಠಾಣೆ ಪೊಲೀಸರು ನಡೆಸಿದ ಕ್ಷಿಪ್ರ ಕಾರ್ಯಾಚರಣೆಯಲ್ಲಿ ಪ್ರಯಾಣಿಕರೊಬ್ಬರು ಆಟೋದಲ್ಲಿ ಮರೆತುಹೋಗಿದ್ದ ಚಿನ್ನ ಬೆಳ್ಳಿ ಪದಾರ್ಥಗಳಿದ್ದ ಬ್ಯಾಗ್ ಕೆಲವೇ ಗಂಟೆಗಳಲ್ಲಿ ಮಾಲೀಕರ ಕೈಸೇರಿದೆ.

ವಿವರ: ಬೆಂಗಳೂರಿನ ನಾಯಂಡಹಳ್ಳಿಯ ನಿವಾಸಿ ಇದಾಯತ್ ಉಲ್ಲಾ ಎಂಬುವರು ಸಂಬಂಧಿಕರ ಮದುವೆಗಾಗಿ ಶನಿವಾರ ಮೈಸೂರಿಗೆ ಬಂದಿದ್ದರು. ಉದಯಗಿರಿಯ ಫಂಕ್ಷನ್ ಹಾಲ್ ಒಂದರಲ್ಲಿ ಮದುವೆ ಮುಗಿಸಿ ಸಂಜೆ ಬೆಂಗಳೂರಿಗೆ ತೆರಳಲು ಆಟೋದಲ್ಲಿ ಬಂದ ಅವರು, ಬಸ್ ಹಿಡಿಯುವ ಆತುರದಲ್ಲಿ ಚಿನ್ನ-ಬೆಳ್ಳಿ ಪದಾರ್ಥಗಳಿರುವ ಬ್ಯಾಗನ್ನು ಆಟೋದಲ್ಲೇ ಮರೆತಿದ್ದರು.

40 ಗ್ರಾಂ ತೂಕದ ಚಿನ್ನಾಭರಣ ಹಾಗೂ 30 ಗ್ರಾಂ ತೂಕದ ಬೆಳ್ಳಿ ಪದಾರ್ಥಗಳಿದ್ದ ಬ್ಯಾಗ್ ಆಟೋದಲ್ಲಿ ಮರೆತಿದ್ದ ಅವರು, ತಕ್ಷಣವೇ ಲಷ್ಕರ್ ಠಾಣೆ ಇನ್ಸ್‌ಪೆಕ್ಟರ್ ಪ್ರಸಾದ್ ಅವರನ್ನು ಸಂಪರ್ಕಿಸಿ ವಿಷಯ ತಿಳಿಸಿದ್ದಾರೆ. ಪ್ರಯಾಣಿಕ ಇದಾಯತ್ ಉಲ್ಲಾ ಅವರು ಆಟೋ ನಂಬರ್ ಅನ್ನೂ ಗುರುತಿಸಿಕೊಂಡಿರಲಿಲ್ಲ.



ಇದಾಯತ್ ಉಲ್ಲಾ ಅವರಿಗೆ ಚಿನ್ನಾಭರಣವನ್ನು ಲಷ್ಕರ್ ಠಾಣೆ ಇನ್ಸ್‌ಪೆಕ್ಟರ್ ಪ್ರಸಾದ್ ಹಿಂತಿರುಗಿಸಿದರು.

ಹೀಗಾಗಿ ಇನ್ಸ್‌ಪೆಕ್ಟರ್ ಪ್ರಸಾದ್ ಅವರು ಇದಾಯತ್ ಉಲ್ಲಾ ಆಟೋ ಹತ್ತಿದ ಸ್ಥಳದಿಂದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದವರೆಗಿನ ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ಪರಿಶೀಲಿಸುತ್ತಿದ್ದ ವೇಳೆ ಇದಾಯತ್ ಉಲ್ಲಾ ತಾನು ಪ್ರಯಾಣಿಸಿದ ಆಟೋವನ್ನು ಗುರುತಿಸಿದ್ದಾರೆ. ಆದರೆ ಅದರ ನಂಬರ್ ಸರಿಯಾಗಿ ಗೋಚರಿಸದ ಕಾರಣ ಆಟೋ ಹಿಂದೆ ಇದ್ದ ಕೆಲವು ವಾಕ್ಯಗಳು ಹಾಗೂ ಚಿತ್ರಗಳ ಆಧಾರದ ಮೇರೆಗೆ ಪೊಲೀಸರು ಆಟೋ ಸ್ಟ್ಯಾಂಡ್‌ನಲ್ಲಿ ಆಟೋ ಚಾಲಕನನ್ನು ವಿಚಾರಿಸಿದಾಗ ಇದಾಯತ್ ಉಲ್ಲಾ ಪ್ರಯಾಣಿಸಿದ ಆಟೋ ಪತ್ತೆಯಾಗಿದೆ. ಘಟನೆ ನಡೆದು ಗಂಟೆಯೊಳಗಾಗಿಯೇ ಆಟೋವನ್ನು ಪತ್ತೆ ಹಚ್ಚಿದ ಪೊಲೀಸರು ಅದರ ಚಾಲಕನನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ ಆತ ಪ್ರಯಾಣಿಕನ ಚಿನ್ನಾಭರಣವನ್ನು ಸುರಕ್ಷಿತವಾಗಿಟ್ಟಿರುವುದಾಗಿ ತಿಳಿಸಿ ಅದನ್ನು ಪೊಲೀಸರಿಗೆ ಒಪ್ಪಿಸಿದ್ದಾನೆ. ನಂತರ ಪೊಲೀಸರು ಚಿನ್ನಾಭರಣವಿದ್ದ ಬ್ಯಾಗ್ ಅನ್ನು ಇದಾಯತ್ ಉಲ್ಲಾ ಅವರಿಗೆ ನೀಡಿದರು. ಕಾರ್ಯಾಚರಣೆಯಲ್ಲಿ ಲಷ್ಕರ್ ಠಾಣೆಯ ಎಎಸ್‌ಐ ಶಂಕರ್, ಸಿಬ್ಬಂದಿಗಳಾದ ನದಾಫ್ ಹಾಗೂ ಕಿರಣ್‌ಕುಮಾರ್ ಭಾಗವಹಿಸಿದ್ದರು. ಈ ಪೊಲೀಸ್ ತಂಡವನ್ನು ನಗರ ಪೊಲೀಸ್ ಆಯುಕ್ತ ಡಾ.ಬಿ.ರಮೇಶ್, ಡಿಸಿಪಿಗಳಾದ ಮುತ್ತುರಾಜ್, ಜಾಹ್ನವಿ ಹಾಗೂ ಎಸಿಪಿ ಶಾಂತಮಲ್ಲಪ್ಪ ಪ್ರಶಂಸಿಸಿದ್ದಾರೆ.

ಪತ್ರಕರ್ತರಿಗೆ ಮರ್ಯಾದೆ ಕೊಡುವುದನ್ನು ಕಲಿಯಿರಿ

ಪ್ರತಾಪ್ ಸಿಂಹಗೆ ಲಕ್ಷ್ಮಣ ಸಲಹೆ

ಮೈಸೂರು, ಜ.20(ಬಿಎಲ್‌ಯು)– ನಾನು ಪತ್ರಕರ್ತ ಎಂದು ಹೇಳಿಕೊಳ್ಳುವ ಮೊದಲು ಪತ್ರಕರ್ತರಿಗೆ ಮರ್ಯಾದೆ ಕೊಡುವುದನ್ನು ಕಲಿತುಕೊಳ್ಳಿ ಎಂದು ಸಂಸದ ಪ್ರತಾಪ್ ಸಿಂಹರಿಗೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಇಂದಿಲ್ಲಿ ಸಲಹೆ ನೀಡಿದ್ದಾರೆ.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪತ್ರಕರ್ತ ಎಂದು ಹೇಳಿಕೊಳ್ಳುತ್ತೀರಾ. ಆದರೆ ಪತ್ರಕರ್ತರ ಪ್ರಶ್ನೆಗೆ ಉತ್ತರ ಕೊಡದೆ ಪಲಾಯನ ಮಾಡುತ್ತೀರಾ ಎಂದು ಟೀಕಿಸಿದರು.

ಮಾಧ್ಯಮದವರು ಕೇಳುವ ಪ್ರಶ್ನೆಗೆ ಉತ್ತರ ಕೊಡದೆ ಉದ್ಧಟತನದಿಂದ ಮಾತನಾಡುವ ನಡವಳಿಕೆಯನ್ನು ಮೊದಲು ತಿದ್ದಿಕೊಳ್ಳಿ ಎಂದು ಪ್ರತಾಪ್ ಸಿಂಹಗೆ ಲಕ್ಷ್ಮಣ್ ಸಲಹೆ ನೀಡಿದರು.

ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಷಿ ಹುಬ್ಬಳ್ಳಿಯ ರೈಲ್ವೆ ಕ್ವಾಟ್ರರ್ಸ್ ಬಳಿಯ 13 ಎಕರೆ ಜಾಗವನ್ನು ತಮ್ಮ ಸಹೋದರನಿಗೆ 99 ವರ್ಷಕ್ಕೆ ಲೀಸ್‌ಗೆ ಕೊಡಿಸಿದ್ದಾರೆ. 13 ಎಕರೆಗೆ ಸರ್ಕಾರದ ಬೆಲೆ 680 ಕೋಟಿಯಾದರೆ, ಮಾರುಕಟ್ಟೆ ಬೆಲೆ 1,300 ಕೋಟಿ. ರೈಲ್ವೆ ಆಸ್ತಿಯನ್ನು ಹೇಗೆ ಕೊಡಿಸಿದರು ಎಂಬುದರ ಬಗ್ಗೆ ಪ್ರಹ್ಲಾದ್ ಜೋಷಿ ಉತ್ತರ ಕೊಡಬೇಕು ಎಂದು ಲಕ್ಷ್ಮಣ್ ಆಗ್ರಹಿಸಿದರು.

ಮುಸ್ಲಿಂರಲ್ಲಿದ್ದ ಮೀಸಲಾತಿ ಕಸಿದುಕೊಂಡ ಬಿಜೆಪಿ ಸರ್ಕಾರ ಲಿಂಗಾಯತರಿಗೆ ಕೊಟ್ಟಿತು. ಆದರೆ ಅದೂ ಊರ್ಜಿತ ಆಗಲಿಲ್ಲ. ಇದರಲ್ಲಿ ನಿಮ್ಮ ರಾಜಕೀಯ ಏನು ಎಂದು ಜನರಿಗೆ ಮನದಟ್ಟಾಯಿತು. ಶ್ರೀರಾಮುಲು ಅವರನ್ನು ಉಪಮುಖ್ಯಮಂತ್ರಿ ಮಾಡಿ ನಾಯಕ ಸಮಾಜಕ್ಕೆ ನ್ಯಾಯ ಕೊಡಿಸುವುದಾಗಿ ಭರವಸೆ ಕೊಟ್ಟರು. ಆದರೆ ನಾಯಕ ಸಮಾಜಕ್ಕೆ ಕೊಟ್ಟ ಆಶ್ವಾಸನೆ ಈಡೇರಿಸಲಿಲ್ಲ. ಇಂತಹ ನಿಮ್ಮ ರಾಜಕೀಯ ತಂತ್ರಗಾರಿಕೆ ಅರಿವಾದ ಕಾರಣ ಕರ್ನಾಟಕದ ಜನತೆ ನಿಮ್ಮನ್ನು ತಿರಸ್ಕರಿಸಿದರು ಎಂದು ಲಕ್ಷ್ಮಣ್ ಬಿಜೆಪಿ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದರು.



ದಿ ಗ್ರಾಜ್ಯುಯೇಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ಮಾನ್ಯರೇ,
ದಿನಾಂಕ 21-01-2024ನೇ ಭಾನುವಾರ ನಡೆಯಲಿರುವ ಚುನಾವಣೆಯಲ್ಲಿ ಈ ಕೆಳಕಂಡ 11 ಅಭ್ಯರ್ಥಿಗಳಿಗೆ ಮತ ನೀಡಿ ಜಯಶೀಲರನ್ನಾಗಿ ಮಾಡಬೇಕಾಗಿ ಕೋರುತ್ತೇವೆ.

1	ಆರ್. ಅನಂತರಾಮು
2	ಸಿ.ಕಮಲಮ್ಮ
4	ಎಸ್.ಎನ್. ಜಗದೀಶ್
5	ಪ್ರೊ. ಪಿ.ವಿ. ನರಹರಿ
8	ಟಿ.ಎಸ್.ರವಿಶಂಕರ್
10	ಡಾ|| ಕೆ.ವಿ. ಲಕ್ಷ್ಮೀದೇವಿ
13	ಎನ್ ಶ್ರೀನಿವಾಸ
14	ಕೆ.ಜಿ. ಸತೀಶ್
15	ಡಾ|| ಸುಜಾತ ಶ್ರೀನಿವಾಸ ರಾವ್
16	ಎಲ್.ಸೋಮಣ್ಣ
18	ಎಂ.ಎ.ಹೇಮಲತ

ಈಗಾಗಲೇ ಅವಿರೋಧವಾಗಿ ಚುನಾಯಿತರಾಗಿರುವ
1. ಶ್ರೀಮತಿ ಸುಜಾತ ವೆಂಕಟರಾಜು 2. ಶ್ರೀಮತಿ ಆರ್. ವರಲಕ್ಷ್ಮಿ
ಆದ ನಾವುಗಳು ಮೇಲ್ಕಂಡ 11 ಅಭ್ಯರ್ಥಿಗಳಿಗೆ ಮಾತ್ರ ಮತ ಚಲಾಯಿಸಬೇಕೆಂದು ತಮ್ಮಲ್ಲಿ ಕೋರುತ್ತೇವೆ.

ಸ್ಥಳ : ಹಾರ್ಡ್ವಿಕ್ ಪ್ರೌಢಶಾಲೆ, ಜೆ.ಎಲ್.ಬಿ.ರಸ್ತೆ, ಮೈಸೂರು
ದಿನಾಂಕ : 21-01-2024ನೇ ಭಾನುವಾರ
ಸಮಯ : ಬೆಳಗ್ಗೆ 9.00 ರಿಂದ 4.00 ಗಂಟೆಯವರೆಗೆ
ವಿ.ಸೂಚನೆ : ಮತದಾನ ಮಾಡಲು ಕಡ್ಡಾಯವಾಗಿ ಗುರುತಿನಚೀಟಿ ತರಬೇಕಾಗಿ ವಿನಂತಿ

ನಕ್ಕರೆ ಅದೇ ಸ್ವರ್ಗ

ವೈದ್ಯರು : ನಿಮ್ಮ ಗಂಡನಿಗೆ ಎಲ್ಲಾ ರೀತಿಯ ಪರೀಕ್ಷೆ ಮಾಡಿಯಾಯ್ತು, ಏನ್ ಸಮಸ್ಯೆ ಇದೆ ಅಂತಾ ಗೊತ್ತಾಗ್ತ ಇಲ್ಲ...

ಪತ್ನಿ : ಸಾರ್, ಅದೇನೋ ಪೋಸ್ಟ್ ಮಾರ್ಟಮ್ ಅಂತ ಮಾಡ್ತಾರಲ್ಲಾ, ಅದನ್ನಾದರೂ ಮಾಡಿ ನೋಡಿ!

ಮೈಸೂರು ಮಿತ್ರ
ಭಾನುವಾರ, 21 ಜನವರಿ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

'ನೆಮ್ಮದಿ ಬೇಕೆಂದರೆ ಹುಡುಕುತ್ತಲೇ ಇರಬೇಕು, ಮೊದಲು ಮನದೊಳಗೆ, ನಂತರ ಜಗದೊಳಗೆ'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಅಟ್ಟು ಅಟ್ಟು ಪ್ರಾಣ ಹೋದ್ರು ಹೊಟ್ಟೆ ಹಸಿವು ನಿಲ್ಲಲಿಲ್ಲ'

ನಿಮ್ಮ ಪತ್ರಗಳು

■ ಮತ್ತೆ ಉಕ್ಕಿ ಹರಿಯುತ್ತಿರುವ ಮ್ಯಾನ್‌ಹೋಲ್



ಮಾನ್ಯರೆ,

ಮೈಸೂರಿನ ಜಯನಗರದ ಮಳಲವಾಡಿಯಲ್ಲಿರುವ ಅಯ್ಯಪ್ಪ ಸ್ವಾಮಿ ಮತ್ತು ಆಂಜನೇಯ ಸ್ವಾಮಿ ದೇವಸ್ಥಾನದ ಕಾಂಪೌಂಡ್ ಪಕ್ಕದಲ್ಲಿಯೇ ಇರುವ ಮ್ಯಾನ್ ಹೋಲ್ ಹಲವಾರು ತಿಂಗಳುಗಳಿಂದ ತೆರೆದುಕೊಂಡು ಒಳಚರಂಡಿ ನೀರು ಉಕ್ಕಿ ಹರಿದು ಅಲ್ಲಿನ ವಾತಾವರಣವೇ ಗಬ್ಬುನಾರುತ್ತಿತ್ತು.ಹೀಗಾಗಿ, ಸಂಬಂಧ ಪಟ್ಟವರು ಕೆಲವು ದಿನಗಳ ಹಿಂದೆ ದುರಸ್ತಿಯನ್ನು ಮಾಡಿದ್ದರು.

ಆದರೆ, ಸರಿಯಾಗಿ ದುರಸ್ತಿ ಮಾಡದ ಕಾರಣ ಮೊದಲಿಗಿಂತಲೂ ಹೆಚ್ಚಿನ ಗಲೀಜು ನೀರು ಉಕ್ಕಿಹರಿದು ಅಲ್ಲಲ್ಲಿ ನಿಂತು., ಸೊಳ್ಳೆಗಳ ಕಾಟ ವಿಪರೀತವಾಗಿದೆ. ಅಕ್ಕಪಕ್ಕದ ಮನೆಯವರೂ ಸೇರಿದಂತೆ ದೇವಸ್ಥಾನಕ್ಕೆ ಬರುವ ಭಕ್ತಾದಿಗಳು ಮೂಗು-ಬಾಯಿ ಮುಚ್ಚಿಕೊಂಡು ಓಡಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿ, ಸಾಂಕ್ರಾಮಿಕ ರೋಗದ ಭೀತಿಯೂ ಎದುರಾಗಿದೆ.ಆದ್ದರಿಂದ, ಸಂಬಂಧಪಟ್ಟವರು ಇನ್ನಾದರೂ ಎಚ್ಚೆತ್ತು, ವ್ಯವಸ್ಥಿತವಾಗಿ ಪೈಪ್‌ಲೈನ್ ಅಳವಡಿಸುವುದರ ಜೊತೆಗೆ ಮ್ಯಾನ್‌ಹೋಲ್ ದುರಸ್ತಿಗೊಳಿಸಿ ಅಲ್ಲಿನ ನೈರ್ಮಲ್ಯ ಕಾಪಾಡಬೇಕಿದೆ.

-ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

■ ಹಳಿ ತಪ್ಪುತ್ತಿರುವ ಗೃಹಲಕ್ಷ್ಮಿ ಯೋಜನೆ

ಮಾನ್ಯರೆ,

ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿರುವ ಜನಪ್ರಿಯ ಜನಪರ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮಿ ಅನೇಕ ಜನರಿಗೆ ಅನುಕೂಲ ಮಾಡಿಕೊಟ್ಟಿದೆ. ಇದಕ್ಕೆ ಸರ್ಕಾರ ನಿಗದಿಪಡಿಸಿದ ಬಡತನರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಮಾತ್ರ ಈ ಯೋಜನೆ ತಲುಪುವಂತೆ ಮಾಡಲು ಬಿಪಿಎಲ್ ಪಡಿತರ ಚೀಟಿಯನ್ನು ಕಡ್ಡಾಯ ಮಾಡಲಾಗಿದೆ. ಇದಕ್ಕೆ ಬೇಕಾದ ದಾಖಲೆಗಳನ್ನು ಒದಗಿಸಿ ಈಗಾಗಲೇ ಬಹುಪಾಲು ಜನರು ಈ ಯೋಜನೆಯ ಲಾಭ ಪಡೆಯುತ್ತಿದ್ದಾರೆ. ಈ ಯೋಜನೆ ಇನ್ನಷ್ಟು ಸಮರ್ಪಕವಾಗಿ ಬಳಕೆಯಾಗಲು, ಮತ್ತಷ್ಟು ಪರಿಣಾಮಕಾರಿಯಾಗಿ ಜಾರಿಗೆ ಬರಲು ಇನ್ನೂ ಕೆಲದಿನ ಕಾಯಲೇಬೇಕು. ಯಾವ ಕಾರಣಕ್ಕಾಗಿ ಶುರುವಾಯಿತೋ ಆ ಉದ್ದೇಶ ಹಳಿ ತಪ್ಪುತ್ತಾ ಸಾಗಿದೆ. ಅದಕ್ಕೆ ಇತ್ತೀಚಿನ ವಿದ್ಯಮಾನಗಳು ಸಾಕ್ಷಿಭೂತವಾಗಿವೆ.

ಏತನ್ಮಧ್ಯೆ ರೇಷನ್ ಕಾರ್ಡ್ ಕಡ್ಡಾಯ ಹಿನ್ನೆಲೆಯಲ್ಲಿ ಕೆಲವರು ಏನೇನೋ ಕಾರಣಗಳಿಂದಾಗಿ ರೇಷನ್ ಕಾರ್ಡ್‌ಗೆ ಹೆಸರು ಸೇರ್ಪಡೆ, ವಿಳಾಸ ತಿದ್ದುಪಡಿ, ಯಜಮಾನಿ ಬದಲಾವಣೆ ಎಂಬಿತ್ಯಾದಿ ಪ್ರಶ್ನೆಗಳಿಗೆ ಒಂದಷ್ಟು ದಿನಗಳು ಅದರಲ್ಲೂ ಒಂದೊಂದು ವಲಯಕ್ಕೆ ಮೂರು ಮೂರು ದಿನಗಳ ಗಡುವು ನೀಡಲಾಗಿತ್ತು. ಆದರೆ ಸರ್ವರ್ ದೋಷದ ಕಾರಣ ಈ ತಿದ್ದುಪಡಿ ಕೆಲಸ ಇನ್ನೂ ಬಾಕಿಯಿದೆ. ಇದು ಸರ್ಕಾರಕ್ಕೂ ಗೊತ್ತಿಲ್ಲ ಎನ್ನುವಂತಿಲ್ಲ. ಜಾಣನಡೆ ಎಂದು ಜನರಿಗೂ ಗೊತ್ತು. ಈಗ ಹೇಗೋ ಸರ್ವರ್ ದೋಷದ ನಡುವೆಯೂ ತಿದ್ದುಪಡಿ ಆಗಿರುವ ರೇಷನ್ ಕಾರ್ಡ್‌ಗಳು, ಡೇಟಾ ವಿವರಗಳನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯೂ ಸ್ವೀಕಾರ ಮಾಡಿಲ್ಲ. ಈ ಕಾರಣವಾಗಿ ಎಷ್ಟೋ ಜನ ಗೃಹಲಕ್ಷ್ಮಿಯರು ಅರ್ಜಿ ಸಲ್ಲಿಸಲು ಕಾದಿದ್ದಾರೆ, ಅರ್ಜಿ ಸ್ವೀಕಾರವಾಗಿ ತಮ್ಮ ಗೃಹಲಕ್ಷ್ಮಿ ಹಣ ಯಾವಾಗ ತಮ್ಮ ಖಾತೆಗೆ ಜಮಾ ಆಗುವುದೋ ಎಂದು ಕಾದು ಕಾದು ಬೇಸ್ತು ಬಿದ್ದಿದ್ದಾರೆ. ಆದರೆ ಅದೂ ಈ ಕಾಲಕ್ಕೆ ಆಗೋಲ್ಲ ಎಂಬ ಸಮಾಧಾನದಲ್ಲಿಯೇ ದಿನ ದೂಡುತ್ತಿದ್ದಾರೆ. ತಮಗೆ ತಾವೇ ತಾಳ್ಮೆ ಹೇಳಿಕೊಂಡಿದ್ದಾರೆ. ಇನ್ನು ಮುಂದಾದರೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರು, ಇಲಾಖೆಯ ಸಂಬಂಧಿತ ಅಧಿಕಾರಿಗಳು, ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಆದಷ್ಟು ಬೇಗ ಇತ್ತ ಗಮನಹರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂಬುದು ಬಲವಾದ ಮನವಿ. ಇಲ್ಲವಾದರೆ ಈ ವಿಷಯವಾಗಿ ರಾಜ್ಯಾದ್ಯಂತ ಪ್ರತಿಭಟನೆಗಳು ಶುರುವಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

-ಎ.ಎಸ್.ಗೋವಿಂದೇಗೌಡ, ಕನ್ನಡ ಉಪನ್ಯಾಸಕರು, ಅರೇನಹಳ್ಳಿ ಗ್ರಾಮ, ಪಿರಿಯಾಪಟ್ಟಣ ತಾ.

■ ಶಿಲ್ಪಿ ಅರುಣ್ ಯೋಗಿರಾಜ್ ಯೋಗವಂತ



ಮಾನ್ಯರೆ,

ಹೆಸರಿನಲ್ಲೇ ಇರುವಂತೆ ಶಿಲ್ಪಿ ಅರುಣ್ ಯೋಗಿರಾಜ್, ಯೋಗವಂತ. ನಮ್ಮ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ತಮ್ಮ ಹೆಸರಿನಲ್ಲೇ ಇರುವಂತೆ ನಿಜವಾಗಿಯೂ ಯೋಗವಂತ ಎನ್ನುವುದರಲ್ಲಿ ಎರಡು ಮಾತಿಲ್ಲ. ಮರ್ಯಾದಾ ಪುರುಷೋತ್ತಮ ಶ್ರೀ ರಾಮನ ಜನ್ಮಸ್ಥಾನ ಅಯೋಧ್ಯೆಯ ಭವ್ಯ ಮಂದಿರದ ಗರ್ಭಗುಡಿಯಲ್ಲಿ ನಮ್ಮ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಅವರ ಕೆತ್ತನೆಯ ಬಾಲರಾಮನ ಮೂರ್ತಿ ಪ್ರತಿಷ್ಠಾಪನೆ ಗೊಳ್ಳುತ್ತಿರುವುದು ಮೈಸೂರಿಗರಾದ ನಾವು ಹೆಮ್ಮೆ ಪಡುವ ಸಂಗತಿ. ಇಡೀ ವಿಶ್ವದಲ್ಲಿ ರಾಮ ಭಕ್ತರು ಇರುವ ಮನೆಯಲ್ಲಿ ಪ್ರತಿಯೊಬ್ಬರ ಮನದಲ್ಲೂ ಅರುಣ್ ಯೋಗಿರಾಜ್ ಮನೆ ಮಾತಾಗಿದ್ದಾರೆ. ಈ ಭವ್ಯ ಮೂರ್ತಿ ನಿರ್ಮಾಣವಾಗಲು ಕೃಷ್ಣಶಿಲೆಯನ್ನು ಗುಜ್ಜೇಗೌಡನಪುರದ ಗಣಿ ಮಾಲೀಕರಾದ ಶ್ರೀನಿವಾಸ್ ಅವರು ಹಣವನ್ನು ಪಡೆಯದೆ ಆಯೋಧ್ಯೆಗೆ ಕಳುಹಿಸಿಕೊಟ್ಟಿರುವುದು ತುಂಬಾ ಶ್ಲಾಘನೀಯ ಸಂಗತಿ. ಈ ಭವ್ಯ ಮೂರ್ತಿ ನಿರ್ಮಾಣವಾಗಲು ನೆರವಾದ ಅವರ ತಂದೆಯ ಸ್ನೇಹಿತರಾದ ನಟರಾಜ್, ಶಿಲ್ಪಿಗಳಾದ ಮಾನಯ್ಯ ಬಡಿಗೇರ್, ಸುರೇಂದ್ರ ಶರ್ಮಾ, ಯೋಗಿರಾಜ್ ಅವರ ತಾಯಿ ಸರಸ್ವತಿ, ಪತ್ನಿ ವಿಜೇತ, ಸಹೋದರಿ ಚೇತನ ಮತ್ತು ಕುಟುಂಬದ ವರ್ಗದ ಪ್ರತಿಯೊಬ್ಬರೂ ಅಭಿನಂದನಾರ್ಹರು.


-ಬೆಸಗರಹಳ್ಳಿ ರವಿಪ್ರಸಾದ್, ಮೈಸೂರು.



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167

ಬಹುಮುಖಿ

ಸಿದ್ಧಗಂಗೆಯ ಸಿದ್ಧಪುರುಷರು
ಶ್ರೀ ಶಿವಕುಮಾರ ಸ್ವಾಮೀಜಿ



ಶ್ರೀ ಶ್ರೀ ಶ್ರೀ ಡಾ. ಶಿವಕುಮಾರ ಸ್ವಾಮೀಜಿ

**ಸಾಮಾನ್ಯರಾಗಿ ಹುಟ್ಟಿ ಅಸಾಮಾನ್ಯರಾಗಿ ಬೆಳೆದು
ಮನುಷ್ಯತ್ವದಿಂದ ದೈವತ್ವಕ್ಕೇರಿದ
ದೇವಪುರುಷರು ನೀವು ಅಕ್ಷರಶಃ ದೇವರೇ
ಶರಣು ನಿಮಗೆ ನಿತ್ಯಶರಣೆಂಬೆವು**

ಅರವತ್ತು-ಎಪ್ಪತ್ತರ ದಶಕದ ಮಧ್ಯಭಾಗ ಅಂತ ಕಾಣುತ್ತದೆ. ನಿಜಲಿಂಗಪ್ಪ ನಾಡಿನ ಮುಖ್ಯಮಂತ್ರಿಗಳಾಗಿದ್ದ ಕಾಲವದು. ಆಗೊಮ್ಮೆ ಕರ್ನಾಟಕಕ್ಕೆ ಬರಗಾಲ ಬಂದಿತ್ತು. ಬಡಜನತೆಗೆ ತುತ್ತು ಕೂಳಿಗೆ ಪರದಾಡುವಂತಹ ಕಷ್ಟದ ದಿನಗಳವು. ಹಸಿದ ಹೊಟ್ಟೆಗಳನ್ನೊತ್ತ ಬಡಜನರು ಅನ್ನಕ್ಕಾಗಿ ಬಾಯ್ಬಿಟ್ಟುಕೊಂಡು ತಂಡೋಪತಂಡವಾಗಿ ಮಠವೊಂದರ ಮುಂದೆ ಜಾತ್ರೆಯಂತೆ ಜಮಾಯಿಸಿದ್ದರು. ಆದರೆ ಇವರನ್ನು ಕಂಡು ಅಲ್ಲಿನ ಸ್ವಾಮೀಜಿ ಕಿಂಚಿತ್ತೂ ಬೇಸರಿಸಿಕೊಳ್ಳದೆ ಸ್ವತಃ ತಾವೇ ನಿಂತು ಊಟದ ಜೊತೆಗೆ ಆಶ್ರಯವನ್ನೂ ನೀಡಿ ಮಠದ ಮಕ್ಕಳೊಡನೆ ಆ ಬಡಜನತೆಯನ್ನು ಸಲಹತೊಡಗಿದರು. ಒಂದು ಮಧ್ಯಾಹ್ನ ಉರಿಬಿಸಿಲನ್ನೂ ಲೆಕ್ಕಿಸದೆ ಬರಿಗಾಲಲ್ಲೇ ನಿಂತು ಸರದಿಯಲ್ಲಿದ್ದ ಆ ಬಡಜನರಿಗೆ ಊಟ ನೀಡುವ ಉಸ್ತುವಾರಿಯನ್ನು ಮಠದ ಸ್ವಾಮೀಜಿ ನಿರ್ವಹಿಸುತ್ತಿರುತ್ತಾರೆ. ಈ ಮಠ ಮತ್ತು ಅಲ್ಲಿನ ಸ್ವಾಮೀಜಿ ಬಗ್ಗೆ ಮಾಹಿತಿ ತರಿಸಿಕೊಂಡು ಅಲ್ಲಿಗೆ ದಿಢೀರನೆ ಭೇಟಿ ನೀಡಿದ ಅಂದಿನ ಮುಖ್ಯಮಂತ್ರಿ ನಿಜಲಿಂಗಪ್ಪನವರು ಅಲ್ಲಿನ ದೃಶ್ಯ ಕಂಡು ಬೆರಗಾಗಿ "ಅಬ್ಬಾ ಎಂಥಾ ದಾಸೋಹ!" ಎಂದು ಹೃದಯ ತುಂಬಿ ಉದ್ಗರಿಸುತ್ತಾರೆ. ತಕ್ಷಣವೇ ತಮ್ಮ ಬಳಿಯೇ ಇದ್ದ ಜಿಲ್ಲಾಧಿಕಾರಿಗಳಿಗೆ ಬರಪೀಡಿತರಿಗೆ ಸ್ವಯಂ ಸೇವೆ ಸಲ್ಲಿಸುತ್ತಿರುವ ಈ ಮಠಕ್ಕೆ ಯಾವುದೇ ರೀತಿಯ ತೊಂದರೆ ತಲೆದೋರದಂತೆ ಜಿಲ್ಲಾಡಳಿತ ಸಹಕರಿಸಬೇಕೆಂದು ಸೂಚಿಸುತ್ತಾರೆ. ಹಾಗೆಯೇ ಅಲ್ಲಿನ ಸ್ವಾಮೀಜಿಗಳ ಪಾದಕ್ಕೆ ಶರಣು ಎನ್ನುತ್ತಾರೆ. ಆ ಸ್ವಾಮೀಜಿಯೇ ಅಣ್ಣ ಬಸವಣ್ಣನ ಪುನರಾವತಾರದಂತಿದ್ದ ಪುಣ್ಯ ಪುರುಷ ಡಾ. ಶಿವಕುಮಾರ ಸ್ವಾಮೀಜಿ! ದಾಸೋಹದ ಸ್ವರ್ಗವಾಗಿರುವ ಆ ಮಠವೇ ಸಿದ್ಧಗಂಗೆ ಪುಣ್ಯ ಕ್ಷೇತ್ರ!

ಕಳೆದ ಏಳೆಂಟು ದಶಕಗಳಿಂದಲೂ ಅನ್ನ, ಆಶ್ರಯ, ಅಕ್ಷರ ಈ ಮೂರನ್ನೂ ಎಲ್ಲಾ ಬಡಬಗ್ಗರಿಗೆ, ಅಸಹಾಯಕರಿಗೆ ಧಾರೆಯೆರೆಯುತ್ತಾ ತ್ರಿವಿಧ ದಾಸೋಹದಲ್ಲಿ ಅವಿರತವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದ ಶ್ರೀ ಸಿದ್ಧಗಂಗಾ ಮಠಾಧೀಶರಾಗಿದ್ದ ಡಾ.ಶಿವಕುಮಾರ ಸ್ವಾಮೀಜಿ ಇಡೀ ರಾಷ್ಟ್ರವೇ ತಮ್ಮತ್ತ ಕಣ್ಣೆತ್ತಿ ನೋಡುವಂತೆ ಸೇವೆಯ ಹಿಮಾಲಯವಾಗಿ ಬೆಳೆದು ನಿಂತವರು. ತಮ್ಮ ಕೈಂಕರ್ಯದ ಬೆಳಕಿನಿಂದ ವಿಶ್ವವನ್ನೇ ಬೆರಗುಗೊಳಿಸಿದವರು. ಇತರೆ ಸ್ವಾಮೀಜಿಗಳಂತೆ ಇವರು ಯಾವುದೋ ಒಂದು ಜನಾಂಗಕ್ಕೆ, ಜಾತಿಗೆ ಮಾತ್ರ ಸೀಮಿತವಾಗದೆ ಜಾತಿ, ಮತ, ಪಂಥ, ಧರ್ಮಗಳ ಭೇದಭಾವವಿರದೆ "ಇವನಾರವ ಇವನಾರವ ನೆನ್ನದೆ ಇವ ನಮ್ಮವ ಇವ ನಮ್ಮವ" ನೆನ್ನುತ ಬಸವ ಬೆಳಕಿನಲ್ಲಿ ಸಮಾಜ ಸೇವೆಗೈದು ಮಹಾಮಾನವತಾವಾದಿಯಾಗಿ ಜನಮನಸ್ಸ ಗೆದ್ದವರು. ಮಹಾಜ್ಞಾನಿಗಳೂ, ಮಹಾಯೋಗಿಗಳೂ ಆಗಿದ್ದ ಇವರು ಕ್ರಿಸ್ತ, ಬುದ್ಧ, ಬಸವ, ಅಂಬೇಡ್ಕರ್, ಗಾಂಧಿ, ಪೈಗಂಬರ್, ಪ್ಲೇಟೋ, ಅರಿಸ್ಟಾಟಲ್, ರಾಮಕೃಷ್ಣ ಪರಮಹಂಸ, ವಿವೇಕಾನಂದ, ಮಹಾವೀರ ಮುಂತಾದ ವಿಶ್ವದ ನೂರಾರು ಚಿಂತಕರ ವಿಚಾರಧಾರೆಯನ್ನು ಅರೆದು ಕುಡಿದವರಂತೆ ಜ್ಞಾನದ ಮಹಾಪರ್ವವಾಗಿದ್ದರು. ಹಾಗೆಯೇ ತಮ್ಮ ಬಳಿಗೆ ಬಂದವರಿಗೆಲ್ಲಾ ನೆರಳು ನೀಡುವ ಮಹಾವೃಕ್ಷವಾಗಿದ್ದರು. ಶ್ರೀ ಸಿದ್ಧಗಂಗಾ ಮಠವನ್ನು ಮಾನವ ಕುಲದ ಮಹಾಮನೆಯನ್ನಾಗಿಸಿದ ಮಹಾಕೀರ್ತಿ ಈ ತ್ರಿವಿಧ ದಾಸೋಹ ಮೂರ್ತಿಗೆ ಸಲ್ಲುತ್ತದೆ.

ಸಿದ್ಧಗಂಗೆಯ ಸಿದ್ಧಿಪುರುಷ ಜಗದ್ಗುರು ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿಯವರ ಪುಣ್ಯಸ್ಮರಣೆ ಇಂದು

ಇಂದಿಗೂ ಅನ್ನಕ್ಕಾಗಿ ಸಿದ್ಧಗಂಗೆಯಲ್ಲಿ ಇವರು ಹಚ್ಚಿದ ಒಲೆ ಉರಿಯುತ್ತಲೇ ಇದೆ. ಆಶ್ರಯಕ್ಕಾಗಿ ಇವರು ಅಡಿಗಲ್ಲಿಟ್ಟ ತಾಣ ಸೇವಾಸೌಧವಾಗಿ ಬೆಳೆಯುತ್ತಲೇ ಇದೆ. ಇವರು ಹೊತ್ತಿಸಿದ ಅಕ್ಷರ ಜ್ಯೋತಿ ಆರದ ನಂದಾದೀಪವಾಗಿ ಬೆಳಗುತ್ತಲೇ ಇದೆ. ಪ್ರತಿನಿತ್ಯ ಇಲ್ಲಿ ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ಮಂದಿ ಊಟ ಮಾಡುತ್ತಾರೆಂದರೆ, ಸಹಸ್ರಾರು ಮಂದಿ ಆಶ್ರಿತರಾಗಿದ್ದಾರೆಂದರೆ, ಸಂಸ್ಥೆಗಳಲ್ಲಿ ಸುಮಾರು ಅರ್ಧಲಕ್ಷ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆಂದರೆ ಯಾರು ಬೇಕಾದರೂ ಊಹಿಸಬಹುದು ಶಿವಕುಮಾರ ಸ್ವಾಮೀಜಿಯ ಮಹಾಕರ್ತೃತ್ವ ಶಕ್ತಿಯನ್ನು, ಕಾಯಕದ ಮಹಾಮಹಿಮೆಯನ್ನು. ಇವರನ್ನು ನಡೆದಾಡುವ ದೇವರು, ಮಹಾಮಹಿಮರು, ಅವತಾರ ಪುರುಷರು, ಕರ್ಮಯೋಗಿಗಳು, ಇಪ್ಪತ್ತೊಂದನೆ ಶತಮಾನದ ಬಸವಣ್ಣನವರು, ಹೀಗೆ ಹಲವಾರು ಪದಪುಂಜಗಳಿಂದ, ಬಿರುದು ಬಾವಲಿಗಳಿಂದ ಕರೆದು ಆನಂದಿಸುವ ಭಕ್ತಜನ ಸಮೂಹವೇ ಇದೆ. ಇವರಲ್ಲಿ ಹೆಚ್ಚಿನವರು ಸಿದ್ಧಗಂಗೆಯ ಸ್ವಾಮೀಜಿಯ ಸದ್ಬೆಳಕಿನಲ್ಲಿ ತಮ್ಮ ಬದುಕನ್ನು ಕಟ್ಟಿಕೊಂಡವರೇ ಆಗಿದ್ದಾರೆ. ರಾಷ್ಟ್ರಕವಿ ಡಾ.ಜಿ.ಎಸ್.ಶಿವರುದ್ರಪ್ಪ ಅವರಂತಹ ಅನೇಕ ಮಂದಿ ಮಹಾಪ್ರತಿಭೆಗಳು ಇಲ್ಲಿ ಅರಳಿವೆ. ಇಲ್ಲಿನ ಸೇವೆಯ ಸಿರಿಘಸಲನ್ನು ಅನುಭವಿಸಿರುವ ಡಾ.ಜಿ.ಎಸ್.ಶಿವರುದ್ರಪ್ಪನವರು ಹೇಳುತ್ತಾರೆ-

"ಕಾವಿಯುಡುಗೆಯನುಟ್ಟು ನಭವೇ ಕಿರಣ ಹಸ್ತವ ಚಾಚಿದೆ
ಎಲ್ಲಾ ನನ್ನವರೆನುವ ಭಾವದ ಕರುಣೆಯೇ ಕಣ್ತೆರೆದಿದೆ..."

ಇಂಥ ಮಹಾಮಾನವತಾವಾದಿ ಡಾ. ಶಿವಕುಮಾರ ಸ್ವಾಮೀಜಿ ಅವತರಿಸಿದ್ದು ಸಾವಿರದ ಒಂಬೈನೂರ ಎಂಟರ ಏಪ್ರಿಲ್ ಒಂದರಂದು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೋಲೂರು ಹೋಬಳಿಯ ವೀರಾಪುರ ಇವರಿಗೆ ಜನ್ಮ ನೀಡಿದ ಪುಣ್ಯ ಸ್ಥಳ. ಸುಸಂಸ್ಕೃತ ಮನೆತನದ ಹೊನ್ನೇಗೌಡ ಮತ್ತು ಗಂಗಮ್ಮ ದಂಪತಿಗಳೇ ಇವರನ್ನು ಹೆತ್ತ ಪುಣ್ಯವಂತರು. ಹದಿಮೂರು ಮಂದಿ ಮಕ್ಕಳಲ್ಲಿ ಇವರೇ ಕಿರಿಯವರು. ಶಿವಣ್ಣ ಎಂಬುದು ಇವರ ಪೂರ್ವಾಶ್ರಮದ ಹೆಸರು. ಇವರು ತುಮಕೂರಿನಲ್ಲಿ ಹೈಸ್ಕೂಲ್ ವ್ಯಾಸಂಗ ಮಾಡುತ್ತಿದ್ದಾಗ ತುಮಕೂರಿನಲ್ಲಿ ಭಯಂಕರ ಪ್ಲೇಗ್‌ರೋಗ ಬಂದು ಜನರು ಜೀವಭಯದಿಂದ ತತ್ತರಿಸುವಂತೆ ಮಾಡಿತ್ತು ಇಂತಹ ಸಂದರ್ಭದಲ್ಲಿ ಓದುವುದಾದರೂ ಹೇಗೆಂಬ ಆತಂಕ ಇವರನ್ನು ಕಾಡತೊಡಗಿತು. ಆದರೆ ಓದಿನಲ್ಲಿ ವಿಪರೀತ ಆಸಕ್ತಿ ಇದ್ದ ಇವರು ಹೇಗಾದರೂ ಮಾಡಿ ಓದನ್ನು ಮುಂದುವರಿಸುವ ಮಹದಾಸೆ ಇಟ್ಟುಕೊಂಡು ಇದಕ್ಕಾಗಿ ಮಾರ್ಗ ಹುಡುಕತೊಡಗಿದರು. ಆಗ ಕಾರ್ಗತ್ತಲಲ್ಲಿ ಇಣುಕುವ ಬೆಳಕಿನ ಹನಿಯಂತೆ ಗೋಚರಿಸಿದ್ದೇ ಶ್ರೀ ಸಿದ್ಧಗಂಗ ಮಠ. ಆ ಸಂದರ್ಭದಲ್ಲಿ ಅಲ್ಲಿಗೆ ಪ್ರವೇಶ ಮಾಡಿದ ಇವರು ಆಗ ಅಲ್ಲಿ ಮಠಾಧೀಶರಾಗಿದ್ದ ಶ್ರೀ ಉದ್ಧಾನ ಶಿವಯೋಗಿಗಳಲ್ಲಿ ಆಶ್ರಯ ಬೇಡಿದರು. ಅಪಾರ ವಿದ್ಯಾದಾಹದಿಂದ ಬಂದಿದ್ದ ಇವರು ಆಶ್ಚರ್ಯಕರ ರೀತಿಯಲ್ಲಿ ಪ್ರಥಮ ಭೇಟಿಯಲ್ಲೇ ಉದ್ಧಾನ ಶಿವಯೋಗಿಗಳ ಮನಸ್ಸನ್ನು ಆಕರ್ಷಿಸಿಬಿಟ್ಟರು.

ಸಿದ್ಧಗಂಗಾ ಮಠದಲ್ಲಿದ್ದುಕೊಂಡೇ ಹೈಸ್ಕೂಲ್ ವ್ಯಾಸಂಗ ಮುಗಿಸಿದ ಶಿವಕುಮಾರ ಸ್ವಾಮೀಜಿ ಅವರು ಆಗಲೇ ಆಧ್ಯಾತ್ಮ ಹಾಗೂ ಸಮಾಜ ಸೇವೆಯ ಬಗ್ಗೆ ವಿಶೇಷ ಆಸಕ್ತಿ ಬೆಳೆಸಿಕೊಂಡಿದ್ದರು. ಇವರಲ್ಲಿನ ಈ ಆದರ್ಶಗುಣ ಉದ್ಧಾನಶಿವಯೋಗಿಗಳಲ್ಲಿ ಇವರ ಬಗ್ಗೆ ಮತ್ತಷ್ಟು ಹೆಚ್ಚಿನ ಪ್ರೀತಿ ಮೂಡಲು ಕಾರಣವಾಗಿತ್ತು. ಈ ಅಭಿಮಾನದ ಪ್ರೀತಿಯಿಂದಲೇ ಶಿವಕುಮಾರ ಸ್ವಾಮೀಜಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. ಆನರ್ಸ್ ಪದವಿ ಪಡೆಯುತ್ತಿದ್ದಂತೆಯೇ 1930ರ ಮಾರ್ಚ್ 3ರಂದು ಉದ್ಧಾನ ಶ್ರೀಗಳು ಇವರನ್ನು ಸಿದ್ಧಗಂಗಾ ಮಠದ ಕಿರಿಯ ಶ್ರೀಗಳನ್ನಾಗಿ ನೇಮಿಸಿದರು. ನಂತರದ ದಿನಗಳಲ್ಲಿ ಉದ್ಧಾನ ಶಿವಯೋಗಿಗಳು ಕಾಲವಾದ ನಂತರ 1941ರಲ್ಲಿ ಶಿವಕುಮಾರ ಸ್ವಾಮೀಜಿ ಸಿದ್ಧಗಂಗಾ ಮಠದ ಪೀಠವನ್ನೇರಿದರು. ಅಲ್ಲಿಂದೀಚೆಗೆ ಬಹು ಮುಖ್ಯವಾದ ಜವಾಬ್ದಾರಿಯನ್ನು ತಲೆಮೇಲೆ ಹೊತ್ತುಕೊಂಡು ಶ್ರೀ ಮಠದ ಅಭಿವೃದ್ಧಿಗಾಗಿ ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ಊರೂರು ಅಲೆದು ನಿಜದ ಅರ್ಥದಿ ಜಂಗಮರೇ ಆಗಿ ಸಾತ್ವಿಕ ಮನಸ್ಸಿನಿಂದ ಜೋಗಸೆಯೊಡ್ಡಿ ಬೇಡಿ ಮಠವನ್ನು ಭುವಿಯಿಂದ ಗಗನದೆತ್ತರ ಬೆಳೆಸಿದರು. ತನ್ಮೂಲಕ ಸಮಾಜ ಸೇವೆಯನ್ನು ತಮ್ಮ ಬದುಕಿನ ಧ್ಯೇಯವಾಕ್ಯ ಮಾಡಿಕೊಂಡು ನಾಡು ಕೊಂಡಾಡುವಂತೆ ತ್ರಿವಿಧ ದಾಸೋಹದ ಹೊಸ ಇತಿಹಾಸವನ್ನೇ ಸೃಷ್ಟಿಸಿದರು.

ಶ್ರೀಗಳ ದೂರದೃಷ್ಟಿಯ ಫಲವಾಗಿ ಶಿಕ್ಷಣಕಾಶಿಯಾಗಿ ಹಾಗೂ ತ್ರಿವಿಧ ದಾಸೋಹದ ಮಹಾಸೌಧವಾಗಿ ರೂಪುಗೊಂಡಿರುವ ಸಿದ್ಧಗಂಗಾ ಮಠದಲ್ಲಿ ಪ್ರಾಥಮಿಕ ಹಂತದಿಂದ ಹಿಡಿದು ಉನ್ನತ ಶಿಕ್ಷಣದವರೆಗೆ ನೂರ ಇಪ್ಪತ್ತೈದಕ್ಕೂ ಹೆಚ್ಚು ವಿವಿಧ ಶಿಕ್ಷಣ ಸಂಸ್ಥೆಗಳನ್ನು ಈಗಲೂ ಯಶಸ್ವಿಯಾಗಿ ನಡೆಯುತ್ತಿವೆ. ಇಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವವರಲ್ಲಿ ಶೇಕಡ ಮೂವತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳು ಅನಾಥರು. ಆದರೆ ಅನಾಥರೆಂಬ ಭಾವ ಬಾರದಂತೆ.

ಶ್ರೀಗಳ ಆಶಯದಂತೆ ಅವರಿಗೆ ಮಠವೇ ತಾಯಿಯೂ ಆಗಿ, ತಂದೆಯೂ ಆಗಿ, ಕರುಣಾಸಿಂಧುವಾಗಿ ಅವರೆಲ್ಲರನ್ನು ಸ್ವಂತ ಮಕ್ಕಳಂತೆ ಸಲಹುವ ಮಹಾ ಬೆಳಕಾಗಿದೆ. ಶ್ರೀಗಳು ಬದುಕಿದ್ದಾಗ ಇವರ ಬಳಿಗೆ ಬರುವ ಯಾರಿಗೂ ಜಾತಿ-ಮತಗಳ ತಾರತಮ್ಯವಿರಲಿಲ್ಲ. ಎಲ್ಲಾ ಭಾಷಿಕರ, ಎಲ್ಲಾ ಧರ್ಮೀಯರ, ಎಲ್ಲಾ ಜಾತಿಗಳ ಜನ ಇವರ ನೆರಳಿನಲ್ಲಿದ್ದರು. ಇವರೊಂದು ಸರ್ವ ಧರ್ಮಗಳ ಮಹಾಸಂಗಮವಾಗಿದ್ದರು. ಬುದ್ಧನ ಕರುಣೆ, ವಿವೇಕರ ಕೆಚ್ಚು, ಗಾಂಧಿಯ ಸಾಮಾಜಿಕ ಕಳಕಳಿ, ಅಂಬೇಡ್ಕರರ ಇಚ್ಛಾಶಕ್ತಿ, ಮದರ್ ತೆರೇಸಾರ ತಾಯ್ತನ..... ಹೀಗೆ ಎಲ್ಲಾ ಮಹನೀಯರ ತತ್ವಾದರ್ಶಗಳ ಸಾತ್ವಿಕ ಸತ್ಪುರುಷರಿವರು.

"ಕಾಯಕವೇ ಕೈಲಾಸ" ಎಂಬುದಕ್ಕೆ ಅನ್ವರ್ಥವಾಗಿ ಸಂತನಂತೆ ಬದುಕಿ ತಮ್ಮ ನಿರಾಡಂಬರ, ನಿಸ್ವಾರ್ಥ, ನಿರ್ಮಲ, ನಿರ್ವಂಚನೆಯ ಪ್ರಾಮಾಣಿಕತೆಯೊಂದಿಗೆ ಭಕ್ತಿ, ಜ್ಞಾನ, ಕರ್ಮಯೋಗಗಳ ಸತ್ಪಥದಲ್ಲಿ ಊಹೆಗೂ ನಿಲುಕದ ರೀತಿಯಲ್ಲಿ ಸಾಧನೆಗಳ ಸರಮಾಲೆಯನ್ನೇ ಇವರು ಧರಿಸಿದ್ದರು. ಸಿದ್ಧಗಂಗೆಯ ಈ ಸಿದ್ಧಿ ಪುರುಷ ಶತಾಯುಷಿಯಾದ ಶುಭಸಂದರ್ಭದಲ್ಲಿ ನಾಡಿನ ಸಮಸ್ತ ಜನತೆಯ ಪರವಾಗಿ ಉಘೇ ಉಘೇ ಅನ್ನುವ ರೀತಿಯಲ್ಲಿ ಕರ್ನಾಟಕ ಸರ್ಕಾರ ಇವರಿಗೆ "ಕರ್ನಾಟಕರತ್ನ" ಬಿರುದಿನ ಪ್ರಶಸ್ತಿ ನೀಡಿ 2007ರ ಏಪ್ರಿಲ್ ಒಂದರಂದು ಸನ್ಮಾನಿಸಿತು. ಆ ಘನ ಸಂದರ್ಭದಲ್ಲೂ ಇವರ ಹೃನ್ನಯನಂಗಳಲ್ಲಿ ಮಿಂಚಿದ್ದು "ಸೇವಾರತ್ನ"ವೇ!. ಅಂತೆಯೇ ಇಡೀ ಕರ್ನಾಟಕ ಸರ್ಕಾರವೇ ತುಮಕೂರಿನ ಸಿದ್ಧಗಂಗಾ ಮಠಕ್ಕೆ ತೆರಳಿ ಈ ಅಭಿನವ ಬಸವಣ್ಣನಿಗೆ ಅವರ 103ನೇ ಹುಟ್ಟುಹಬ್ಬದ ಸಂದರ್ಭದಲ್ಲಿ 50ಕ್ಕೂ ಹೆಚ್ಚು ಸ್ವಾಮೀಜಿಗಳ ಸಾನ್ನಿಧ್ಯದಲ್ಲಿ 2010 ಏಪ್ರಿಲ್ 1ರಂದು 'ರಾಷ್ಟ್ರೀಯ ಬಸವ ಪುರಸ್ಕಾರ ಪ್ರಶಸ್ತಿ' ನೀಡಿ ಗೌರವಿಸಿದಾಗಲೂ ಇವರ ಇಡೀ ಶರೀರದ ತುಂಬಾ ಪ್ರಜ್ವಲಿಸಿದ್ದು ತ್ರಿವಿಧ ದಾಸೋಹದ ದಿವ್ಯ ಬೆಳಕೇ!. ಇವೆಲ್ಲಕ್ಕೂ ಕಳಶವಿಟ್ಟಂತೆ ಕೇಂದ್ರ ಸರ್ಕಾರದ 2015ನೇ ಸಾಲಿನ ಪದ್ಮಭೂಷಣ ಪ್ರಶಸ್ತಿಗೆ ಇವರು ಭಾಜನರಾಗಿ. ಇಂತಹ ಪ್ರಶಸ್ತಿಗಳಿಗೆಲ್ಲ ಮಹಾ ಮೌಲ್ಯವನ್ನು ತಂದುಕೊಟ್ಟಿದ್ದ ಈ ಶರಣ ಚೇತನ, ಕರ್ನಾಟಕ ರತ್ನ, ನಿಜ ಅರ್ಥದ್ದಿ ಭಾರತ ರತ್ನವೇ ಆಗಿದ್ದಾರೆ!.

ಸಾಮಾನ್ಯ ಮನುಷ್ಯನಾಗಿ ಹುಟ್ಟಿ ತಮ್ಮ ಮಾನವೀಯ ಕಾಳಜಿಯ ಅಸಾಮಾನ್ಯ ವ್ಯಕ್ತಿತ್ವದಿಂದ ದೈವತ್ವಕ್ಕೇರಿ ನಡೆದಾಡುವ ದೇವರೆಂದೆ ಹೆಸರಾಗಿದ್ದ ಡಾ. ಶಿವಕುಮಾರಸ್ವಾಮೀಜಿಗಳು ನೂರ ಹನ್ನೊಂದು ವರ್ಷಗಳ ಸಾರ್ಥಕ ತುಂಬು ಜೀವನ ನಡೆಸಿ 2019ರ ಜನವರಿ 21ರಂದು ಶಿವೈಕ್ಯರಾದರೂ ಶ್ರೀಗಳು ಎಂದೆಂದೂ ಅಜರಾಮರರು. ಈ ಅಮರ ಚೇತನದ ದಾಖಲಾರ್ಹ ಸೇವಾ ಕೈಂಕರ್ಯವನ್ನು ಜಗತ್ತು ಯಾವತ್ತೂ ಮರೆಯದು.

ಕಾವೇರಿ ಕ್ರಿಯಾ ಸಮಿತಿ ಹೋರಾಟ-75 ದಿನ
ಹೋರಾಟಕ್ಕೆ ಶಾಸಕ ಜಿ.ಟಿ.ದೇವೇಗೌಡರ ಸಾಥ್



ಕಾವೇರಿ ಕ್ರಿಯಾ ಸಮಿತಿ ಹೋರಾಟದ 75ನೇ ದಿನ ಚಾಮುಂಡೇಶ್ವರಿ ಶಾಸಕ ಜಿ.ಟಿ.ದೇವೇಗೌಡರು ಭಾಗವಹಿಸಿದ್ದರು.

ಮೈಸೂರು: ಮೈಸೂರಲ್ಲಿ ಕಾವೇರಿ ಕ್ರಿಯಾ ಸಮಿತಿಯ ಹೋರಾಟ 75ನೇ ದಿನಕ್ಕೆ ಕಾಲಿಟ್ಟಿದ್ದು, ಶನಿವಾರ ಮಾಜಿ ಸಚಿವ ಹಾಲಿ ಶಾಸಕ ಜಿ.ಟಿ.ದೇವೇಗೌಡರು ಪಾಲ್ಗೊಂಡು ಹೋರಾಟಕ್ಕೆ ಸಾಥ್ ನೀಡಿದರು.

ಈ ವೇಳೆ ಮಾತನಾಡಿದ ಜಿಟಿಡಿ, ರೈತರ ಹಿತದೃಷ್ಟಿಯಿಂದ ಕಾವೇರಿ ನೀರು ವಿಚಾರವಾಗಿ 75 ದಿನಗಳಿಂದ ನಿರಂತರ ಹೋರಾಟ ನಡೆಸುತ್ತಿರುವ ಎಲ್ಲರಿಗೂ ರಾಜ್ಯದ ಜನತೆ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಸೇರಿದಂತೆ ರಾಜ್ಯದ ಹಲವು ನಾಯಕರು, ರಾಜ್ಯದ ಪರಿಸ್ಥಿತಿ ಬಗ್ಗೆ ಕಾವೇರಿ ಮೇಲ್ವಿಚಾರಣಾ ಸಮಿತಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ನಾಡಿನ ರೈತರು, ನೆಲ-ಜಲ ಸಂಬಂಧಿತ ಹೋರಾಟಕ್ಕೆ ದೇವೇಗೌಡರ ಹೋರಾಟ ನಿರಂತರ ವಾಗಿರಲಿದೆ ಎಂದರು.

ಮುಖಂಡ ಡಾ.ಶಿವರಾಜಪ್ಪ ಮಾತನಾಡಿ, ಮಹಾತ್ಮರು ಹುಟ್ಟಿದಂತಹ ಈ ನಾಡಿನಲ್ಲಿ ಶಾಂತಿ, ಸಂಯಮ, ಸಹಬಾಳ್ವೆ, ಸಾಮರಸ್ಯ ಗಟ್ಟಿಯಾಗಿದೆ. ಇದನ್ನು ಕಲುಷಿತಗೊಳಿಸುವ ಕೆಲಸಕ್ಕೆ ಯಾರೂ ಮುಂದಾಗಬಾರದು. ಹೋರಾಟ ನಡೆಯುತ್ತಿದ್ದರೂ ಸರ್ಕಾರ ಯಾವುದೇ ಕ್ರಮ ವಹಿಸದೆ ನಿರ್ಲಕ್ಷ ವಹಿಸಿರುವುದು ಉತ್ತಮ ನಡೆಯಲ್ಲ ಎಂದು ಹೇಳಿದರು.

ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಜಯಪ್ರಕಾಶ್(ಜೆಪಿ)., ಎಂ.ಜೆ.ಸುರೇಶ್ ಗೌಡ, ಮೆಲ್ಲಹಳ್ಳಿ ಮಹದೇವಸ್ವಾಮಿ, ಮೂಗೂರು ನಂಜುಂಡಸ್ವಾಮಿ, ತೇಜೇಶ್ ಲೋಕೇಶ್‌ಗೌಡ, ಭಾನುಪ್ರಕಾಶ್, ಶಿವಲಿಂಗಯ್ಯ, ಎಂ.ಹೆಚ್.ಹನುಮಂತಯ್ಯ, ಕೆ.ಮಹೇಶ್ ಒಂಟಿಕೊಪ್ಪಲ್, ಶ್ರೀನಿವಾಸ್, ರವೀಶ್, ಪುಷ್ಪಾವತಿ, ಕೆ.ಮಂಜುಳಾ, ರಾಘವಾಚಾರಿ, ಮಹದೇವಸ್ವಾಮಿ, ಬೋಗಾದಿ ಸಿದ್ದೇಗೌಡ, ಶಿವನಾಯ್ಕರ್, ವಿಷ್ಣು ಹೊನ್ನೇಗೌಡ, ಕೃಷ್ಣೇಗೌಡ, ಶಿವಕುಮಾರ್ ಸಿಂಧುವಳ್ಳಿ, ಪೈಬಾಲಾಜಿ, ಪೈಬಲರಾಮ್, ನೇಹಾ, ಶುಭಶ್ರೀ, ಪದ್ಮ ಶಶಿಧರ್, ರವಿ, ಕೃಷ್ಣ, ಮಂಜುಳಾ, ಅಶೋಕ್, ರಾಜು, ಭಾಗ್ಯಮ್ಮ, ಲಕ್ಷ್ಮಿ, ಆರ್.ಶ್ರೀನಿವಾಸ್ ಮತ್ತಿತರರು ಹೋರಾಟದಲ್ಲಿ ಭಾಗವಹಿಸಿದ್ದರು.

ನಾಟಕ, ಕಲೆ ಕಾರಾಗೃಹ ನಿವಾಸಿಗಳ ಮನಃಪರಿವರ್ತನೆಗೆ ಸಹಕಾರಿ

ಮೈಸೂರು.ಜ.20(ಎಸ್‌ಪಿಎನ್)- ಕಾರಾಗೃಹ ನಿವಾಸಿಗಳಿಗೆ ಈ ರೀತಿ ನಾಟಕಗಳು ಕಲೆಯಲ್ಲಿ ತೊಡಗಿಸುವುದರಿಂದ ಅವರ ಮನಃ ಪರಿವರ್ತನೆ ಸಾಧ್ಯವಾಗುತ್ತದೆ ಎಂದು ದಕ್ಷಿಣ ವಲಯ ಕಾರಾಗೃಹಗಳ ಮಹಾ ನಿರೀಕ್ಷಕ ಸೋಮಶೇಖರ್ ಅಭಿಪ್ರಾಯಪಟ್ಟರು.

ಮೈಸೂರು ನಗರದ ಕೇಂದ್ರ ಕಾರಾಗೃಹದಲ್ಲಿ ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆ, ಮೈಸೂರು ಕೇಂದ್ರ ಕಾರಾಗೃಹ, ಸಂಚಲನ ರಂಗ ಸಂಸ್ಥೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಕಾರಾಗೃಹದ ಕೈದಿಗಳಿಗೆ ಆಯೋಜಿಸಿದ್ದ ರಂಗ ತರಬೇತಿ ಶಿಬಿರದ ಸಮಾರೋಪ ಹಾಗೂ ಕರ್ನಾತರಂಗ ನಾಟಕ ಪ್ರದರ್ಶನಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

ಕಾರಾಗೃಹದ ಬಂಧಿಗಳಲ್ಲಿ ವಿವಿಧ ಕಲೆಗಳಲ್ಲಿ ತೊಡಗಿಸಿಕೊಂಡು ಪ್ರತಿಭಾನ್ವಿತ ವ್ಯಕ್ತಿಗಳಿದ್ದಾರೆ. ಹಾಗಾಗಿ ರಂಗಭೂಮಿ ಮೂಲಕ ಕೈದಿಗಳಿಗೆ ಮನಃಪರಿವರ್ತನೆ ವೇದಿಕೆಗಳಾದರೆ ಉತ್ತಮ ಎಂದರು.

ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಿದ ಸದಸ್ಯ ಕಾರ್ಯದರ್ಶಿ ಬಿ.ಜಿ.ದಿನೇಶ್ ಮಾತನಾಡಿ, ಕಾನೂನಿನ ಮುಖ್ಯ ಉದ್ದೇಶ ಕೈದಿಗಳ ಮನಃಪರಿವರ್ತನೆ ಮಾಡುವುದು. ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾದ ಕೈದಿಗಳಿಗೆ ಕಾರಾಗೃಹಗಳು ಮನಃಪರಿವರ್ತನಾ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿರುವುದು ಉತ್ತಮ ಸಂಗತಿ ಎಂದರು.

ಕಾರಾಗೃಹದ ಮುಖ್ಯ ಅಧೀಕ್ಷಕ ಪಿ.ಎಸ್.ರಮೇಶ್ ಮಾತನಾಡಿ, ಮೈಸೂರು ಸಾಂಸ್ಕೃತಿಕ ನಗರಿ. ಕಲೆ ಸಂಸ್ಕೃತಿಯ ತವರೂರು. ಕನ್ನಡ ಅಕ್ಷರ ಬರಹ ಓದಲು ಬರೆಯಲು ಬಾರದವರು ಸಹ ನಾಟಕದಲ್ಲಿ ಪಾತ್ರಧಾರಿಗಳಾಗಿ ಭಾಗವಹಿಸಿದ್ದಾರೆ. ಮೂರು ತಿಂಗಳ ಕಾಲ ನಿರಂತರವಾಗಿ ಅಭ್ಯಾಸ ಮಾಡಿ ಇಂದು ನಾಟಕ ಪ್ರದರ್ಶನ ಮಾಡುತ್ತಿದ್ದಾರೆ ಎಂದರು. ಈ ವೇಳೆ ಸಂಚಲನ ರಂಗಸಂಸ್ಥೆ ಅಧ್ಯಕ್ಷ ದೀಪಕ್, ಕಾರಾಗೃಹದ ಅಧೀಕ್ಷಕ ಪಿ.ಮಹಾದೇವನಾಯ್ಕ, ಸೈಕಲ್ ಅಗರಬತ್ತಿ ಸಂಸ್ಥೆಯ ಹರೀಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ಕಾರಾಗೃಹದ ಕೈದಿಗಳಿಗೆ ಆಯೋಜಿಸಿದ್ದ ರಂಗ ತರಬೇತಿ ಶಿಬಿರದ ಸಮಾರೋಪ ಹಾಗೂ ಕರ್ನಾತರಂಗ ನಾಟಕ ಪ್ರದರ್ಶನಕ್ಕೆ ಚಾಲನೆ ನೀಡಲಾಯಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಇಂದು ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಪುಣ್ಯಸ್ಮರಣೆ



ಸುದ್ದಿಗೋಷ್ಠಿಯಲ್ಲಿ ಬೀರಿಹುಂಡಿ ಮಲ್ಲೇಶ್ ಮಾತನಾಡಿದರು.

ಮೈಸೂರು,ಜ.20(ಜಿಎ)– ಸಿದ್ಧಗಂಗಾ ಮಠದ ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಪುಣ್ಯಸ್ಮರಣೆ ಅಂಗವಾಗಿ ಸಿದ್ಧಗಂಗಾ ಸೇವಾ ಸಂಘದ ವತಿಯಿಂದ ಜನವರಿ 21ರಂದು ಮೈಸೂರಲ್ಲಿ ದಾಸೋಹ ದಿನ ಆಚರಿಸಲಾಗುತ್ತಿದೆ ಎಂದು ಅಧ್ಯಕ್ಷ ಚಿಕ್ಕಹಳ್ಳಿ ಸ್ವಾಮಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9ಕ್ಕೆ ಕೆ.ಆರ್.ಮೊಹಲ್ಲಾದ ನೂರೊಂದು ಗಣಪತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ಬಳಿಕ ವಿವಿಧ ಕಲಾ ತಂಡಗಳು ಇರುವ ಮೆರವಣಿಗೆ ವಿವಿಧ ರಸ್ತೆಗಳಲ್ಲಿ ಸಾಗಿದ ನಂತರ ಆರಂಭದ ಸ್ಥಳಕ್ಕೇ ವಾಪಸಾಗಲಿದೆ. ಈ ವೇಳೆ ಕುದೇರು ಮಠದ ಗುರುಶಾಂತ ಸ್ವಾಮೀಜಿ, ಮಡಿವಾಳ ಮಠದ ಇಮ್ಮಡಿ ಮಡಿವಾಳ ಸ್ವಾಮೀಜಿ ಹಾಗೂ ಇನ್ನಿತರ ಮಠಾಧೀಶರು ಈ ವೇಳೆ ಹಾಜರಿರುವರು. ಶಾಸಕ ಟಿ.ಎಸ್.ಶ್ರೀವತ್ಸ ನಂದಿ ಪೂಜೆ ನೆರವೇರಿಸುವರು, ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಪ್ರದೀಪ್ ಕುಮಾರ್ ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸುವರು ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಬೀರಿಹುಂಡಿ ಮಲ್ಲೇಶ್, ಗುರೂರು ವೃಷಭೇಂದ್ರ, ಲೋಕೇಶ್ ಚಿನ್ನಬುದ್ದಿ, ಕೂಡನಹಳ್ಳಿ ನಾಗರಾಜು, ಕೆಂಚಮಳ್ಳಿ ನಟರಾಜ್, ದಾರಿಪುರ ಡಿ.ಚಂದ್ರಶೇಖರ್ ಉಪಸ್ಥಿತರಿದ್ದರು.

ನಾಳೆ ಸಂಪೂರ್ಣ ರಾಮಾಯಣ ನಾಟಕ



ಚಾಮುಂಡೇಶ್ವರಿ ಕಲಾವಿದರ ಸಂಘದ ವತಿಯಿಂದ ಸಂಪೂರ್ಣ ರಾಮಾಯಣ ಪೌರಾಣಿಕ ನಾಟಕದ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಮೈಸೂರು,ಜ.20(ಜಿಎ)–ಅಯೋಧ್ಯೆ ಶ್ರೀರಾಮಮಂದಿರದಲ್ಲಿ ರಾಮಲಲ್ಲಾ ಮೂರ್ತಿ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ನಗರದ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಚಾಮುಂಡೇಶ್ವರಿ ಕಲಾವಿದರ ಸಂಘದ ವತಿಯಿಂದ ಜ.22ರಂದು ಸಂಪೂರ್ಣ ರಾಮಾಯಣ ಪೌರಾಣಿಕ ನಾಟಕ ಪ್ರದರ್ಶನ ಆಯೋಜಿಸಲಾಗಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎಲ್.ಎಸ್. ಮಹದೇವಸ್ವಾಮಿ ಲಲಿತಾದ್ರಿಪುರ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.30ರಿಂದ ರಾತ್ರಿ 7.30ರವರೆಗೆ ನಾಟಕ ಪ್ರದರ್ಶನ ಇರಲಿದ್ದು, ಸುಮಾರು 3 ತಿಂಗಳಿಂದ ಅಭ್ಯಾಸ ಮಾಡಲಾಗಿದೆ. ಐವರು ಮಹಿಳಾ ಕಲಾವಿದರ ಸೇರಿದಂತೆ ಒಟ್ಟು 21 ಮಂದಿ ಕಲಾವಿದರು, ಐವರು ವಾದ್ಯ ತಂಡದವರು ಇರಲಿದ್ದಾರೆ. ಇತ್ತೀಚೆಗೆ ಪೌರಾಣಿಕ ನಾಟಕ ನಶಿಸುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಗ್ರಾಮೀಣ ನಾಟಕ ಪ್ರಿಯರನ್ನು ಸೆಳೆಯುವ ಉದ್ದೇಶದಿಂದ ಮತ್ತು ಅಯೋಧ್ಯೆಯಲ್ಲಿನ ಐತಿಹಾಸಿಕ ಘಟನೆಗೆ ಸಾಕ್ಷಿಯಾಗುವಂತೆ ನಾಟಕ ಪ್ರದರ್ಶನ ಆಯೋಜಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಅಧ್ಯಕ್ಷ ಸೋಮಣ್ಣ, ನಿರ್ದೇಶಕ ಜ್ಞಾನೇಶ್, ಮುಕುಂದರಾಜೇ ಅರಸ್, ಶಿವಕುಮಾರ್, ಗುರುಸ್ವಾಮಿ, ಪ್ರಕಾಶ್, ಮಂಜು ಹುನುಗನಹಳ್ಳಿ ಉಪಸ್ಥಿತರಿದ್ದರು.

ಒಳ ಮೀಸಲಾತಿ ವಿಚಾರ: ಸರ್ಕಾರಕ್ಕೆ ಆದಿದ್ರಾವಿಡ ಪೌರಕಾರ್ಮಿಕರ ಟ್ರಸ್ಟ್ ಅಭಿನಂದನೆ



ಸುದ್ದಿಗೋಷ್ಠಿಯಲ್ಲಿ ಎಚ್.ಎಸ್.ಸುರೇಶ್‌ಕುಮಾರ್ ಮಾತನಾಡಿದರು.

ಮೈಸೂರು,ಜ.20(ಜಿಎ)– ಪರಿಶಿಷ್ಟ ಜಾತಿಗೆ ಒಳ ಮೀಸಲಾತಿ ನೀಡಲು ಸದಾಶಿವ ಆಯೋಗದ ವರದಿ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ರಾಜ್ಯ ಸಚಿವ ಸಂಪುಟ ನಿರ್ಧಾರ ಕೈಗೊಂಡಿರುವುದಕ್ಕೆ ಅಖಿಲ ಕರ್ನಾಟಕ ಡಾ.ಬಿ.ಆರ್. ಅಂಬೇಡ್ಕರ್ ಆದಿದ್ರಾವಿಡ ಪೌರಕಾರ್ಮಿಕರ ಜನಾಂಗದ ಅಭಿವೃದ್ಧಿ ಟ್ರಸ್ಟ್ ಅಭಿನಂದಿಸಿದೆ. ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ವಿಷಯ ತಿಳಿಸಿದ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಎಚ್.ಎಸ್.ಸುರೇಶ್‌ಕುಮಾರ್, ಒಳ ಮೀಸಲಾತಿಗಾಗಿ ತಮ್ಮ ಸಂಘಟನೆ ನಡೆಸಿದ್ದ ಹೋರಾಟಗಳ ಬಗ್ಗೆ ವಿವರಿಸಿದರು.

ರಾಜ್ಯದಲ್ಲಿ ಅಭಿವೃದ್ಧಿ ನಿಗಮ ಸ್ಥಾಪಿಸಲು ಮುಖ್ಯಮಂತ್ರಿಗಳು ಮತ್ತು ಸಮಾಜ ಕಲ್ಯಾಣ ಇಲಾಖೆ ಸಚಿವರಿಗೆ ಮನವಿ ಸಲ್ಲಿಸಿರುವುದಾಗಿ ತಿಳಿಸಿದರು. ಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಶ್ರೀನಿವಾಸ್, ಸುಬ್ರಮಣ್ಯ, ಪಳನಿ, ಬಿ.ರಾಜ್ ಉಪಸ್ಥಿತರಿದ್ದರು.

ನಾಳೆ ನೂತನ ಶ್ರೀರಾಮನ ಮೂರ್ತಿಗೆ ಪೂಜೆ



ಸುದ್ದಿಗೋಷ್ಠಿಯಲ್ಲಿ ಗುರುಪ್ರಸಾದ್ ಮಾತನಾಡುತ್ತಿರುವುದನ್ನು ಕಾಣಬಹುದು.

ಮೈಸೂರು,ಜ.20(ಜಿಎ)– ಅಯೋಧ್ಯೆ ಶ್ರೀರಾಮಮಂದಿರದಲ್ಲಿ ರಾಮಲಲ್ಲಾ ಮೂರ್ತಿ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ತಿಲಕ್ ನಗರದಲ್ಲಿನ ತೆಲುಗು ರೆಡ್ಡಿ ಸಂಘದ ಶ್ರೀರಾಮಮಂದಿರದಲ್ಲಿ ಜ.22ರಂದು ಶ್ರೀರಾಮನ ನೂತನ ವಿಗ್ರಹಗಳ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಅಧ್ಯಕ್ಷ ಗುರುಪ್ರಸಾದ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಪೂಜಾ ಕಾರ್ಯಕ್ರಮಕ್ಕೆ ಸಂಸದ ಪ್ರತಾಪ್ ಸಿಂಹ, ಶಾಸಕ ಹರೀಶ್‌ಗೌಡ, ಮಾಜಿ ಶಾಸಕ ಎಲ್.ನಾಗೇಂದ್ರ ಹಾಗೂ ಮಾಜಿ ಮೇಯರ್ ಎಂ.ಜೆ.ರವಿಕುಮಾರ್ ಇನ್ನಿತರರು ಹಾಜರಿರುವರು. ಪಾಲಿಕೆ ಮಾಜಿ ಸದಸ್ಯೆ ನಮ್ರತಾ ಮಹೇಶ್ ನೂತನ ವಿಗ್ರಹ ಲೋಕಾರ್ಪಣೆಗೊಳಿಸುವರು. ಅಂದು ಬೆಳಗ್ಗೆ 7ರಿಂದ ಧಾರ್ಮಿಕ ಕಾರ್ಯಕ್ರಮ ಆರಂಭವಾಗಿ, ಮಧ್ಯಾಹ್ನ 12ಕ್ಕೆ ಅತಿಥಿಗಳಿಗೆ ಸನ್ಮಾನ ನಡೆಯಲಿದೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಗುರುರಾಜ್, ಹರೀಶ್ ರೆಡ್ಡಿ, ವಿಶ್ವನಾಥ್, ಸುರೇಶ್, ನಾಗರಾಜು, ರವಿ ಹಾಜರಿದ್ದರು.

ಫೆ.4ಕ್ಕೆ ಸರ್ಕಾರಿ ಶಾಲಾ ಮಕ್ಕಳಿಗಾಗಿ 'ಚಿಗುರು' ಕಾರ್ಯಕ್ರಮ



ಸುದ್ದಿಗೋಷ್ಠಿಯಲ್ಲಿ ಶನಿವಾರ ಶ್ರೀಕಂಠಮೂರ್ತಿ ಮಾತನಾಡಿದರು.

ಮೈಸೂರು,ಜ.20(ಜಿಎ)–ಸರ್ಕಾರಿ ಶಾಲಾ ಮಕ್ಕಳಿಗಾಗಿ ಪ್ರತಿಭೆಗೆ ವೇದಿಕೆ ಕಲ್ಪಿಸುವ ಹಿನ್ನೆಲೆಯಲ್ಲಿ ಯೂತ್ ಫಾರ್ ಸೇವಾ ಸಂಸ್ಥೆ ವತಿಯಿಂದ ಫೆಬ್ರವರಿ 4ರಂದು ನಗರದ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನಲ್ಲಿ ಚಿಗುರು ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಸಂಸ್ಥೆಯ ದೀಪಕ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 8ರಿಂದ ಸಂಜೆ 5ರವರೆಗೆ ಚಿಗುರು ಕಾರ್ಯಕ್ರಮ ಆಯೋಜಿಸಿದ್ದು, ಮೈಸೂರಿನ ಸರ್ಕಾರಿ ಶಾಲೆಗಳಿಂದ ಸುಮಾರು 1500 ವಿದ್ಯಾರ್ಥಿಗಳು 22 ಬಗೆಯ ವಿವಿಧ ಸ್ಪರ್ಧೆ, ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಸರ್ಕಾರಿ ಶಾಲಾ ಮಕ್ಕಳಲ್ಲಿನ ವೇದಿಕೆ ಭಯ ಹೋಗಲಾಡಿಸಿ, ಅವರ ಆತ್ಮವಿಶ್ವಾಸ ಹೆಚ್ಚಿಸಲು ಈ ಕಾರ್ಯಕ್ರಮ ನೆರವಾಗಲಿದೆ.

ತಮ್ಮದು ಒಂದು ರಾಷ್ಟ್ರವ್ಯಾಪಿ ಸ್ವಯಂಸೇವಕ ಸಂಸ್ಥೆಯಾಗಿದ್ದು, ಆರೋಗ್ಯ, ಶಿಕ್ಷಣ ಮತ್ತು ಪರಿಸರ ವಿಷಯಗಳಲ್ಲಿ ಕೆಲಸ ಮಾಡುತ್ತಿದೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಶ್ರೀಕಂಠಮೂರ್ತಿ, ರುಚಿತಾ, ಉದಿತ್ ಗೌಡ, ಚೈತ್ರಾ, ರಕ್ಷಿತ್ ಉಪಸ್ಥಿತರಿದ್ದರು.

ಪ್ರಗತಿಪರ ಕೊಡುಗೆಗಳನ್ನು ನೀಡಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಸದಾ ಸ್ಮರಣೀಯರು

● ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅಭಿಮತ ● ಮೈಸೂರು ಮೆಡಿಕಲ್ ಕಾಲೇಜು ಶತಮಾನೋತ್ಸವಕ್ಕೆ ಚಾಲನೆ

ಮೈಸೂರು, ಜ.20(ಎಂಕೆ)– ಮೈಸೂರು ಸುಭಿಕ್ಷವಾಗಿರಲೆಂದು ತಮ್ಮ ದಿವ್ಯ ದೃಷ್ಟಿಯಿಂದ ಪ್ರಗತಿಪರ ಕೊಡುಗೆಗಳನ್ನು ನೀಡಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ದೊರೆತದ್ದೇ ನಮ್ಮ ಸುದೈವ ಎಂದು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಸ್ಮರಿಸಿದರು.

ನಗರದ ಜೆ.ಕೆ.ಮೈದಾನದಲ್ಲಿರುವ ಎಂಎಂಸಿ ಪ್ಲಾಟಿನಂ ಜುಬಿಲಿ ಸಭಾಂಗಣದಲ್ಲಿ ಆಯೋಜಿಸಿದ್ದ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಶತಮಾನೋತ್ಸವ ಸಂಭ್ರಮಾಚರಣೆ ಯನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ವೈದ್ಯಕೀಯ ಕ್ಷೇತ್ರಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆ ಅನನ್ಯ. ದೇಶದಲ್ಲಿ ಅವರು ನಮಗೆ ಸಿಕ್ಕಿದ್ದೇ ಸುದೈವ ಎಂದರಲ್ಲದೆ, ಮೈಸೂರು ಮೆಡಿಕಲ್ ಕಾಲೇಜಲ್ಲಿ ಸೇವೆ ಸಲ್ಲಿಸಿದ ಹಿರಿಯ ವೈದ್ಯರು ಹಾಗೂ ಪ್ರಾಧ್ಯಾಪಕರನ್ನು ಸ್ಮರಿಸಿದರು.

ಬೇರೆ ವೃತ್ತಿಗೂ ವೈದ್ಯ ವೃತ್ತಿಗೂ ಇರುವ ವ್ಯತ್ಯಾಸವೆಂದರೆ ಕಷ್ಟದಲ್ಲಿರುವವರಷ್ಟೇ ವೈದ್ಯರ ಬಳಿ ಬರುವುದು. ಸುಖದಲ್ಲಿ ಯಾರೂ ಬರುವುದಿಲ್ಲ. ಅವರಲ್ಲಿ ಉಳ್ಳವರು–ಇಲ್ಲದವರೂ ಬರುತ್ತಾರೆ. ಆದರೆ 'ವೈದ್ಯೋ ನಾರಾಯಣೋ ಹರಿಃ' ಎಂಬಂತೆ ವೈದ್ಯರ ಸೇವೆ ಎಲ್ಲರಿಗೂ ಒಂದೇ ರೀತಿಯಾಗಿರಬೇಕು. ಅದರಲ್ಲೂ ಬಡವ–ಬಲ್ಲಿದರ ಸೇವೆ ಮಾಡುವುದು ಅತೀ ಮುಖ್ಯವಾಗಿದೆ.



ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಶತಮಾನೋತ್ಸವ ಸಂಭ್ರಮಾಚರಣೆ ಕಾರ್ಯಕ್ರಮವನ್ನು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಉದ್ಘಾಟಿಸಿದರು. ಕೂಡ್ಲಿಗಿ ಶಾಸಕ ಡಾ.ಎನ್.ಟಿ.ಶ್ರೀನಿವಾಸ್, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಎಸ್.ಚಂದ್ರಶೇಖರ್, ಹಾಲಿ ಕುಲಪತಿ ಡಾ.ಎಂ.ಕೆ.ರಮೇಶ್, ಮೈಸೂರು ವೈದ್ಯಕೀಯ ಕಾಲೇಜು ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಡಾ.ಹೆಚ್.ಎನ್.ದಿನೇಶ್ ಮತ್ತಿತರರು ಉಪಸ್ಥಿತರಿದ್ದರು.

ಖಾಸಗಿ ಆಸ್ಪತ್ರೆಗಳಲ್ಲಿದ್ದರೂ ಸರ್ಕಾರಿ ಆಸ್ಪತ್ರೆಯಲ್ಲಿ ನೀಡುವ ವೈದ್ಯಕೀಯ ಸೇವೆ ಗುಣಮಟ್ಟದಿಂದ ಕೂಡಿರಬೇಕು ಎಂದು ಆಶಯ ವ್ಯಕ್ತಪಡಿಸಿದರಲ್ಲದೆ ಸಾಮಾನ್ಯವಾಗಿ ಸರ್ಕಾರಿ ಸಂಬಳ ಪಡೆದುಕೊಂಡು ಸೇವೆ ಮಾಡುವವರನ್ನು ನೋಡಿದ್ದೇವೆ. ಆದರೆ ಸರ್ಕಾರಿ ಸಂಬಳ ಪಡೆಯದೆ ಗೌರವ ಧನ ಪಡೆದು ಕೆ.ಆರ್.ಆಸ್ಪತ್ರೆಯಲ್ಲಿ ನಾನು ಕಂಡಂತೆ ಸೇವೆ ಮಾಡುತ್ತಿದ್ದವರಲ್ಲಿ ಡಾ.ಸಿ.ಡಿ.ಶ್ರೀನಿವಾಸ್ ಮೂರ್ತಿ, ಡಾ.ಬಿ.ವಿ. ರಾಜಗೋಪಾಲ್ ಪ್ರಮುಖರಾಗಿದ್ದಾರೆ. ಹಾಗೆಯೇ ಚೆಲುವಾಂಬ ಆಸ್ಪತ್ರೆಯಲ್ಲಿ ಸ್ತ್ರೀರೋಗ ತಜ್ಞರಾಗಿದ್ದ ಡಾ.ಕೌಲ್‌ಗೂಡು ಅವರು, ರಕ್ತಹೀನತೆ ಕಂಡು ಬರುತ್ತಿದ್ದ ಮಹಿಳೆಯರಿಗೆ ತಾವೇ ರಕ್ತದಾನ ಮಾಡಿ, ನಂತರ ಶಸ್ತ್ರಚಿಕಿತ್ಸೆ ಮಾಡುತ್ತಿದ್ದರು. ಅಲ್ಲದೆ ಅತ್ಯಂತ ಪ್ರಾಮಾಣಿಕರು ಆಗಿದ್ದರು ಎಂದು ಸ್ಮರಿಸಿದರು.

ಎಂಎಂಸಿ ಎಂಎಲ್‌ಎ: ಸಂಭ್ರಮಾಚರಣೆ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕೂಡ್ಲಿಗಿ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಮಾತನಾಡಿ, ನಾನು ಕೂಡ್ಲಿಗಿ ಶಾಸಕ ಎಂದುಕೊಳ್ಳುವುದಕ್ಕಿಂತ ಎಂಎಂಸಿ ಶಾಸಕ ಎಂದುಕೊಳ್ಳಲು ಹೆಮ್ಮೆ ಎನ್ನಿಸುತ್ತದೆ. ನನ್ನನ್ನು ಪರಿಪೂರ್ಣವಾಗಿ ತಿದ್ದಿದ ಸಂಸ್ಥೆಯಿಂದಾಗಿ ನಾನು ಜನರ ಸೇವೆ ಮಾಡಲು ಸಾಧ್ಯವಾಗಿದೆ. ತಾಯಿ ಸ್ಥಾನದಲ್ಲಿ ನಿಂತು ಮೈಸೂರು ವೈದ್ಯಕೀಯ ಕಾಲೇಜು ನನ್ನನ್ನು ಪೋಷಣೆ ಮಾಡಿದೆ ಎಂದು ತಮ್ಮ ವಿದ್ಯಾರ್ಥಿ ದಿನಗಳನ್ನು ಸ್ಮರಿಸಿದರು. ಇದೇ ವೇಳೆ ಶತಮಾನೋತ್ಸವ ಸಂಭ್ರಮಾಚರಣೆಯ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಾಯಿತು. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಎಸ್.ಚಂದ್ರಶೇಖರ್, ಹಾಲಿ ಕುಲಪತಿ ಡಾ.ಎಂ.ಕೆ.ರಮೇಶ್, ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಂ.ಎ.ಶೇಖರ್, ಮೈಸೂರು ವೈದ್ಯಕೀಯ ಕಾಲೇಜು ಹಿರಿಯ ವಿದ್ಯಾರ್ಥಿ ಸಂಘದ ಗೌರವಾಧ್ಯಕ್ಷ ಡಾ.ಸಿ.ಡಿ.ಶ್ರೀನಿವಾಸಮೂರ್ತಿ, ಅಧ್ಯಕ್ಷ ಡಾ.ಹೆಚ್.ಎನ್. ದಿನೇಶ್, ಕಾರ್ಯದರ್ಶಿ ಡಾ.ಹೆಚ್.ಬಿ.ಶಶಿಧರ್, ಖಜಾಂಚಿ ಡಾ.ಎ.ಎಸ್.ಶ್ರೀನಿವಾಸ ರಾಜೇ ಅರಸ್ ಮತ್ತಿತರರಿದ್ದರು.

> **ಎಂಎಂಸಿಆರ್‌ಐ ಮತ್ತಷ್ಟು ವಿಸ್ತರಣೆ...**
>
> "ಶತಮಾನದ ಸಂಭ್ರಮದಲ್ಲಿರುವ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಮುಂದಿನ ದಿನಗಳಲ್ಲಿ ಮತ್ತಷ್ಟು ವಿಸ್ತರಣೆಗೊಳ್ಳಲಿದೆ. ಪ್ರತ್ಯೇಕ ಓಪಿಡಿ ಕಾಂಪ್ಲೆಕ್ಸ್, ಡಯಾಲಿಸಿಸ್ ಕೇಂದ್ರ ಸ್ಥಾಪನೆ ಸೇರಿದಂತೆ ಅಗತ್ಯ ಅಭಿವೃದ್ಧಿ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಇದಕ್ಕೆ ಪೂರಕವಾಗಿ ಸರ್ಕಾರದ ಸ್ಪಂದನೆ ದೊರೆತಿದ್ದು, ಜನಪ್ರತಿನಿಧಿಗಳ ಸಹಕಾರ ಬೇಕಾಗಿದೆ.
>
> –ಡಾ.ಕೆ.ಆರ್.ದಾಕ್ಷಾಯಿಣಿ, ನಿರ್ದೇಶಕರು, ಎಂಎಂಸಿ.

ಪಿಹೆಚ್.ಡಿ ಅವಸರದ ಬರವಣಿಗೆಯಾಗದೆ ಶಿಸ್ತುಬದ್ಧವಾಗಿರಬೇಕು

ಮೈಸೂರು ವಿವಿ ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಪ್ರೊ.ತಾರಾನಾಥ್ ಅಭಿಪ್ರಾಯ



ಮೈಸೂರಿನ ಮಾನಸಗಂಗೋತ್ರಿಯ ಗ್ರಂಥಾಲಯ ಸಭಾಂಗಣದಲ್ಲಿ ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಪ್ರೊ.ಎನ್.ಎಸ್.ತಾರಾನಾಥ್ ಅವರು ಶೇಷನಾರಾಯಣ ಅವರ ಬಾಲ್ಯದ ಕೆಲವು ನೆನಪುಗಳು ಕೃತಿ ಬಿಡುಗಡೆ ಮಾಡಿದರು. ಪ್ರೊ.ಎಂ.ನಂಜಯ್ಯ ಹೊಂಗನೂರು, ಡಾ.ಪಿ.ಸರಸ್ವತಿ ಇನ್ನಿತರರಿದ್ದಾರೆ.

ಮೈಸೂರು, ಜ.20(ಬಿಎಲ್‌ಯು)– ಸಂಶೋಧಕರು ಮಂಡಿಸುವ ಪಿಹೆಚ್.ಡಿ ಅವಸರದ ಬರವಣಿಗೆಯಾಗದೆ ಶಿಸ್ತುಬದ್ಧವಾಗಿರಬೇಕು ಎಂದು ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಪ್ರೊ.ಎನ್.ಎಸ್.ತಾರಾನಾಥ್ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮಾನಸಗಂಗೋತ್ರಿಯ ಗ್ರಂಥಾಲಯ ಸಭಾಂಗಣದಲ್ಲಿ ಶೇಷನಾರಾಯಣ ಅವರ ಬಾಲ್ಯದ ಕೆಲವು ನೆನಪುಗಳು ಕೃತಿ ಬಿಡುಗಡೆ ಮಾಡಿ ಮಾತನಾಡಿದ ಅವರು, ಸಂಶೋಧನೆ ಮಾಡಿ ಮಂಡಿಸುವ ಪಿಹೆಚ್.ಡಿ ಕೊನೆಯ ಪ್ರಬಂಧವಾಗಿರಬಾರದು. ಸಂಶೋಧನೆ ಮುಂದುವರೆಸಲು ಇರುವ ಪ್ರಮಾಣ ಪತ್ರ ಎಂದು ಅರ್ಥೈಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ತಾವು ಬರೆಯುವ ಲೇಖನ ಸೇರಿದಂತೆ ಇತರೆ ಬರಹಗಳು ಸರ್ವ ಕಾಲಕ್ಕೂ ವಿಮರ್ಶೆಗೆ ಒಳಪಡುವಂತಿರಬೇಕು ಎಂಬ ಚಿಂತನೆ ವಿದ್ಯಾರ್ಥಿಗಳಲ್ಲಿ ಇರಬೇಕು ಎಂದು ಕಿವಿಮಾತು ಹೇಳಿದರು. ಶೇಷನಾರಾಯಣ ಅವರಿಗೆ ಪ್ರಕೃತಿ ಬಗ್ಗೆ ತುಂಬಾ ಪ್ರೀತಿ ಇತ್ತು. ಅದನ್ನೆ ತಮ್ಮ ಕೃತಿಗಳಲ್ಲಿ ಬರೆದಿದ್ದಾರೆ. ಪ್ರಕೃತಿ ಜೊತೆಗಿನ ಸಹಬಾಳ್ವೆಯನ್ನು ಬರಹದಲ್ಲಿ ಪ್ರಚುರಪಡಿಸಿದ್ದಾರೆ. ಈ ಮೂಲಕ ತಮ್ಮ ಅನುಭವ ಬಿಚ್ಚಿಟ್ಟಿದ್ದಾರೆ ಎಂದು ಹೇಳಿದರು.

ಶೇಷನಾರಾಯಣ ಅವರಿಗೆ ಕನ್ನಡ ಮತ್ತು ತಮಿಳು ಭಾಷೆ ಅರಿವಿತ್ತು. ಈ ಮೂಲಕ ದ್ವಿಭಾಷಾ ಶಕ್ತಿ ಅವರಲ್ಲಿತ್ತು. ಇದರಿಂದ ಅವರ ಕೃತಿಗಳು ವೈಶಿಷ್ಟ್ಯತೆಯಿಂದ ಕೂಡಿತ್ತು ಎಂದು ತಿಳಿಸಿದರು.

ಸವೆದ ಹಾದಿಯಲ್ಲಿ ಓಡಾಡುವುದು ಸುಲಭ. ಆದರೆ ಅಜ್ಞಾತರಾಗಿರುವ ಸಾಹಿತಿಗಳ ಬಗ್ಗೆ ಕೆಲಸ ಮಾಡುವುದು ಕಡಿಮೆ. ಇಂತಹ ಅಲಕ್ಷಿತ ಸಾಹಿತಿಗಳ ದೊಡ್ಡ ಪಡೆಯೇ ಇದೆ. ಈಗ ಅವರ ಬಗ್ಗೆ ಅಪಾರ ಕೆಲಸಗಳು ನಡೆಯಬೇಕು ಎಂದು ಪ್ರೊ.ತಾರಾನಾಥ್ ಸಲಹೆ ನೀಡಿದರು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ನಿರ್ದೇಶಕ ಪ್ರೊ.ಎಂ.ನಂಜಯ್ಯ ಹೊಂಗನೂರು ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಕೃತಿ ಸಂಪಾದಕಿ ಧನಲಕ್ಷ್ಮಿ ಟಿ.ಸಿ., ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಪಾಲಕಿ ಡಾ.ಪಿ.ಸರಸ್ವತಿ, ಪ್ರಸಾರಾಂಗದ ವಿಶ್ರಾಂತ ಉಪ ನಿರ್ದೇಶಕ ಬಾ.ವೇ.ಶ್ರೀಧರ, ದಿವಂಗತ ಶೇಷನಾರಾಯಣರವರ ಹಿರಿಯ ಪುತ್ರಿ ಎಸ್.ವೀಣಾ, ಚಿಂತನ ಚಿತ್ತಾರ ಪ್ರಕಾಶಕ ಚಿತ್ತಣ್ಣನವರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಶ್ರೀ ಉರಿಲಿಂಗ ಪೆದ್ದೇಶ್ವರ ಸಂಸ್ಥಾನದ ಮೈಸೂರು ಶಾಖಾ ಮಠದಲ್ಲಿ ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ವಿಕ್ರಾಂತ್ ದಲಿತ ನೌಕರರ ಸಮಿತಿ ವತಿಯಿಂದ 2024ರ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಈ ವೇಳೆ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಮಾಜಿ ಮೇಯರ್ ಪುರುಷೋತ್ತಮ್, ಸಮಾಜ ಸೇವಕ, ಗುತ್ತಿಗೆದಾರ ಉದಯಕುಮಾರ್ ಇನ್ನಿತರರಿದ್ದರು.

ಕಾನೂನು ಸ್ವಯಂಸೇವಕರಿಗೆ ತರಬೇತಿ

ಮೈಸೂರು,ಜ.20–ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಹೊಸದಾಗಿ ಆಯ್ಕೆಯಾಗಿರುವ ಕಾನೂನು ಸ್ವಯಂಸೇವಕರಿಗೆ ತರಬೇತಿ ಕಾರ್ಯಕ್ರಮವನ್ನು ಕೋರ್ಟ್ ಕಾಂಪ್ಲೆಕ್ಸ್‌ನ ವಿಡಿಯೋ ಕಾನ್ಫರೆನ್ಸ್ ಹಾಲ್‌ನಲ್ಲಿ ಹಮ್ಮಿಕೊಳ್ಳಲಾಗಿತ್ತು.

ಜಿಲ್ಲಾ ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ಪ್ರಭಾವತಿ ಎಂ.ಹಿರೇಮಠ್ ಕಾರ್ಯಕ್ರಮ ಉದ್ಘಾಟಿಸಿದರು. ಬಾರ್ ಅಸೋಸಿಯೇಷನ್ ಅಧ್ಯಕ್ಷ ಮಹದೇವಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದಿನೇಶ್.ಬಿ.ಜಿ, ಸಂಪನ್ಮೂಲ ವ್ಯಕ್ತಿಗಳಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಪ್ಯಾನಲ್ ಅಡ್ವೋಕೇಟ್‌ಗಳಾದ ಎನ್.ಸುಂದರರಾಜ್. ಬಿ.ಎಂ.ಮಾರಪ್ಪ ಭಾಗವಹಿಸಿದ್ದರು.

ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಪುಟ್ಟಸಿದ್ಧಶೆಟ್ಟಿ ಸ್ಪರ್ಧೆ



ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾಜಿ ಎಂಎಲ್‌ಸಿ ಪುಟ್ಟಸಿದ್ಧಶೆಟ್ಟಿ ಮಾತನಾಡಿದರು.

ಮೈಸೂರು,ಜ.20(ಜಿಎ)–ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಸ್ವಾಭಿಮಾನಿ ಶಿಕ್ಷಕರ ವೇದಿಕೆ ವತಿಯಿಂದ ಸ್ಪರ್ಧಿಸುತ್ತಿರುವುದಾಗಿ ಮಾಜಿ ಎಂಎಲ್‌ಸಿ ಕೆ.ಸಿ. ಪುಟ್ಟಸಿದ್ಧಶೆಟ್ಟಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾವು ಈಗಾಗಲೇ ಶಿಕ್ಷಕರ ಬೇಡಿಕೆಗಳ ಈಡೇರಿಕೆಗಾಗಿ ಸಂಘಟನಾತ್ಮಕ ಹೋರಾಟ ನಡೆಸಿದ್ದು, 1986ರಿಂದ 1989ರವರೆಗೆ ಪ್ರೌಢಶಾಲಾ ಸಹ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವವರ ಬೇಡಿಕೆ ಈಡೇರಿಕೆಗಾಗಿ ಸದನದ ಹೊರಗೆ ಮತ್ತು ಒಳಗೆ ಹೋರಾಟ ನಡೆಸಿದ್ದೇನೆ. ಪ್ರೌಢಶಾಲಾ ಸಹ ಶಿಕ್ಷಕರಿಗೆ ಗ್ರೇಡ್ ಒನ್ ಜಾರಿಯಾಗಲು ಶ್ರಮಿಸಿದ್ದೇನೆ. ಇದೇ ರೀತಿ ಹಲವಾರು ಬಾರಿ ಹೋರಾಡಿದ್ದೇನೆ. ಹೀಗಾಗಿ ಈಗಲೂ ಆಯ್ಕೆ ಮಾಡಿದಲ್ಲಿ ಶಿಕ್ಷಕರ ಸಮಸ್ಯೆ ಬಗೆಹರಿಸಿ, ಬೇಡಿಕೆ ಈಡೇರಿಕೆಗೆ ಸದನದಲ್ಲಿ ಧ್ವನಿಯಾಗಲಿದ್ದೇನೆ ಎಂದರು. ಸುದ್ದಿಗೋಷ್ಠಿಯಲ್ಲಿ ವೇದಿಕೆ ಅಧ್ಯಕ್ಷ ನಂಜಪ್ಪ, ದಾಸಪ್ಪಶೆಟ್ಟಿ, ಶಿವರಾಜು ಉಪಸ್ಥಿತರಿದ್ದರು.

ಇಂದು ಶ್ರೀರಾಮನ ಉತ್ಸವಮೂರ್ತಿ ಪ್ರತಿಷ್ಠಾಪನೆ

ಮೈಸೂರು,ಜ.20(ಆರ್‌ಕೆ)–ಮೈಸೂರಿನ ಹಳೇ ಸಂತೆಪೇಟೆಯಲ್ಲಿರುವ ಆಲಮ್ಮನವರ ಕುಂಚಿಟಿಗರ ಶ್ರೀರಾಮಮಂದಿರದಲ್ಲಿ ನಾಳೆ (ಜ.21) ಶ್ರೀರಾಮನ ಉತ್ಸವ ಮೂರ್ತಿ ಪ್ರತಿಷ್ಠಾಪನೆ ಮಾಡಲಾಗುವುದು. ಬೆಳಗ್ಗೆ 8.30 ಗಂಟೆಗೆ ಪೂಜಾ ವಿಧಿ–ವಿಧಾನಗಳು ಆರಂಭವಾಗಿ ಸಂಜೆ 5 ಗಂಟೆಗೆ ಹೋಮ, ಧಾರ್ಮಿಕ ಕೈಂಕರ್ಯಗಳು ನೆರವೇರಲಿದ್ದು, ಜ.22ರ ಮಧ್ಯಾಹ್ನ 12.35ರಿಂದ ಮಹಾಕುಂಭಾಭಿಷೇಕ, ಕಲ್ಪೋಕ್ತ ಪೂಜೆ, ಮಹಾಮಂಗಳಾರತಿ, ರಾಜೋಪಚಾರ, ತೀರ್ಥ–ಪ್ರಸಾದ ವಿನಿಯೋಗವಾಗಲಿದೆ ಎಂದು ಕುಂಚಿಟಿಗರ ಸಂಘದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವ್ಯಕ್ತಿತ್ವ ಅರಳಲು ಪುಸ್ತಕ ಓದುವ ಹವ್ಯಾಸ ಸಹಕಾರಿ

● ಮೈಸೂರು ವಿವಿ ಸಂದರ್ಶಕ ಪ್ರಾಧ್ಯಾಪಕ ಪ್ರೊ. ಸಿ. ನಾಗಣ್ಣ ಅಭಿಮತ
● ಲೇಖಕ ರಹಮತ್ ತರೀಕೆರೆಯವರ ಜೆರುಸಲೇಂ, ಗಾಯತ್ರಿ ಮೂರ್ತಿಯವರ ಅಂಜದಿರು ಮನವೇ, ಹೆಚ್.ಎನ್.ಗೀತಾರ ದಾರಿದೀಪಗಳು, ಹಾದಿ ಹಣತೆಗಳು ಕೃತಿಗಳ ಬಿಡುಗಡೆ; ನವ ಕರ್ನಾಟಕ ಪುಸ್ತಕ ಪ್ರದರ್ಶನ



ನವ ಕರ್ನಾಟಕ ಪುಸ್ತಕ ಪ್ರದರ್ಶನ ಉದ್ಘಾಟನಾ ಸಂದರ್ಭದಲ್ಲಿ ಹಲವು ಪುಸ್ತಕಗಳನ್ನು ಮೈಸೂರು ವಿವಿ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ ಬಿಡುಗಡೆಗೊಳಿಸಿದರು.

ಮೈಸೂರು, ಜ.20(ಎಸ್‌ಪಿಎನ್)– ಓದುವ ಹವ್ಯಾಸ ರೂಢಿಸಿಕೊಂಡರೆ ಪುಸ್ತಕಗಳ ಮೂಲಕ ವಿವಿಧ ಲೋಕಗಳನ್ನು ಅರಿಯಲು ಸಾಧ್ಯ. ಅಲ್ಲದೆ, ಪ್ರತಿಯೊಬ್ಬ ಓದುಗನಿಗೂ ಪುಸ್ತಕಗಳ ಅಧ್ಯಯನದಿಂದ ತನ್ನ ವ್ಯಕ್ತಿತ್ವ ಅರಳಿಸಿಕೊಳ್ಳಲು ಸಹಕಾರಿಯಾಗಲಿದೆ ಎಂದು ಹಿರಿಯ ಸಾಹಿತಿ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಸಿ. ನಾಗಣ್ಣ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯ ಎಂಜಿನಿಯರುಗಳ ಸಂಸ್ಥೆಯ ಸಭಾಂಗಣದಲ್ಲಿ ನವ ಕರ್ನಾಟಕ ಪುಸ್ತಕ ಪ್ರದರ್ಶನ ಉದ್ಘಾಟನೆ ಹಾಗೂ ಲೇಖಕ ರಹಮತ್ ತರೀಕೆರೆ ರಚಿತ ಜೆರುಸಲೇಂ, ಲೇಖಕಿ ಗಾಯತ್ರಿ ಮೂರ್ತಿ ರಚಿತ 'ಅಂಜದಿರು ಮನವೇ', ಹೆಚ್.ಎನ್.ಗೀತಾ ರಚಿತ 'ದಾರಿದೀಪಗಳು' ಮತ್ತು 'ಹಾದಿಯ ಹಣತೆಗಳು' ಪುಸ್ತಕಗಳ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದರು.

ಪುಸ್ತಕ ಕ್ರಾಂತಿ ಆಗಬೇಕು: ಸಂಸ್ಕೃತಿ ಮತ್ತು ಉದ್ಯಮ ಎರಡೂ ಜೊತೆಯಾಗಿ ಮುನ್ನಡೆದರೆ ಅದು ಪ್ರಕಾಶಕರಿಗೂ, ಮಾರಾಟಗಾರರಿಗೂ, ಓದುಗರಿಗೂ ಅನುಕೂಲಕರ. ಆದರೆ, ಯಾವುದೇ ಕಾರಣಕ್ಕೂ ಉದ್ಯಮವು, ಸಂಸ್ಕೃತಿಯನ್ನು ಹಿಂದಿಕ್ಕದಂತೆ ನೋಡಿಕೊಳ್ಳುವುದು ನಮ್ಮ–ನಿಮ್ಮೆಲ್ಲರ ಜವಾಬ್ದಾರಿ ಎಂದ ಅವರು, ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿಯೂ ಇಂತಹ ಪುಸ್ತಕ ಮೇಳಗಳನ್ನು ಆಯೋಜನೆ ಮಾಡಬೇಕಿದೆ. ಈ ವೇಳೆಗಾಗಲೇ ಹಳ್ಳಿ ಹಳ್ಳಿಗಳಲ್ಲಿ ಪುಸ್ತಕ ಕ್ರಾಂತಿ ನಡೆಯಬೇಕಿತ್ತು. ಆದರೆ ಆ ಚಿಂತನೆ ಇತ್ತೀಚೆಗೆ ಕುಸಿದು ಹೋಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮಳಿಗೆಗಳು ನಷ್ಟದಲ್ಲಿವೆ: ಪುಸ್ತಕೋದ್ಯಮವನ್ನೇ ನೆಚ್ಚಿಕೊಂಡ ಪುಸ್ತಕ ಮಾರಾಟ ಮಳಿಗೆಗಳು ಈಗಲೂ ನಷ್ಟ ಅನುಭವಿಸುತ್ತಿವೆ. ಇದರ ಜೊತೆಗೆ ಅನೇಕ ಪುಸ್ತಕ ಮಳಿಗೆಗಳು ಇದ್ದೂ ಇಲ್ಲದಂತಾಗಿವೆ. ಪ್ರತಿಯೊಬ್ಬ ಓದುಗರು ಮಳಿಗೆಗೆ ಹೋಗಿ ಪುಸ್ತಕ ಕೊಳ್ಳುವುದಕ್ಕೂ ಆನ್‌ಲೈನ್‌ನಲ್ಲಿ ಪುಸ್ತಕ ಖರೀದಿಸಿ ಓದುವ ಆನಂದಕ್ಕೂ ಬಹಳ ವ್ಯತ್ಯಾಸವಿದೆ ಎಂದು ತಿಳಿಸಿದರು.

ಬರಹಗಾರ ಡಾ.ಗಣೇಶ ಅಮೀನಗಡ ಮಾತನಾಡಿ, ರಹಮತ್ ತರೀಕೆರೆ ರಚಿತ ಜೆರುಸಲೇಂ ಪುಸ್ತಕವನ್ನು ಪ್ರವಾಸ ಕಥನ ಎನ್ನುವ ಬದಲು ಪ್ರವಾಸ ಚಿಂತನೆ ಎಂದು ಕರೆದಿದ್ದಾರೆ. ಜೆರುಸಲೇಂ, ಈಜಿಪ್ಟ್ ಸೇರಿದಂತೆ ಇತರೆ ಮಧ್ಯಪ್ರಾಚ್ಯ ದೇಶಗಳ ಪ್ರವಾಸ ಕೈಗೊಂಡಿದ್ದಾಗ, ಅಲ್ಲಿನ ಸಂಸ್ಕೃತಿ, ವ್ಯವಹಾರ, ಜನಸಂಖ್ಯಾ ಅಭಿವೃದ್ಧಿ ಕುರಿತು ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ ಎಂದರು.

ಗಾಯತ್ರಿ ಮೂರ್ತಿ ರಚಿತ ಅಂಜದಿರು ಮನವೇ ಕೃತಿ ಕುರಿತು ಮಾತನಾಡಿದರು. ಎಂಎಂಕೆ ಮತ್ತು ಎಸ್‌ಡಿಎಂ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥೆ ಡಾ.ವಿನೋದ, ಎಚ್.ಎನ್.ಗೀತಾ ರಚಿತ 'ದಾರಿ ದೀಪಗಳು', 'ಹಾದಿಯ ಹಣತೆಗಳು' ಪುಸ್ತಕ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿಗಳಾದ ಡಾ.ಪ್ರಧಾನ ಗುರುದತ್ತ, ಡಾ.ರಹಮತ್ ತರೀಕೆರೆ, ಗಾಯತ್ರಿ ಮೂರ್ತಿ, ನವ ಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್ ಶಾಖಾ ವ್ಯವಸ್ಥಾಪಕ ಎನ್.ಕೆ.ನಾರಾಯಣ, ಪ್ರಕಾಶಕ ಸಂಸ್ಕೃತಿ ಸುಬ್ರಹ್ಮಣ್ಯ, ನಿವೇದಿತಾ, ಎಂಎಂಕೆ ಮತ್ತು ಎಸ್‌ಡಿಎಂ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಮಾರುತಿ ಇದ್ದರು.

ಜ.28ರವರೆಗೆ ಪುಸ್ತಕ ಪ್ರದರ್ಶನ

ಪ್ರದರ್ಶನದಲ್ಲಿ ಕೆಲವು ಪುಸ್ತಕಗಳಿಗೆ ಶೇ.50ರಷ್ಟು ರಿಯಾಯಿತಿ ಘೋಷಿಸಿದರೆ, ಇನ್ನು ಕೆಲವು ಪುಸ್ತಕಗಳಿಗೆ ಶೇ.15ರಷ್ಟು ರಿಯಾಯಿತಿ ಘೋಷಿಸಿದೆ. ಈ ಪ್ರದರ್ಶನ ಜ.28ರವರೆಗೆ ಇರಲಿದ್ದು, ಪ್ರತಿ ದಿನ ಬೆಳಗ್ಗೆ 9.30ರಿಂದ 8.30ರವರೆಗೆ ಪ್ರವೇಶ ಇರಲಿದೆ.

> "ಕೇರಳ ಹಾಗೂ ತಮಿಳುನಾಡು ಸರ್ಕಾರಗಳು ಆ ರಾಜ್ಯದ ಪ್ರತಿ ಜಿಲ್ಲೆಯಲ್ಲೂ ಪುಸ್ತಕ ಮೇಳವನ್ನು ಆಯೋಜಿಸಿ, ಪ್ರಕಾಶಕರಿಗೆ ನೆರವಾಗುತ್ತಿವೆ. ಆದರೆ, ನಮ್ಮ ಸರ್ಕಾರ ಇತ್ತೀಚಿನ ದಿನಗಳಲ್ಲಿ ಕನ್ನಡ ಪುಸ್ತಕ ಮೇಳ ಆಯೋಜನೆಗೂ ಮೀನಾಮೇಷ ಎಣಿಸುತ್ತಿದೆ. 2020ರಲ್ಲಿ ಪ್ರಕಟವಾದ ಪುಸ್ತಕಗಳನ್ನು ಪ್ರಸ್ತುತ 2024ರಲ್ಲಿ ಸಾರ್ವಜನಿಕ ಗ್ರಂಥಾಲಯಗಳಿಗೆ ಖರೀದಿ ಮಾಡುತ್ತಿದೆ. ಇದರ ಜೊತೆಗೆ ಪುಸ್ತಕಗಳ ಮೇಲೆ ಜಿಎಸ್‌ಟಿ ಟ್ಯಾಕ್ಸ್, ಲೇಖಕರಿಗೆ ಕೊಡುವ ರಾಯಲ್ಟಿಗೂ ಜಿಎಸ್‌ಟಿ ವಿಧಿಸುತ್ತಿವೆ. ಈ ಹೊರೆ ಓದುಗರ ಮೇಲೆ ಬೀಳುತ್ತಿದ್ದು, ಇದರಿಂದ ಮಧ್ಯಮ ವರ್ಗದವರು ಪುಸ್ತಕಗಳನ್ನು ಖರೀದಿಸಲು ಹಿಂದು–ಮುಂದು ನೋಡುವ ಪರಿಸ್ಥಿತಿ ನಿರ್ಮಾಣವಾಗಿದೆ.
>
> –ಎ.ರಮೇಶ ಉಡುಪ, ಕಾರ್ಯನಿರ್ವಾಹಕ, ನವ ಕರ್ನಾಟಕ ಪ್ರಕಾಶನ


ಜ.26, ಕಾಂತರಾಜು ವರದಿ ಸಂವಾದ

ಮೈಸೂರು,ಜ.20–ಭಾರತೀಯ ಪರಿವರ್ತನ ಸಂಘದ ವತಿಯಿಂದ ಜನವರಿ 26ರ ಸಂವಿಧಾನದ ದಿನಾಚರಣೆ ಅಂಗವಾಗಿ 'ಕಾಂತರಾಜು ವರದಿ' ಒಂದು ಮುಕ್ತ ಸಂವಾದವನ್ನು ಮೈಸೂರಿನ ಬುದ್ಧ ವಿಹಾರದಲ್ಲಿ ಏರ್ಪಡಿಸಲಾಗಿದೆ.

ಅಂದು ಬೆಳಗ್ಗೆ 10.30ಕ್ಕೆ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯ ಕೆ.ಎನ್.ಲಿಂಗಪ್ಪ ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ಭಾರತೀಯ ಪರಿವರ್ತನ ಸಂಘದ ಅಧ್ಯಕ್ಷ ಪ್ರೊ.ಹರಿರಾವ್ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಮಾಜಿ ಮೇಯರ್ ಪುರುಷೋತ್ತಮ್ ಸೇರಿದಂತೆ ಮತ್ತಿತರರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಿಧನ

ಯಶೋಧಮ್ಮ



ಮೈಸೂರು, ಜ.20– ಮೈಸೂರಿನ ವಿಜಯನಗರ ಮೂರನೇ ಹಂತದ ನಿವಾಸಿ ಯಶೋಧಮ್ಮ (72) ಶನಿವಾರ ನಿಧನರಾದರು. ಮೃತರು ಪುತ್ರ ವಿನಯ್, ಪುತ್ರಿ ಚೈತ್ರಾ, ಅಳಿಯ ಡಾ.ವೇಣುಗೋಪಾಲ್, ಸೊಸೆ ರೇಖಾ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ (ಭಾನುವಾರ) ಮಧ್ಯಾಹ್ನ 12 ಗಂಟೆಗೆ ವಿಜಯನಗರದ ಚಿರಶಾಂತಿ ಧಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಾ.21, ವೈರಮುಡಿ ಮಹೋತ್ಸವ: ಸಕಲ ಸಿದ್ಧತೆಗೆ ಡಿಸಿ ಸೂಚನೆ

ಮಂಡ್ಯ, ಜ.20– ವಿಶ್ವವಿಖ್ಯಾತ ಮೇಲುಕೋಟೆ ಶ್ರೀ ಚೆಲುವನಾರಾಯಣಸ್ವಾಮಿ ದೇವಾಲಯದಲ್ಲಿ ಮಾ.21ರಂದು ಶ್ರೀ ವೈರಮುಡಿ ಉತ್ಸವ ನಡೆಯಲಿದ್ದು, ಈಗಿನಿಂದಲೇ ಸಕಲ ಸಿದ್ಧತೆ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಕುಮಾರ್ ತಿಳಿಸಿದರು.

ಶನಿವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ 2024ನೇ ಸಾಲಿನ ಶ್ರೀ ವೈರಮುಡಿ ಬ್ರಹ್ಮೋತ್ಸವದ ಪೂರ್ವ ಸಿದ್ಧತಾ ಸಭೆ ನಡೆಸಿ ಮಾತನಾಡಿದ ಅವರು, ಶ್ರೀ ವೈರಮುಡಿ ಬ್ರಹ್ಮೋತ್ಸವವು ಮಾ.16 ರಿಂದ 26 ರವರೆಗೆ ನಡೆಯಲಿದ್ದು, ಆಗಮಿಸುವ ಭಕ್ತರಿಗೆ ಮೂಲಭೂತ ವ್ಯವಸ್ಥೆಗಳಾದ ಶುದ್ಧ ಕುಡಿಯುವ ನೀರು, ಅಗತ್ಯವಿರುವ ಸ್ಥಳಗಳಲ್ಲಿ ತಾತ್ಕಾಲಿಕ ಶೌಚಾಲಯದ ವ್ಯವಸ್ಥೆ ಮಾಡಬೇಕು ಎಂದರು.

ವಾಹನ ಪಾರ್ಕಿಂಗ್‌ಗಾಗಿ ಸ್ಥಳ ಗುರುತಿಸಿ ಸಮತಟ್ಟು ಮಾಡಬೇಕು. ವಾಹನ ಪಾರ್ಕಿಂಗ್ ಸ್ಥಳದಲ್ಲಿ ವಿದ್ಯುತ್ ದೀಪಗಳ ವ್ಯವಸ್ಥೆ ಮಾಡಿ ಸುಗಮ ವಾಹನ ಸಂಚಾರಕ್ಕಾಗಿ ಹಾಗೂ ಭಕ್ತರ ಅನುಕೂಲಕ್ಕಾಗಿ ಅಗತ್ಯವಿರುವ ಕೆಎಸ್ ಆರ್‌ಟಿಸಿ ಬಸ್‌ಗಳ ವ್ಯವಸ್ಥೆ ಮಾಡಿಕೊಳ್ಳಿ ಎಂದರು. ಆರೋಗ್ಯ ಇಲಾಖೆಯಿಂದ ತಾತ್ಕಾಲಿಕ ಆರೋಗ್ಯ ಕೇಂದ್ರ ತೆರೆದು ಅಗತ್ಯ ವೈದ್ಯರು ಹಾಗೂ ಸಿಬ್ಬಂದಿಗಳನ್ನು ನಿಯೋಜಿಸಿ. ದೇವಸ್ಥಾನದ ಸುತ್ತ ದೀಪಾಲಂಕಾರದ ವ್ಯವಸ್ಥೆ ಮಾಡುವಂತೆ ತಿಳಿಸಿದರು.



ಜಿಲ್ಲಾಧಿಕಾರಿ ಡಾ.ಕುಮಾರ್ ಅಧ್ಯಕ್ಷತೆಯಲ್ಲಿ ಶ್ರೀ ವೈರಮುಡಿ ಬ್ರಹ್ಮೋತ್ಸವದ ಪೂರ್ವ ಸಿದ್ಧತಾ ಸಭೆ ನಡೆಯಿತು.

ಮಹೋತ್ಸವವನ್ನು ಅಚ್ಚುಕಟ್ಟಾಗಿ ನಡೆಸಲು ಸ್ವಾಗತ, ಆಹಾರ ಆರೋಗ್ಯ, ಸ್ವಚ್ಛತೆ ಸೇರಿದಂತೆ ವಿವಿಧ ಸಮಿತಿಗಳನ್ನು ರಚಿಸಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಕೆಲಸಗಳನ್ನು ವಹಿಸಿ ಎಂದರು.

ಕಾರ್ಯಕ್ರಮದ ವಿವರ: ಮಾ.16 ರಂದು ಶ್ರೀ ವೈರಮುಡಿ ಬ್ರಹ್ಮೋತ್ಸವಕ್ಕೆ ಅಂಕುರಾರ್ಪಣ, 17ರಂದು ಕಲ್ಯಾಣೋತ್ಸವ ಧಾರಾ ಮಹೋತ್ಸವ–ಅದಿವಾಸರ– ರಕ್ಷಾಬಂಧನ– ಧ್ವಜಪ್ರತಿಷ್ಠೆ, 18ರಂದು 1ನೇ ತಿರುನಾಳ್–ಧ್ವಜಾರೋಹಣ– ಭೇರೀತಾಡನ– ತಿರುಪ್ಪರೈ –ಹಂಸವಾಹನ– ಯಾಗಶಾಲಾ ಪ್ರವೇಶ, 19ರಂದು 2ನೇ ತಿರುನಾಳ್ ಶೇಷವಾಹನ ಪಡೆಯೇತ್ತ, 20ರಂದು 3ನೇ ತಿರುನಾಳ್– ನಾಗವಲ್ಲಿ ಮಹೋತ್ಸವ– ನರಂಧೋಳಿಕಾರೋಹಣ– ಚಂದ್ರಮಂಡಲ ವಾಹನ– ಪಡಿಯೇತ್ತ, 21ರಂದು 4ನೇ ತಿರುನಾಳ್ ಶ್ರೀ ವೈರಮುಡಿ ಕಿರೀಟಧಾರಣ ಮಹೋತ್ಸವ–ಪಡಿಯೇತ್ತ, 22ರಂದು 5ನೇ ತಿರುನಾಳ್– ಪ್ರಹ್ಲಾದ ಪರಿಪಾಲನ– ಗರುಡವಾಹನ–ವಿಶೇಷ ಪಡಿಯೇತ್ತ, 23 ರಂದು 6ನೇ ತಿರುನಾಳ್– ಗಜೇಂದ್ರ ಮೋಕ್ಷ–ಆನೆವಸಂತ– ಕುದುರೆ ವಾಹನ–ಆನೆ ವಾಹನ–ವಿಶೇಷ ಪಡಿಯೇತ್ತ, 24ರಂದು 7ನೇ ತಿರುನಾಳ್– ಪೊಂಗುನ್ಯೂತ್ತರಮ್– ಶ್ರೀ ಮನ್ಮಥಾರೋಥೋತ್ಸವ, 25ರಂದು 8ನೇ ತಿರುನಾಳ್– ತೆಪ್ಪೋತ್ಸವ– ಡೋಲೋತ್ಸವ– ಕುದುರೆ ವಾಹನ– ಕಳ್ಳರಸುಲಿಗೆ, 26ರಂದು 9ನೇ ತಿರುನಾಳ್– ಸಂಧಾನ ಸೇವೆ –ಚೂರ್ಣ ಅಭಿಷೇಕ– ಅವಬೃಥ – ಪಟ್ಟಾಭಿಷೇಕ –ಪುಷ್ಪಮಂಟಪ ರೋಹಣ– ಸಮರ ಭೂಪಾಲವಾಹನ– ಪಡಿಮಾಲೆ – ಪೂರ್ಣಾ ಹುತಿ, 27ರಂದು 10ನೇ ತಿರುನಾಳ್–ಶ್ರೀನಾರಾಯಣಸ್ವಾಮಿಗೆ ಮಹಾಭಿಷೇಕ– ಪುಷ್ಪಯಾಗ–ಕತ್ತಲು ಪ್ರದಕ್ಷಣೆ– ಹನುಮಂತವಾಹನ– ಉದ್ವಾಸನ ಪ್ರಬಂಧ, 28ರಂದು ಶ್ರೀ ಅಮ್ಮನವರಿಗೆ ಶ್ರೀ ಯೋಗಾನರಸಿಂಹಸ್ವಾಮಿಗೆ ಮಹಾಭಿಷೇಕ– ಶೇರ್ತಿಸೇವೆ –ಕೊಡೈತಿರುನಾಳ್ ಉತ್ಸವ ಪ್ರಾರಂಭ ಕಾರ್ಯಕ್ರಮ ನಡೆಯಲಿದೆ.

ಸಭೆಯಲ್ಲಿ ಎಸ್ಪಿ ಎನ್.ಯತೀಶ್, ಉಪವಿಭಾಗಾಧಿಕಾರಿ ಶಿವಮೂರ್ತಿ, ಮುಜರಾಯಿ ತಹಸೀಲ್ದಾರ್ ತಮ್ಮೇಗೌಡ, ಮೇಲುಕೋಟೆ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಮಹೇಶ್, ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ಮೋಹನ್, ಹಾಗೂ ಇನ್ನಿತರು ಉಪಸ್ಥಿತರಿದ್ದರು.

ಮಳವಳ್ಳಿಯಲ್ಲಿ ಉದ್ಯೋಗ ಸೃಷ್ಟಿಗೆ ಒತ್ತು



ತರಬೇತಿ ಕಾರ್ಯಕ್ರಮವನ್ನು ಶಾಸಕ ನರೇಂದ್ರಸ್ವಾಮಿ ಉದ್ಘಾಟಿಸಿದರು.

ಮಳವಳ್ಳಿ, ಜ.20– ಬಿ.ಜಿ.ಪುರ ಹೋಬಳಿಯಲ್ಲಿ ಹಸಿರನ್ನು ನೋಡುವ ಜೊತೆಗೆ ರೈತರ ಬದುಕನ್ನು ಹಸನು ಮಾಡುವ ಜವಾಬ್ದಾರಿ ನನ್ನದಾಗಿದೆ. ಸಾವಿರಾರು ಎಕರೆಯಲ್ಲಿ ತೋಟಗಾರಿಕೆ ಮತ್ತು ಕೃಷಿ ಬೆಳೆಗಳನ್ನು ಬೆಳೆಯುವುದರಿಂದ ತಾಲೂಕಿನಲ್ಲಿ ಕಾರ್ಖಾನೆಗಳು ತಲೆ ಎತ್ತಲಿದ್ದು, ಇದರಿಂದ ಸಾವಿರಾರು ನಿರುದ್ಯೋಗಿ ಯುವಕರಿಗೆ ಉದ್ಯೋಗ ಸಿಗಲಿದೆ ಎಂದು ಶಾಸಕ ಪಿ.ಎಂ.ನರೇಂದ್ರಸ್ವಾಮಿ ತಿಳಿಸಿದರು.

ಶನಿವಾರ ತಾಲೂಕಿನ ಬಾಚನಹಳ್ಳಿ, ಚೊಟ್ಟನಹಳ್ಳಿಯಲ್ಲಿ ಕಾವೇರಿ ನೀರಾವರಿ ನಿಗಮದ ವತಿಯಿಂದ ಆಯೋಜಿಸಿದ್ದ ಪೂರಿಗಾಲಿ ಹನಿ ನೀರಾವರಿ ಯೋಜನೆಯ ಫಲಾನುಭವಿಗಳ ಜೊತೆ ಯೋಜನೆ ಉದ್ದೇಶ ಮತ್ತು ಆಧುನಿಕ ಕೃಷಿ ಪದ್ಧತಿಯ ಬಗ್ಗೆ ಚರ್ಚೆ ಹಾಗೂ ಫಲಾನುಭವಿಗಳಿಗೆ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಾಮೂಹಿಕ ಬೆಳೆ ಬೆಳೆದರೆ ತಾವು ಬೆಳೆದ ಬೆಳೆ ಕೊಂಡುಕೊಳ್ಳಲು ತಾಲೂಕಿನಲ್ಲಿ ಮಾರುಕಟ್ಟೆ ನಿರ್ಮಾಣವಾಗುತ್ತದೆ. ಹೆಚ್ಚು ಬೆಳೆಗೆ ಬೆಳೆ ಮಾರಾಟ ಮಾಡಿದರೆ ಲಾಭಾಂಶ ರೈತರಿಗೆ ನೇರವಾಗಿ ಸಿಗಲಿದೆ. ತಾವು ಬೆಳೆದ ಬೆಳೆಗೆ ಉತ್ತಮ ಬೆಲೆ ಸಿಗದಿದ್ದರೇ ಬೆಳೆಗಳನ್ನು ಸಂಗ್ರಹಿಸಲು ಶೀತಲ ಶೇಖರಣಾ ಘಟಕ ಸ್ಥಾಪಿಸಿ ಉತ್ತಮ ಬೆಲೆ ಸಿಕ್ಕಾಗ ಮಾರುವ ಅವಕಾಶ ಈ ಯೋಜನೆಯಲ್ಲಿದೆ. ಹಲವು ಘಟಕಗಳು ಸ್ಥಾಪನೆಯಾಗುವುದರಿಂದ ಸ್ಥಳೀಯ ಯುವಕರಿಗೆ ಉದ್ಯೋಗ ದೊರಕಲಿದೆ ಎಂದು ವಿವರಿಸಿದರು.

ಬಿ.ಜಿ.ಪುರ ವ್ಯಾಪ್ತಿಗೆ ನೀರನ್ನು ಒದಗಿಸಬೇಕೆಂಬ ಉದ್ದೇಶದಿಂದ ಸರ್ಕಾರದಿಂದ 593 ಕೋಟಿ ರೂ. ವೆಚ್ಚದ ಪೂರಿಗಾಲಿ ಹನಿ ನೀರಾವರಿ ಯೋಜನೆ ಜಾರಿಗೆ ತರಲಾಗಿತ್ತು ಕಳೆದ 5 ವರ್ಷಗಳ ಕಾಲ ಮಂದಗತಿಯಲ್ಲಿ ಸಾಗಿದ ಕಾಮಗಾರಿ ಚುರುಕುಗೊಳಿಸಿ ಅಂತಿಮ ಘಟ್ಟಕ್ಕೆ ತರಲಾಗಿದೆ. ಹನಿ ನೀರಾವರಿ ಯೋಜನೆ ಬಳಕೆ ಬಗ್ಗೆ ರೈತರಿಗೆ ಅರಿವು ಮೂಡಿಸುವ ಉದ್ದೇಶದಿಂದ ತರಬೇತಿ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದರು.

ಹನಿ ನೀರಾವರಿ ಯೋಜನೆಗೆ ಒಳಪಡುವ ಸಾವಿರ ಎಕರೆಗೆ ಒಂದು ಬ್ಲಾಕ್ ಸೊಸೈಟಿ ಮಾಡಲಾಗುತ್ತದೆ ಒಂದು ಸಾವಿರ ಎಕರೆಯಲ್ಲಿ ಒಂದೇ ಬೆಳೆ ಬೆಳೆಯಬೇಕಾಗಿದ್ದು, ಬೆಳೆ ನಿರ್ಧಾರವನ್ನು ರೈತರೇ ನಿರ್ಧಾರ ಮಾಡಬೇಕಾಗುತ್ತದೆ. ಬಹು ಜನರ ತೀರ್ಮಾನದೊಂದಿಗೆ ಬೆಳೆ ಆಯ್ಕೆ ಮಾಡಿ ಸೊಸೈಟಿ ಮೂಲಕ ಆಧುನಿಕ ಯಂತ್ರೋಪಕರಣದ ಮೂಲಕ ಕೃಷಿ ಮಾಡಲಾಗುತ್ತದೆ ಯಂತ್ರದ ಮೂಲಕವೇ ನೀರು ಮತ್ತು ಗೊಬ್ಬರ ನೀಡುವುದರಿಂದ ಕಡಿಮೆ ಶ್ರಮದ ಜೊತೆಗೆ ಸಮಯ ಉಳಿತಾಯವಾಗುತ್ತದೆ ಎಂದರು.

ಈ ವೇಳೆ ಶಾಸಕ ರಮೇಶ್‌ಬಾಬು, ಡಾ.ವೆಂಕಟೇಶ್, ಪ್ರಕಾಶ್, ದೀಪಕ್, ತೋಟಗಾರಿಕೆ ಸಹಾಯಕ ನಿರ್ದೇಶಕ ಶಾಂತರಾಜು, ಬೇಸಾಯ ತಜ್ಞ ಜೋಶಿ ಇತರರಿದ್ದರು.

ಸಾಲಬಾಧೆ: ರೈತ ಆತ್ಮಹತ್ಯೆ

ಮದ್ದೂರು, ಜ.20– ಸಾಲಬಾಧೆ ತಾಳಲಾರದೇ ರೈತನೋರ್ವ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಹುಲಿಗೆರೆಪುರ ಗ್ರಾಮದಲ್ಲಿ ಶನಿವಾರ ನಡೆದಿದೆ.

ಗ್ರಾಮದ ರಾಮೇಗೌಡ ಜಯಮ್ಮ ದಂಪತಿ ಪುತ್ರ ಹೆಚ್.ಆರ್.ನಾಗರಾಜು (48) ಸಾವನ್ನಪ್ಪಿದ ರೈತ. ಈತ ತನ್ನ ತಂದೆ ಹೆಸರಿನಲ್ಲಿದ್ದ 3 ಎಕರೆ ಜಮೀನಿನಲ್ಲಿ ಕಬ್ಬು, ಭತ್ತ ಹಾಗೂ ರಾಗಿ ಬೆಳೆದಿದ್ದರು. ವ್ಯವಸಾಯಕ್ಕಾಗಿ ಪತ್ನಿ ಶಶಿಕಲಾ ಹೆಸರಲ್ಲಿ ಒಡವೆಗಳನ್ನು ಅಡವಿಟ್ಟು 80 ಸಾವಿರ, ಬಸವೇಶ್ವರ ಸ್ವಸಹಾಯ ಸಂಘದಲ್ಲಿ 1 ಲಕ್ಷ ರೂ., ಧರ್ಮಸ್ಥಳ ಸಂಘದಲ್ಲಿ 20 ಸಾವಿರ, ಹುಲಿಗೆರೆಪುರ ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ 20 ಸಾವಿರ ಸೇರಿದಂತೆ 4 ಲಕ್ಷ ರೂ. ಕೈಸಾಲ ಮಾಡಿಕೊಂಡಿದ್ದರು. ಆದರೆ ಕಷ್ಟಪಟ್ಟು ಬೆಳೆದ ಫಸಲು ಸಿಗದೇ ನಷ್ಟ ಅನುಭವಿಸಿದ್ದರು. ಆದರೆ ಶುಕ್ರವಾರ ರಾತ್ರಿ ವಿಷಸೇವಿಸಿ ನಾಗರಾಜು ಮಲಗಿದ್ದು, ಶನಿವಾರ ಬೆಳಗ್ಗೆಯೇ ವಾಂತಿ ಮಾಡಿಕೊಂಡಿದ್ದಾರೆ. ಈ ವೇಳೆ ನಾಗರಾಜು ವಿಷ ಸೇವಿಸಿರುವುದು ತಿಳಿದು ಬಂದಿದ್ದು, ತಕ್ಷಣ ಅವರಿಗೆ ಪಟ್ಟಣದ ಗುರುಶಾಂತಪ್ಪ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಮೃತರ ತಾಯಿ ಜಯಮ್ಮ ನೀಡಿದ ದೂರಿನ ಮೇರೆಗೆ ಮದ್ದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರ್‌ಎಸ್‌ಎಸ್ ಕಚೇರಿ ಪರಿಶೀಲಿಸಿದ ಮಾಜಿ ಸಚಿವ ಸಿಎಸ್‌ಪಿ



ಆರ್‌ಎಸ್‌ಎಸ್ ಕಚೇರಿ ಕಾಮಗಾರಿಯನ್ನು ಮಾಜಿ ಸಚಿವ ಪುಟ್ಟರಾಜು ಪರಿಶೀಲಿಸಿದರು.

ಪಾಂಡವಪುರ, ಜ.20– ಪಟ್ಟಣದ ಬೋವಿ ಕಾಲೋನಿಯಲ್ಲಿ ನೂತನವಾಗಿ ನಿರ್ಮಾಣಗೊಳ್ಳುತ್ತಿರುವ ಆರ್‌ಎಸ್‌ಎಸ್(ರಾಷ್ಟ್ರೀಯ ಸ್ವಯಂ ಸೇವಕ ಸಂಘ) ಕಚೇರಿ ಕಟ್ಟಡ ಕಾಮಗಾರಿಯನ್ನು ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಪರಿಶೀಲನೆ ನಡೆಸಿದರು.

ಬಳಿಕ ಮಾತನಾಡಿದ ಅವರು, ಆರ್‌ಎಸ್‌ಎಸ್ ಕಚೇರಿ ನಿರ್ಮಾಣ ಮಾಡಬೇಕೆಂಬ ಆರ್‌ಎಸ್‌ಎಸ್ ಕಾರ್ಯಕರ್ತರು, ಮುಖಂಡರ ಬಹುದಿನದ ಕನಸು ನನಸಾಗುತ್ತಿದೆ. ಪಟ್ಟಣದಲ್ಲಿ ಆರ್‌ಎಸ್‌ಎಸ್ ಕಚೇರಿ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದೆ ಎಂದರು.

ಆರ್‌ಎಸ್‌ಎಸ್ ಕಟ್ಟಡ ನಿರ್ಮಾಣಕ್ಕೆ ಸಾಕಷ್ಟು ಮುಖಂಡರು ಸಹಕಾರ ನೀಡಿದ್ದಾರೆ. ನೇತ್ರ ವೈದ್ಯೆ ಮಣಿಕರ್ಣಿಕಾ ಅವರು ಕಚೇರಿ ನಿರ್ಮಾಣಕ್ಕೆ ನಿವೇಶನ ಖರೀದಿಸಿ ಕೊಟ್ಟು ಸಹಕಾರ ನೀಡಿದ್ದಾರೆ. ಅಲ್ಲದೆ ಬಹಳಷ್ಟು ಮಂದಿ ಸಹಕಾರದಿಂದ ಕಟ್ಟಡ ನಿರ್ಮಾಣವಾಗಿದೆ. ನಾನು ಸಚಿವ ನಾಗಿ ಕೆಲಸ ಮಾಡುವ ಸಂದರ್ಭದಲ್ಲೂ ವೈಯಕ್ತಿಕವಾಗಿ ಕಾಂಕ್ರಿಟ್ ಕೊಡಿಸುವ ಕೆಲಸ ಮಾಡಿದ್ದೆ. ಇದೀಗ ಆರ್‌ಎಸ್‌ಎಸ್ ಕಾರ್ಯಕರ್ತರ ಒತ್ತಾಸೆ ಮೇರೆಗೆ ಮತ್ತಷ್ಟು ಸಹಕಾರ ನೀಡಿ ಕಟ್ಟಡ ನಿರ್ಮಾಣ ಮಾಡಿಸಲಾಗುತ್ತಿದೆ ಎಂದರು. ಜ.22ರಂದು ಅಯೋಧ್ಯೆಯಲ್ಲಿ ರಾಮಮಂದಿರ ಪ್ರಧಾನಿ ಮೋದಿ ಅವರ ಸಹಕಾರದೊಂದಿಗೆ ಲೋಕಾರ್ಪಣೆಗೊಳ್ಳುತ್ತಿದೆ. ಅದೇ ದಿನ ಪಟ್ಟಣದಲ್ಲಿ ಆರ್‌ಎಸ್‌ಎಸ್ ಕಚೇರಿ ಉದ್ಘಾಟನೆಯಾಗುತ್ತಿದ್ದು, ಆರ್‌ಎಸ್‌ಎಸ್ ಕಾರ್ಯಕರ್ತರು, ಮುಖಂಡರು ನಮ್ಮನ್ನು ಸಹ ಆಹ್ವಾನಿಸಿದ್ದು, ದಂಪತಿ ಸಮೇತ ಆಗಮಿಸಿ ಕಚೇರಿ ಉದ್ಘಾಟನೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಾಗುವುದು ಎಂದರು.

ಈ ವೇಳೆ ವೈದ್ಯೆ ಮಣಿಕರ್ಣಿಕ ಸೇರಿದಂತೆ ಆರ್‌ಎಸ್‌ಎಸ್ ಕಾರ್ಯಕರ್ತರು, ಜೆಡಿಎಸ್ ಮುಖಂಡರು ಹಾಜರಿದ್ದರು.

ಜ.26, ಗಣರಾಜ್ಯೋತ್ಸವ

ಮಂಡ್ಯ: ಜಿಲ್ಲಾಡಳಿತದಿಂದ 75ನೇ ಗಣರಾಜ್ಯೋತ್ಸವವನ್ನು ಜ.26 ರಂದು ಬೆಳಗ್ಗೆ 9 ಗಂಟೆಗೆ ಜಿಲ್ಲಾ ಸಶಸ್ತ್ರ ಮೀಸಲು ಕವಾಯತು ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆ 9 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಧ್ವಜಾರೋಹಣ ನೆರವೇರಿಸಿ ಗಣರಾಜ್ಯೋತ್ಸವದ ಸಂದೇಶ ನೀಡುವರು. ಶಾಸಕ ಪಿ. ರವಿಕುಮಾರ್ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಸಂಸದೆ ಸುಮಲತಾ, ಎಂಎಲ್‌ಸಿಗಳಾದ ಮರಿತಿಬ್ಬೇಗೌಡ, ಮಧು, ದಿನೇಶ್ ಗೂಳಿಗೌಡ ಹಾಗೂ ಶಾಸಕರಾದ ಎ.ಬಿ.ರಮೇಶ್ ಬಾಬು, ಪಿ.ಎಂ.ನರೇಂದ್ರಸ್ವಾಮಿ, ದರ್ಶನ್, ಹೆಚ್.ಟಿ.ಮಂಜು, ಕೆ.ಎಂ.ಉದಯ್ ಭಾಗವಹಿಸಲಿದ್ದಾರೆ.

ಕೆಆರ್‌ಎಸ್ 20 ಕಿಮೀ ವ್ಯಾಪ್ತಿಯಲ್ಲಿ ಗಣಿಗಾರಿಕೆ ನಿಷೇಧ

ಮಂಡ್ಯ, ಜ.20– ವಿಶ್ವವಿಖ್ಯಾತ ಕೃಷ್ಣರಾಜಸಾಗರ ಅಣೆಕಟ್ಟೆ ಸುತ್ತಮುತ್ತ 20 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಹೈಕೋರ್ಟ್ ಆದೇಶದಂತೆ ಗಣಿಗಾರಿಕೆ ಹಾಗೂ ಗಣಿಗಾರಿಕೆಗೆ ಸಂಬಂಧಿಸಿದ ಇತರೆ ಚಟುವಟಿಕೆಗಳನ್ನು ತಾತ್ಕಾಲಿಕವಾಗಿ ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ತಿಳಿಸಿದರು.



ಡಾ.ಕುಮಾರ್

ಶನಿವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು, ಅಧಿಕಾರಿಗಳು ಉಚ್ಚ ನ್ಯಾಯಾಲಯ ನೀಡಿರುವ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಕೆಆರ್‌ಎಸ್ 20 ಕಿಮೀ ವ್ಯಾಪ್ತಿಯಲ್ಲಿ ಬರುವ 30 ಕ್ವಾರಿಗಳನ್ನು 2022ನೇ ಸಾಲಿನಲ್ಲಿ ನಿಲುಗಡೆ ಮಾಡಲಾಗಿತ್ತು. ಇದೀಗ ಪರವಾನಗಿ ಹೊಂದಿರುವ ಕ್ವಾರೆ ಹಾಗೂ ಕ್ರಷರ್‌ಗಳಿಗೆ ಪತ್ರ ಬರೆದು ನಿಲುಗಡೆ ಮಾಡಲು ತಿಳಿಸಬೇಕು ಎಂದರು.

ಕೆಆರ್‌ಎಸ್ 20 ಕಿಮೀ ವ್ಯಾಪ್ತಿಯಲ್ಲಿ ಶ್ರೀರಂಗಪಟ್ಟಣ, ಪಾಂಡವಪುರ ಹಾಗೂ ಕೆ.ಆರ್.ಪೇಟೆ ತಾಲೂಕು ಬರಲಿದೆ. ಈ ತಾಲೂಕಿನ ತಹಶೀಲ್ದಾರ್ ಕೆಆರ್‌ಎಸ್ ವ್ಯಾಪ್ತಿಯಲ್ಲಿ ಯಾವುದೇ ಗಣಿಗಾರಿಕೆ ನಡೆಯದಂತೆ ನೋಡಿಕೊಳ್ಳಬೇಕು. ಅನಧಿಕೃತವಾಗಿ ಅಧಿಕಾರಿಗಳ ಗಮನಕ್ಕೆ ಬಾರದಂತೆ ಗಣಿಗಾರಿಕೆ ನಡೆಯಬಹುದು. ಹೆಚ್ಚಿನ ಪರಿಶೀಲನೆ ನಡೆಸಿ ಎಂದರು.

ಸಭೆಯಲ್ಲಿ ಎಸ್ಪಿ ಎನ್.ಯತೀಶ್, ಜಿಪಂ ಸಿಇಓ ಶೇಖ್ ತನ್ವೀರ್ ಆಸಿಫ್, ಭೂ ವಿಜ್ಞಾನಿ ರೇಷ್ಮಾ, ಡಿಎಫ್‌ಓ ರಾಜು ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.



ಕೆ.ಆರ್.ಪೇಟೆ ತಾಲೂಕಿನ ಗಂಜಿಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಚನ್ನೇಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ವೇಳೆ ಗ್ರಾಪಂ ಅಧ್ಯಕ್ಷ ಪರಮೇಶ್, ಮುಖಂಡರಾದ ಶಿವಕುಮಾರ್, ವಕೀಲ ನಾಗೇಶ್, ತಾಪಂ ಮಾಜಿ ಸದಸ್ಯ ಸೋಮಶೇಖರ್, ರಾಜೇಗೌಡ, ಸಂಘದ ಮಾಜಿ ಅಧ್ಯಕ್ಷ ರಾಮಕೃಷ್ಣೇಗೌಡ, ನಾಗೇಶ್, ಲತಾ, ಗೋವಿಂದೇಗೌಡ, ಕಾಳೇಗೌಡ, ಕುಳ್ಳಯ್ಯ, ಕೃಷ್ಣೇಗೌಡ, ರತ್ನಮ್ಮ, ನಾಗರಾಜೇಗೌಡ, ಸಂಘದ ಕಾರ್ಯದರ್ಶಿ ಸಿದ್ದೇಗೌಡ, ಬೋರಯ್ಯ, ಸಣ್ಣೇಗೌಡ, ಪುಟ್ಟಸ್ವಾಮಿಗೌಡ ಇತರರಿದ್ದರು.

ನಾಳೆ ವಿವಿಧೆಡೆ ಶ್ರೀರಾಮನ ಪೂಜೆ

ಮೈಸೂರು, ಜ.20(ಎಸ್‌ಪಿಎನ್)– ಅಯೋಧ್ಯೆಯ ಶ್ರೀರಾಮ ಮಂದಿರದಲ್ಲಿ ಜ.22ರಂದು ರಾಮಲಲ್ಲಾ ಮೂರ್ತಿಯ ಪ್ರಾಣ ಪ್ರತಿಷ್ಠಾಪನಾ ಕಾರ್ಯ ಜರುಗಲಿದ್ದು, ಈ ಹಿನ್ನೆಲೆಯಲ್ಲಿ ಮೈಸೂರಿನ ವಿವಿಧ ದೇವಸ್ಥಾನ, ಶ್ರೀರಾಮ ಮಂದಿರಗಳಲ್ಲಿ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿದೆ.

ಪಾದುಕೆ ದರ್ಶನ: ಶ್ರೀರಾಂಪುರ 2ನೇ ಹಂತದ ಶ್ರೀ ಬಲಮುರಿ ಗಣಪತಿ ದೇವಸ್ಥಾನ ಆವರಣದಲ್ಲಿ ಶ್ರೀರಾಮ ಪಾದುಕೆ, ಫೋಟೋ ಇಟ್ಟು ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನ ಅರ್ಚಕ ಸುದೀಂದ್ರ ಆಚಾರ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭಜನಾ ಕಾರ್ಯಕ್ರಮ: ದೇವರಾಜ ಮೊಹಲ್ಲಾದಲ್ಲಿರುವ ಬಿಡರಾಂ ಕೃಷ್ಣಪ್ಪ ಶ್ರೀರಾಮಮಂದಿರದ ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಜ.22ರಂದು ಆರ್ಟ್ ಆಫ್ ಲಿವಿಂಗ್‌ನ ಕಾರ್ಯಕರ್ತರಿಂದ ಶ್ರೀರಾಮನ ಕುರಿತಾದ ಭಜನೆ, ಭಕ್ತಿ ಗೀತೆಗಳ ಗಾಯನ ಆಯೋಜಿಸಲಾಗಿದೆ ಎಂದು ಇಲ್ಲಿನ ಆಡಳಿತ ಮಂಡಳಿಯ ಸದಸ್ಯ ದಿವಾಕರ್ ತಿಳಿಸಿದ್ದಾರೆ.

ಜ.22ರಂದು ರಾಮಲಲ್ಲಾ ಮೂರ್ತಿ ಪ್ರಾಣಪ್ರತಿಷ್ಠಾಪನಾ ಹಿನ್ನೆಲೆಯಲ್ಲಿ ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದ ಶ್ರೀರಾಮ ಮಂದಿರದಲ್ಲಿ ಶ್ರೀರಾಮ ದೇವರಿಗೆ ವಿಶೇಷ ಪೂಜೆ, ಅಭಿಷೇಕ ಹಮ್ಮಿಕೊಳ್ಳಲಾಗಿದೆ ಎಂದು ಇಲ್ಲಿನ ಅರ್ಚಕರು ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಜಿಎಸ್‌ಡಿಪಿ ಟ್ರಿಲಿಯನ್ ಡಾಲರ್ ತಲುಪಲು ಸಂಪನ್ಮೂಲ ಕೊರತೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮತ

ಬೆಂಗಳೂರು: ರಾಜ್ಯದ ಸ್ವಂತ ತೆರಿಗೆ ಸಂಗ್ರಹ ಉತ್ತಮ ಇದ್ದರೂ, ಹೆಚ್ಚುತ್ತಿರುವ ಆರ್ಥಿಕ ಸವಾಲುಗಳನ್ನು ಎದುರಿಸಲು ಮತ್ತು 2032ರ ವೇಳೆಗೆ ರಾಜ್ಯದ ಒಟ್ಟು ಆಂತರಿಕ ಉತ್ಪಾದನೆ (ಜಿಎಸ್‌ಡಿಪಿ) ಒಂದು ಟ್ರಿಲಿಯನ್ ಡಾಲರ್ ತಲುಪಲು ನಮ್ಮಲ್ಲಿರುವ ಸಂಪನ್ಮೂಲಗಳು ಸಾಕಾಗುತ್ತಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಎಂ.ಎಸ್.ರಾಮಯ್ಯ ಅನ್ವಯಿಕ ವಿಜ್ಞಾನ ವಿಶ್ವವಿದ್ಯಾಲಯದ ವತಿಯಿಂದ ತಾಜ್ ವೆಸ್ಟೆಂಡ್ ಹೋಟೆಲ್‌ನಲ್ಲಿ ಶನಿವಾರ ನಡೆದ 'ಆರ್ಥಿಕ ಸಂಯುಕ್ತ ತತ್ವ 16ನೇ ಹಣಕಾಸು ಆಯೋಗದ ಮುಂದಿರುವ ಸವಾಲುಗಳು' ವಿಷಯ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ರಾಜ್ಯದ ಆರ್ಥಿಕ ಹಾಗೂ ಮಾನವ ಸಂಪನ್ಮೂಲದ ಅಭಿವೃದ್ಧಿಗೆ ಮಾನವ ಮತ್ತು ಭೌತಿಕ ಮೂಲಸೌಲಭ್ಯಗಳ ಮೇಲೆ ಗಮನಾರ್ಹ ಹೂಡಿಕೆಯ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಇಡೀ ದೇಶದಲ್ಲಿ ಅತಿ ಹೆಚ್ಚು ತೆರಿಗೆ ನೀಡುವ ಕರ್ನಾಟಕಕ್ಕೆ ತಾನು ನೀಡುವ ಪಾಲಿಗೆ ತಕ್ಕ ಪ್ರತಿಫಲ ಸಿಗದಿರುವುದು ವಿಪರ್ಯಾಸ. ಆರ್ಥಿಕ ದಕ್ಷತೆಗೆ ಪ್ರೋತ್ಸಾಹ ಹಾಗೂ ವಿತ್ತೀಯ ಕಾರ್ಯಕ್ಷಮತೆಗೆ ಪ್ರಾಧಾನ್ಯ ನೀಡುವಂತೆ 16ನೇ ಹಣಕಾಸು ಆಯೋಗವನ್ನು ಒತ್ತಾಯಿಸಲಾಗುವುದು ಎಂದ ಅವರು, ಅತ್ಯುತ್ತಮ ವಿತ್ತೀಯ ಕಾರ್ಯಕ್ಷಮತೆ ಹೊಂದಿರುವ ರಾಜ್ಯ ಎಂದು ದಾಖಲೆ ಹೊಂದಿರುವ ಕರ್ನಾಟಕಕ್ಕೆ ಅದರ ದಕ್ಷತೆಗಾಗಿ ಯಾವುದೇ ಪ್ರೋತ್ಸಾಹ ಸಿಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.




ಈ ಹಿಂದಿನ ಹಣಕಾಸು ಆಯೋಗದ ಶಿಫಾರಸುಗಳಿಂದ ಕರ್ನಾಟಕ ಭಾರಿ ನಷ್ಟ ಅನುಭವಿಸಬೇಕಾಗಿ ಬಂದಿದೆ. ರಾಜ್ಯ ಸರ್ಕಾರಗಳಿಗೆ ಪ್ರಮುಖ ವೆಚ್ಚ ಹೊಣೆಗಾರಿಕೆಗಳಿವೆ. ಬಹುತೇಕ ಸಂದರ್ಭದಲ್ಲಿ ಅಗತ್ಯ ರಾಜಸ್ವ ಸಂಪನ್ಮೂಲಗಳ ಲಭ್ಯತೆ ಇರುವುದಿಲ್ಲ. ವಿತ್ತೀಯ ಸ್ವಾಯತ್ತತೆ ಉಳಿಸಿಕೊಳ್ಳುತ್ತಲೇ ರಾಜ್ಯಮಟ್ಟದಲ್ಲಿ ವೆಚ್ಚ ಹೊಣೆಗಾರಿಕೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ನಿಟ್ಟಿನಲ್ಲಿ ಸಂಪನ್ಮೂಲ ವರ್ಗಾವಣೆಗೆ ಹಣಕಾಸು ಆಯೋಗಗಳು ಪ್ರಾಮುಖ್ಯ ನೀಡಬೇಕು ಎಂದೂ ಅಭಿಪ್ರಾಯಪಟ್ಟರು.

ರಾಜ್ಯದ ಆರ್ಥಿಕ ಹಾಗೂ ಮಾನವ ಸಂಪನ್ಮೂಲದ ಅಭಿವೃದ್ಧಿಗೆ ಮಾನವ ಮತ್ತು ಭೌತಿಕ ಮೂಲಸೌಲಭ್ಯಗಳ ಮೇಲೆ ಗಮನಾರ್ಹ ಹೂಡಿಕೆಯ ಅಗತ್ಯವಿದೆ. ನಗರೀಕರಣ, ನಗರ ಕೇಂದ್ರಗಳಲ್ಲಿ ಮೂಲ ಸೌಕರ್ಯಗಳನ್ನು ಒದಗಿಸಬೇಕಾಗಿದೆ. ಆದರೆ, ಹೆಚ್ಚುತ್ತಿರುವ ವಲಸೆಯ ಸಮಸ್ಯೆ ನಗರ ಕೇಂದ್ರಗಳಲ್ಲಿ ಒತ್ತಡವನ್ನು ಹೆಚ್ಚಿಸುತ್ತಿದೆ ಎಂದು ಹೇಳಿದರು.

ನಾಳೆ ಮೈಸೂರಿನ ದೇವಾಲಯಗಳಲ್ಲಿ ಶ್ರೀರಾಮನ ಸ್ಮರಣೆ; ವಿಶೇಷ ಪೂಜೆ ಸೇರಿ ವಿವಿಧ ಧಾರ್ಮಿಕ ಕೈಂಕರ್ಯ

ಮೈಸೂರು, ಜ.20(ಪಿಎಂ)–ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ನಿರ್ಮಿಸಲಾಗಿರುವ ಭವ್ಯ ಶ್ರೀರಾಮ ಮಂದಿರದಲ್ಲಿ ಶ್ರೀರಾಮಲಾಲ್ಲ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ಉತ್ಸವ ಜ.22ರಂದು ನಡೆಯಲಿದ್ದು, ದೇಶ ಮಾತ್ರವಲ್ಲದೆ, ಜಗತ್ತಿನಾದ್ಯಂತ ಇರುವ ಹಿಂದೂ ಸಮಾಜದಲ್ಲಿ ಸಂಭ್ರಮ ಕಳೆಗಟ್ಟಿದೆ.

ಅಂತೆಯೇ ಮೈಸೂರಲ್ಲೂ ಸಡಗರ ಮನೆ ಮಾಡಿದೆ. ಅಂದು ಮೈಸೂರಲ್ಲೂ ಶ್ರೀರಾಮಮಂದಿರ, ಆಂಜನೇಯಸ್ವಾಮಿ ದೇವಸ್ಥಾನಗಳಲ್ಲಿ ಮಾತ್ರವಲ್ಲದೆ, ಬಹುತೇಕ ದೇವಾಲಯಗಳಲ್ಲಿ ವಿಶೇಷ ಪೂಜಾ ಕೈಂಕರ್ಯಗಳ ನೆರವೇರಿಸಲಾಗುತ್ತಿದೆ. ಈ ಪೈಕಿ ಕೆಲ ರಾಮಮಂದಿರ, ದೇವಸ್ಥಾನಗಳಲ್ಲಿ ಅಂದು ನಡೆಯುವ ಧಾರ್ಮಿಕ ಆಚರಣೆಗಳ ವಿವರಗಳೊಂದಿಗೆ ಆಯಾಯ ದೇವಾಲಯಗಳ ಸಂಕ್ಷಿಪ್ತ ಹಿನ್ನೆಲೆ ಸಹ ನೀಡಲಾಗಿದೆ.



ಮೈಸೂರಿನ ಶಿವರಾಂಪೇಟೆ ಶ್ರೀ ರಾಮಾಭ್ಯುದಯ ಸಭಾದ ಶ್ರೀರಾಮ ಮಂದಿರ.

ಮೈಸೂರಿನ ಕೃಷ್ಣಮೂರ್ತಿಪುರಂನ ಶ್ರೀರಾಮಮಂದಿರ: ಇಲ್ಲಿಯೂ ಅಂದು ಶ್ರೀ ಮಹಾಜನ ಸಭಾದ ವತಿಯಿಂದ ಬೆಳಗ್ಗೆ 9ಕ್ಕೆ ವೇದ ಬಳಗದವರಿಂದ ಪಾರಾಯಣ ಮತ್ತು ಶ್ರೀರಾಮದೇವರಿಗೆ ಅಭಿಷೇಕ ನಡೆಯಲಿದೆ. ಅಲ್ಲದೆ, ಸಂಜೆ 6ಕ್ಕೆ ದೀಪೋತ್ಸವ ಜರುಗಲಿದೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಶ್ರೀ ಮಹಾಜನ ಸಭಾದ ಕಾರ್ಯದರ್ಶಿ ಮಧುರಾವ್, 1940ರಲ್ಲಿ ರಾಮದಾಸರು ಈ ರಾಮಮಂದಿರ ಸ್ಥಾಪನೆ ಮಾಡಿದರು. ಅಂದು ಗುಡಿಸಲಿನಲ್ಲಿ ಮಂದಿರ ನಡೆಯುತ್ತಿತ್ತು. ಇದೀಗ ಸ್ವಂತ ಕಟ್ಟಡ ಹೊಂದಿದೆ. ಪ್ರತಿ ವರ್ಷ ಯುಗಾದಿ ಹಬ್ಬದ ಸಂದರ್ಭದಲ್ಲಿ ರಾಮೋತ್ಸವ ಆಚರಣೆ ಮಾಡುತ್ತಿದ್ದೇವೆ. ಹಬ್ಬದ ದಿನದಂದು ಶುರುವಾಗುವ ರಾಮೋತ್ಸವವು 15 ದಿನಗಳ ಕಾಲ ನಡೆಯಲಿದೆ ಎಂದು ತಿಳಿಸಿದರು.




ಮೈಸೂರಿನ ಕೃಷ್ಣಮೂರ್ತಿಪುರಂನ ಶ್ರೀರಾಮಮಂದಿರ.

ಪ್ರತಿ ತಿಂಗಳು ಪುನರ್ವಸು ನಕ್ಷತ್ರ (ರಾಮ ಹುಟ್ಟಿದ ನಕ್ಷತ್ರ) ದಿನದಂದು ವಿಶೇಷ ಪೂಜೆ ಆಯೋಜನೆ ಮಾಡಲಾಗುತ್ತದೆ. ಅಲ್ಲದೆ, ಸತ್ಯನಾರಾಯಣ ಪೂಜೆ ಸೇರಿದಂತೆ ವಿವಿಧ ಧಾರ್ಮಿಕ ಆಚರಣೆಗಳನ್ನು ನಮ್ಮ ರಾಮಮಂದಿರದಲ್ಲಿ ನಡೆಸಲಾಗುತ್ತದೆ. ಜ.22ರಂದು ನಮ್ಮ ರಾಮಮಂದಿರದಲ್ಲಿ ವಿವಿಧ ಕಾರ್ಯಕ್ರಮ ಏರ್ಪಡಿಸಿದ್ದು, ಇದರಲ್ಲಿ 400ಕ್ಕೂ ಹೆಚ್ಚು ಭಕ್ತರು ಪಾಲ್ಗೊಳ್ಳುವ ನಿರೀಕ್ಷೆ ಹೊಂದಿದ್ದೇವೆ. ಈಗಾಗಲೇ ಅಯೋಧ್ಯೆ ರಾಮಮಂದಿರದಿಂದ ನೀಡಿದ್ದ ಮಂತ್ರಾಕ್ಷತೆಯನ್ನು ರಾಮ ಮಂದಿರದ ವತಿಯಿಂದ ಭಕ್ತರಿಗೆ ವಿತರಣೆ ಮಾಡಿದ್ದೇವೆ ಎಂದು ವಿವರಿಸಿದರು.

ಶಿವರಾಂಪೇಟೆ ಶ್ರೀ ರಾಮಾಭ್ಯುದಯ ಸಭಾದ ಶ್ರೀರಾಮ ಮಂದಿರ: ಇಲ್ಲಿಯೂ ಅಂದು ಅರ್ಚಕ ಲಕ್ಷ್ಮೀನಾರಾಯಣಶಾಸ್ತ್ರಿ ಹಾಗೂ ಸಭಾದ ಟ್ರಸ್ಟ್ ಅಧ್ಯಕ್ಷ ಡಾ.ಎನ್.ಶ್ರೀರಾಮ್ ನೇತೃತ್ವದಲ್ಲಿ ವಿವಿಧ ಧಾರ್ಮಿಕ ವಿಧಿವಿಧಾನಗಳು ನೆರವೇರಲಿವೆ. ಬೆಳಗ್ಗೆ 7ಕ್ಕೆ ರುದ್ರಾಭಿಷೇಕ, ಶ್ರೀರಾಮ ಸೀತಾ ಹನುಮ ಅಷ್ಟೋತ್ತರ ಹಾಗೂ ರಾಮ ತಾರಕ ಹೋಮ, 11.30ರಿಂದ 12ರವರೆಗೆ ರಾಮ ಭಜನೆ, 12.30ಕ್ಕೆ ಮಹಾ ಮಂಗಳಾರತಿ ನಡೆಯಲಿದ್ದು, ಬಳಿಕ ಸಾರ್ವಜನಿಕರಿಗೆ ಪ್ರಸಾದ ವಿನಿಯೋಗ ಜರುಗಲಿದೆ.

ಸದರಿ ರಾಮ ಮಂದಿರವು 133 ವರ್ಷಗಳ ಸುದೀರ್ಘ ಇತಿಹಾಸ ಹೊಂದಿದೆ. 1890ರಲ್ಲಿ ಸದರಿ ಸಭಾ ಸ್ಥಾಪನೆಗೊಂಡು ಶ್ರೀರಾಮನ ಪೂಜಾ ಕಾರ್ಯಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ. 1960ರಲ್ಲಿ ಸಭೆಯ ವಜ್ರ ಮಹೋತ್ಸವ, 1990ರಲ್ಲಿ ಶತಮಾನೋತ್ಸವವನ್ನು ಸದರಿ ಸಭಾ ವಿಜೃಂಭಣೆಯಿಂದ ಆಚರಿಸಿಕೊಂಡಿದೆ. ಅಲ್ಲದೆ, 1995ರಲ್ಲಿ ಶ್ರೀ ರಾಮ ಸಾಮ್ರಾಜ್ಯ ಪಟ್ಟಾಭಿಷೇಕವನ್ನು ಅತ್ಯಂತ ವಿಜೃಂಭಣೆಯಿಂದ ನಡೆಸಲಾಯಿತು. 2002ರಿಂದ ಪ್ರತಿ ತಿಂಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲಾಗುತ್ತಿದೆ. ಇದಲ್ಲದೆ, ಪ್ರತಿ ತಿಂಗಳು ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಜೊತೆಗೆ ಪ್ರತಿ ತಿಂಗಳ 2ನೇ ಅಥವಾ 3ನೇ ಶನಿವಾರ ಆಯೋಜಿಸುವ ಸಂಗೀತ ಕಾರ್ಯಕ್ರಮದಲ್ಲಿ ಮೈಸೂರಿನ ಉದಯೋನ್ಮುಖ ಕಲಾವಿದರಿಗೆ ವೇದಿಕೆ ಕಲ್ಪಿಸಲಾಗುತ್ತಿದೆ.

ವೀರನಗೆರೆ ಶ್ರೀ ವೀರಗಣಪತಿ ದೇವಸ್ಥಾನ: ವೀರನಗೆರೆಯ ಅಶೋಕ ರಸ್ತೆಯ ಶ್ರೀ ವೀರಗಣಪತಿ ದೇವಸ್ಥಾನದ ಶ್ರೀ ರಾಮಜ್ಯೋತಿ ಸೇವಾ ಸಮಿತಿ ವತಿಯಿಂದ ಅಂದು ಸಂಜೆ 6.30ಕ್ಕೆ ಸದರಿ ದೇವಸ್ಥಾನದಿಂದ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದವರೆಗೆ ಅಶೋಕ ರಸ್ತೆಯಲ್ಲಿ ಸುಮಾರು 2 ಲಕ್ಷ ದೀಪಗಳನ್ನು ಬೆಳಕಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ದೀಪ ಬೆಳಕಿಸಿ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಲಕ್ಷ ದೀಪೋತ್ಸವಕ್ಕೆ ದೀಪ, ಎಣ್ಣೆ ಮತ್ತು ದೀಪದ ಬತ್ತಿಗಳನ್ನು ಕಾಣಿಕೆಯಾಗಿ ನೀಡಬಹುದು. ಯಾವುದೇ ರೀತಿಯಲ್ಲಿ ಹಣ ಪಡೆಯುವುದಿಲ್ಲ ಎಂದು ಸಮಿತಿ ಪ್ರಕಟಣೆ ತಿಳಿಸಿದೆ.



ವೀರನಗೆರೆ ಶ್ರೀ ವೀರಗಣಪತಿ ದೇವಸ್ಥಾನ.

ದೇವಸ್ಥಾನದ ಮಂಟಪಕ್ಕೆ ಸುಮಾರು 400 ವರ್ಷಗಳ ಇತಿಹಾಸವಿದೆ. ಅಂದು ವೀರನಗೆರೆ ಎಂದರೆ ಅರಮನೆಯ ಸಿಪಾಯಿಗಳು ವಾಸ ಮಾಡುತ್ತಿದ್ದ ಊರಾಗಿತ್ತು. ಆಗ ಮೈಸೂರು ಅರಮನೆಯಿಂದ ವೈರಮುಡಿ ಉತ್ಸವ ಹೋಗುತ್ತಿತ್ತು. ಈಗ ದೇವಸ್ಥಾನದ ಮಂಟಪ ಇರುವ ಸ್ಥಳದಲ್ಲಿ ವೈರಮುಡಿ ಇಟ್ಟು ಪೂಜೆ ಮಾಡುತ್ತಿದ್ದರು. ದೇವಸ್ಥಾನದಲ್ಲಿರುವ ಗಣೇಶನ ಮೂರ್ತಿಗೆ ಸುಮಾರು 500 ವರ್ಷಗಳ ಇತಿಹಾಸವಿದೆ. ಈ ಮೂರ್ತಿಯನ್ನು ಹಿಂದೆ ಇಲ್ಲಿನ ಗರಡಿಯೊಂದರಲ್ಲಿ ಇಟ್ಟು ಪೂಜೆ ಮಾಡುತ್ತಿದ್ದರು ಎಂದು ದೇವಸ್ಥಾನದ ಪ್ರಧಾನ ಅರ್ಚಕ ಪ್ರಹಲ್ಲಾದ ರಾವ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

1992ರಲ್ಲಿ ವೀರನಗೆರೆ ಜನತೆಯಿಂದ ದೇವಸ್ಥಾನ ಸ್ಥಾಪನೆಯಾಯಿತು. ಅಂದಿನಿಂದ ಅಪಾರ ಸಂಖ್ಯೆಯ ಭಕ್ತರು ಭೇಟಿ ನೀಡುತ್ತಿದ್ದಾರೆ. ಮೈಸೂರಿನಲ್ಲಿ ನಡೆಯುವ ಪ್ರಸಿದ್ಧ ಗಣಪತಿ ಉತ್ಸವ ಪ್ರಾರಂಭವು ಇದೇ ದೇವಸ್ಥಾನದಿಂದ ಆಗುತ್ತಿದೆ. ಇದೀಗ ಜ.22ರಂದು 2 ಕಿ.ಮೀ.ವರೆಗೆ 2 ಲಕ್ಷ ದೀಪಗಳನ್ನು ಬೆಳಗಿಸಲಾಗುತ್ತಿದೆ ಎಂದು ಅವರು ಹೇಳಿದರು.

ಮೈಸೂರು ಅರಮನೆಯಲ್ಲಿ ವಿಶೇಷ ಪೂಜೆ



ಮೈಸೂರು,ಜ.17(ಪಿಎಂ)– ಅರಮನೆ ಮಂಡಳಿ ಮತ್ತು ಮುಜರಾಯಿ ಇಲಾಖೆ ಜಂಟಿ ಆಶ್ರಯದಲ್ಲಿ ಜ.22ರಂದು ಅಯೋಧ್ಯೆಯಲ್ಲಿ ಪ್ರಾಣ ಪ್ರತಿಷ್ಠಾಪನೆ ನಡೆಯುವ ಸಂದರ್ಭದಲ್ಲಿ ಮೈಸೂರು ಅರಮನೆ ಮುಂಭಾಗದಲ್ಲಿ ಪೂರ್ಣಾಹುತಿ, ಮಹಾಮಂಗಳಾರತಿ, ರಾಮ ತಾರಕ ಹೋಮ ನೆರವೇರಿಸಲಾಗುತ್ತಿದೆ.

ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಹಾಗೂ ಸಮೂಹ ದೇವಸ್ಥಾನಗಳ ಕಾರ್ಯನಿರ್ವಾಹಕ ಅಧಿಕಾರಿ ಸಿ.ಜಿ.ಕೃಷ್ಣ 'ಮೈಸೂರು ಮಿತ್ರ'ನಿಗೆ ಈ ವಿಷಯ ತಿಳಿಸಿದರು. ಮೈಸೂರು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ 'ಮಿತ್ರ'ನೊಂದಿಗೆ ಮಾತನಾಡಿ, ಅರಮನೆ ದೇವಸ್ಥಾನಗಳ ಎಲ್ಲಾ ಮೂರ್ತಿಗಳಿಗೂ ಅಂದು ಅರಮನೆ ಮುಂಭಾಗ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಅಲ್ಲದೆ, ಪ್ರಸಾದ ವಿನಿಯೋಗ ಇರಲಿದ್ದು, ಅಯೋಧ್ಯೆ ಕಾರ್ಯಕ್ರಮದ ನೇರ ಪ್ರಸಾರವನ್ನು ಎಲ್‌ಇಡಿ ಪರದೆಯಲ್ಲಿ ಪ್ರಸಾರ ಮಾಡಲಾಗುವುದು. ಇದರಲ್ಲಿ ಪಾಲ್ಗೊಳ್ಳಲು ಜಯರಾಮ, ಬಲರಾಮ ಮತ್ತು ಅಂಬಾವಿಲಾಸ ದ್ವಾರಗಳಲ್ಲಿ ಸಾರ್ವಜನಿಕರಿಗೆ ಉಚಿತ ಪ್ರವೇಶಾವಕಾಶ ಕಲ್ಪಿಸಲಾಗಿದೆ ಎಂದು ಅವರು ತಿಳಿಸಿದರು.

ಶ್ರೀ ಮಹಾಲಕ್ಷ್ಮಿ ಸ್ವೀಟ್ಸ್ ವಿದ್ಯಾರಣ್ಯಪುರಂ ಶಾಖೆಯಲ್ಲಿ

ಸಿಹಿ ತಿನಿಸಲ್ಲಿ ಅರಳಿದ ಅಯೋಧ್ಯೆ ಶ್ರೀರಾಮಮಂದಿರ



ಮೈಸೂರು,ಜ.20(ಪಿಎಂ)– ಶ್ರೀ ಮಹಾಲಕ್ಷ್ಮಿ ಸ್ವೀಟ್ಸ್ ವತಿಯಿಂದ ಮೈಸೂರಿನ ವಿದ್ಯಾರಣ್ಯಪುರಂ ಶಾಖೆಯ ಮಳಿಗೆಯಲ್ಲಿ ಸುಮಾರು 15ರಿಂದ 20 ಕೆಜಿ ಸಿಹಿ ತಿನಿಸುಗಳಲ್ಲಿ ಅಯೋಧ್ಯೆ ಶ್ರೀರಾಮ ಮಂದಿರದ ಮಾದರಿ ರೂಪಿಸಿ ರಾಮಲಲ್ಲಾ ಮೂರ್ತಿ ಕೆತ್ತಿರುವ ಶಿಲ್ಪಿ ಅರುಣ್ ಯೋಗಿರಾಜ್ ಅವರಿಗೆ ಗೌರವ ಸಮರ್ಪಿಸಲಾಯಿತು.

ಈ ಸಂದರ್ಭದಲ್ಲಿ ಮಹಾಲಕ್ಷ್ಮೀ ಸ್ವೀಟ್ಸ್ ಮಾಲೀಕ ನಿತಿನ್ ಶಿವಕುಮಾರ್ ಮಾತನಾಡಿ, ಪ್ರಪಂಚದಾದ್ಯಂತ ಅಯೋಧ್ಯೆ ರಾಮಮಂದಿರ ನಿರ್ಮಾಣ ವನ್ನು ವಿವಿಧ ರೀತಿಯಲ್ಲಿ ಆಚರಿಸಲಾಗುತ್ತಿದೆ. ನಾವು ಸಿಹಿ ತಿನಿಸುಗಳ ಕ್ಷೇತ್ರದಲ್ಲಿರುವುದರಿಂದ ಸುಮಾರು 15 ಸಿಬ್ಬಂದಿ, 8ರಿಂದ 10 ದಿನಗಳ ಕಾಲ ಅವಿರತ ಪ್ರಯತ್ನದಿಂದ ಸಿಹಿ ತಿನಿಸುಗಳಲ್ಲಿ ಅಯೋಧ್ಯ ರಾಮಮಂದಿರ ಮಾದರಿ ನಿರ್ಮಿಸಿದ್ದೇವೆ ಎಂದರು.

ಆ ಮೂಲಕ ಮೈಸೂರು ಜಿಲ್ಲೆಯವರೇ ಆದ ಶಿಲ್ಪಿ ಅರುಣ್ ಯೋಗಿರಾಜ್ ಅವರಿಗೆ ಮಹಾಲಕ್ಷ್ಮೀ ಸ್ವೀಟ್ಸ್ ಸಂಸ್ಥೆಯ ವತಿಯಿಂದ ಗೌರವ ಸಮರ್ಪಣೆ ಮಾಡಿದ್ದೇವೆ ಎಂದು ಹರ್ಷ ವ್ಯಕ್ತಪಡಿಸಿದರು. ಇದೇ ವೇಳೆ ಶಿಲ್ಪಿ ಅರುಣ್ ಯೋಗಿ ರಾಜ್ ಕುಟುಂಬದವರಿಗೆ ಸನ್ಮಾನಿಸಿ, ಗೌರವ ಸಮರ್ಪಣೆ ಮಾಡಲಾಯಿತು. ಶ್ರೀ ಮಹಾಲಕ್ಷ್ಮಿ ಸ್ವೀಟ್ಸ್‌ನ ಸಹನಾ ಶಿವಕುಮಾರ್ ಮತ್ತು ಸಿಬ್ಬಂದಿ ವರ್ಗ ಹಾಜರಿದ್ದರು.

ಮರಳಿನಲ್ಲಿ ಅರಳಿದ ಅಯೋಧ್ಯೆ ರಾಮಮಂದಿರ ಕಲಾಕೃತಿ



ಮೈಸೂರು ಹೊರವಲಯದ ಪೂರ್ಣ ಚೇತನ ಪಬ್ಲಿಕ್ ವಿದ್ಯಾಸಂಸ್ಥೆ ಆವರಣದಲ್ಲಿ ರಾಮಮಂದಿರದ ಕಲಾಕೃತಿಯನ್ನು ಮರಳಿನಲ್ಲಿ ಬಿಡಿಸಿರುವುದು.

ಮೈಸೂರು,ಜ.20(ಎಸ್‌ಪಿಎನ್)– ಅಯೋಧ್ಯೆ ರಾಮಮಂದಿರದಲ್ಲಿ ರಾಮ ಲಲ್ಲಾ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆಗೆ ಕ್ಷಣಗಣನೆ ಆರಂಭವಾಗಿದ್ದು, ಇತ್ತ ಹಿರಿಯ ಕಲಾವಿದ ಅನಿಲ್ ಭೋಗಶೆಟ್ಟಿ ಮಾರ್ಗದರ್ಶನದಲ್ಲಿ 20ಕ್ಕೂ ವಿದ್ಯಾರ್ಥಿಗಳು ಮೈಸೂರು ಹೊರವಲಯದ ಪೂರ್ಣ ಚೇತನ ಪಬ್ಲಿಕ್ ವಿದ್ಯಾಸಂಸ್ಥೆ ಆವರಣದಲ್ಲಿ ರಾಮಮಂದಿರದ ಕಲಾಕೃತಿಯನ್ನು ಮರಳಿನಲ್ಲಿ ಬಿಡಿಸಿ ತಮ್ಮ ಕೈ ಚಳಕ ತೋರಿದ್ದಾರೆ.

ಈ ಕಲಾಕೃತಿಗೆ ಉತ್ತಮ ಮರಳು ಮತ್ತು ಇದ್ದಲಿನ ಪುಡಿಯನ್ನು ಬಳಸಿ 3 ದಿನಗಳ ಕಾಲ 40 ಅಡಿ ಉದ್ದ ಮತ್ತು 30 ಅಡಿ ಅಗಲದ ವಿಸ್ತೀರ್ಣದಲ್ಲಿ ಶ್ರೀ ರಾಮಮಂದಿರದ ಕಲಾಕೃತಿ ರಚಿಸಿದ್ದಾರೆ. ಅಯೋಧ್ಯೆಯ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಶ್ರೀಮಂತಿಕೆಯಿಂದ ಸ್ಫೂರ್ತಿ ಪಡೆದು, ಶ್ರೀರಾಮ ಮಂದಿರಕ್ಕೆ ಸಂಬಂಧಿಸಿದ ಪರಂಪರೆ ಮತ್ತು ಮೌಲ್ಯಗಳನ್ನು ಪ್ರತಿಬಿಂಬಿಸುವ, ವಿದ್ಯಾರ್ಥಿಗಳ ಮನಸ್ಸಿನಲ್ಲಿ ಭಕ್ತಿ– ಭಾವ ವನ್ನು ಮೂಡಿಸುವ ಪ್ರಯತ್ನ ಇದಾಗಿದೆ.

ಅಲ್ಲದೆ, ಯುವ ಪ್ರತಿಭೆಗಳಿಗೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳ ಉತ್ಸಾಹ ಮತ್ತು ಕಲಾತ್ಮಕ ಅಭಿವ್ಯಕ್ತಿಯನ್ನು ಪೋಷಿಸುವುದು ಆಡಳಿತ ಮಂಡಳಿ ಉದ್ದೇಶ. ಈ ಕಲಾಕೃತಿ ಜ.24ರವರೆಗೆ ಪ್ರದರ್ಶನಗೊಳ್ಳಲಿದೆ. ಆಸಕ್ತ ಕಲಾಪ್ರಿಯರು ಶಾಲಾ ಆವರಣಕ್ಕೆ ಭೇಟಿ ನೀಡಿ, ವೀಕ್ಷಿಸಬಹುದು ಎಂದು ಶಾಲಾ ಆಡಳಿತ ಮಂಡಳಿ ದರ್ಶನ ರಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಸ್ಸಾಂನಲ್ಲಿ ಭಾರತ್ ಜೋಡೋ ನ್ಯಾಯ್ ಯಾತ್ರೆ ಮೇಲಿನ ದಾಳಿ ಖಂಡಿಸಿದ ಕಾಂಗ್ರೆಸ್

ನವದೆಹಲಿ: ಅಸ್ಸಾಂನಲ್ಲಿ ಭಾರತ್ ಜೋಡೋ ನ್ಯಾಯ್ ಯಾತ್ರೆಯ ಮೇಲೆ ಬಿಜೆಪಿ ಗೂಂಡಾಗಳು ನಡೆಸಿದ ದಾಳಿಯನ್ನು ಖಂಡಿಸುವುದಾಗಿ ಕಾಂಗ್ರೆಸ್ ಶನಿವಾರ ಹೇಳಿದೆ ಮತ್ತು ರಾಜ್ಯದಲ್ಲಿ ಆಡಳಿತ ಪಕ್ಷ, ಭಾರತ ಸಂವಿಧಾನ ಜನರಿಗೆ ನೀಡಿರುವ ಪ್ರತಿಯೊಂದು ಹಕ್ಕು ಮತ್ತು ನ್ಯಾಯವನ್ನು "ತುಳಿಯಲು" ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದೆ.



ನಮ್ಮ ಕಾರ್ಯಕರ್ತರು ಮತ್ತು ಮುಖಂಡರನ್ನು ಬೆದರಿಸುವ ಇಂತಹ ತಂತ್ರಗಳಿಗೆ ಪಕ್ಷ ಹೆದರುವುದಿಲ್ಲ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ. ಅಸ್ಸಾಂನ ಲಖಿಂಪುರದಲ್ಲಿ ಬಿಜೆಪಿ ಗೂಂಡಾಗಳು ಭಾರತ್ ಜೋಡೋ ನ್ಯಾಯ್ ಯಾತ್ರೆಯ ವಾಹನಗಳ ಮೇಲೆ ದಾಳಿ ನಡೆಸಿರುವುದು ನಾಚಿಕೆಗೇಡಿನ ಸಂಗತಿ. ಕಾಂಗ್ರೆಸ್ ಪಕ್ಷದ ಬ್ಯಾನರ್ ಮತ್ತು ಪೋಸ್ಟರ್‌ಗಳನ್ನು ಹರಿದು ಹಾಕಿರುವುದನ್ನು ನಾವು ಬಲವಾಗಿ ಖಂಡಿಸುತ್ತೇವೆ ಎಂದು ಖರ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕಳೆದ 10 ವರ್ಷಗಳಲ್ಲಿ, ಬಿಜೆಪಿಯು ಭಾರತದ ಜನರಿಗೆ ಸಂವಿಧಾನ ಖಾತರಿಪಡಿಸಿದ ಪ್ರತಿಯೊಂದು ಹಕ್ಕು ಮತ್ತು ನ್ಯಾಯವನ್ನು ತುಳಿಯಲು ಮತ್ತು ನಾಶ ಮಾಡಲು ಪ್ರಯತ್ನಿಸಿದೆ. ಈ ಮೂಲಕ ಪ್ರಜಾಪ್ರಭುತ್ವವನ್ನು ಹೈಜಾಕ್ ಮಾಡಲು ಯತ್ನಿಸುತ್ತಿದೆ ಎಂದು ಅವರು ಹೇಳಿದ್ದಾರೆ.


ಕಾರುಗಳ ನಡುವೆ ಡಿಕ್ಕಿ: ಮೂವರಿಗೆ ಗಾಯ



ಮೈಸೂರು, ಜ.20 – ಎರಡು ಕಾರುಗಳ ನಡುವೆ ಡಿಕ್ಕಿ ಸಂಭವಿಸಿ ಮೂವರು ಗಾಯಗೊಂಡಿರುವ ಘಟನೆ ಶನಿವಾರ ತಡರಾತ್ರಿ ನಗರದ ಜೆಎಲ್‌ಬಿ ರಸ್ತೆ ಹಾಗೂ ರಾಮವಿಲಾಸ ರಸ್ತೆ ಜಂಕ್ಷನ್(ಮುಡಾ ಎದುರು) ಬಳಿ ನಡೆದಿದೆ.

ರಾತ್ರಿ 12.30ರ ಸುಮಾರಿಗೆ ಮಹೇಂದ್ರ ಎಕ್ಸ್‌ಯುವಿ(ಕೆಎ.09.ಎಂಬಿ–3700) ಹಾಗೂ ವೋಕ್ಸ್‌ವ್ಯಾಗನ್ ಪೋಲೋ (ಕೆಎ.01.ಎಂಜಿ–8540) ನಡುವೆ ಡಿಕ್ಕಿ ಸಂಭವಿದೆ. ಪರಿಣಾಮ ಮಹೇಂದ್ರ ಎಕ್ಸ್‌ಯುವಿ ಕಾರಿನಲ್ಲಿದ್ದ ಒಬ್ಬರು, ಪೋಲೋ ಕಾರಿನಲ್ಲಿದ್ದ ಇಬ್ಬರು ಸೇರಿ ಮೂವರೂ ಗಾಯಗೊಂಡಿದ್ದು, ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎನ್ನಲಾಗಿದೆ. ಡಿಕ್ಕಿ ಹೊಡೆದ ರಭಸಕ್ಕೆ ಮಹೇಂದ್ರ ಎಕ್ಸ್‌ಯುವಿ ಕಾರು ಪಲ್ಟಿಯಾದರೆ, ಪೋಲೋ ಕಾರು ಜಖಂಗೊಂಡಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ದೇವರಾಜ ಸಂಚಾರ ಠಾಣೆ ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ಯಾವುದೇ ದೂರು ದಾಖಲಾಗಿಲ್ಲ ಎಂದು ತಿಳಿದು ಬಂದಿದೆ.

ನಾರಾಯಣ್ ನಿಧನ



ಮೈಸೂರು, ಜ.20–ಮೈಸೂರು ಕಾಶಿಪತಿ ಅಗ್ರಹಾರದ ನಿವಾಸಿ, ಡಿ.ಬನುಮಯ್ಯ ಕಾಲೇಜಿನ ನಿವೃತ್ತ ಅಧೀಕ್ಷಕ ನಾರಾಯಣ್(99) ಶನಿವಾರ ನಿಧನರಾದರು.

ಮೃತರಿಗೆ ಐವರು ಪುತ್ರರು, ಮೊಮ್ಮಕ್ಕಳು, ಅಪಾರ ಬಂಧು–ಬಳಗ, ಶಿಷ್ಯವೃಂದವನ್ನು ಅಗಲಿದ್ದಾರೆ. ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಹರಿಶ್ಚಂದ್ರ ಘಾಟ್‌ನಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಕಾದಂಬರಿ ಮೂಲಕ ಅನುಭವ ಅಳಿಸಿ ಹೋಗದಂತೆ ದಾಖಲಿಸುವ ಪ್ರಯತ್ನವೂ ಕನ್ನಡದಲ್ಲಿ ಆಗುತ್ತಿದೆ

ಲೇಖಕಿ ಡಾ.ಚಂದ್ರಮತಿ ಸೋಂದಾ ಅವರ 'ದುಪಡಿ ಕಾದಂಬರಿ' ಬಿಡುಗಡೆಗೊಳಿಸಿ ವಿಮರ್ಶಕ ಪ್ರೊ.ನಾಗಭೂಷಣಸ್ವಾಮಿ ಅಭಿಮತ

ಮೈಸೂರು,ಜ.20(ಪಿಎಂ)–ಕಾಲ ಕಳೆದಂತೆ ನಮ್ಮ ಅನುಭವ ಮತ್ತು ಅವುಗಳ ಕುರುಹುಗಳು ನಿರ್ದಾಕ್ಷಿಣ್ಯವಾಗಿ ಅಳಿಸಿ ಹೋಗುತ್ತವೆ. ಅದನ್ನು ತಪ್ಪಿಸಿ, ಮುಂದಕ್ಕೆ ದಾಟಿಸುವ ಪ್ರಯತ್ನ ಕನ್ನಡದಲ್ಲಿ ಕಾದಂಬರಿ ಮೂಲಕವೂ ಆಗುತ್ತಿದೆ ಎಂದು ವಿಮರ್ಶಕ ಪ್ರೊ.ಓ.ಎಲ್.ನಾಗ ಭೂಷಣಸ್ವಾಮಿ ಹೇಳಿದರು.



ಮೈಸೂರಿನ ವಿಜಯನಗರದಲ್ಲಿರುವ ಲೇಖಕಿ ಡಾ.ಚಂದ್ರಮತಿ ಸೋಂದಾ ಅವರ ಸಹೋದರನ ನಿವಾಸದಲ್ಲಿ ಶನಿವಾರ 'ದುಪಡಿ ಕಾದಂಬರಿ'ಯನ್ನು ವಿಮರ್ಶಕ ಪ್ರೊ.ಓ.ಎಲ್.ನಾಗಭೂಷಣಸ್ವಾಮಿ (ಎಡದಿಂದ 3ನೇಯವರು) ಬಿಡುಗಡೆ ಮಾಡಿದರು. ಆಶಯ ಡಿಸೈನ್ ಸಲ್ಯೂಷನ್ಸ್ ಸಂಸ್ಥಾಪಕ ಡಾ.ಮಹೇಶ್‌ರಾವ್, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ (ಕೆಬಿಜಿ), ವಿಶ್ರಾಂತ ಕುಲಪತಿ ಪ್ರೊ.ಸಬಿಹಾ ಭೂಮಿಗೌಡ, ನಿವೃತ್ತ ಪ್ರಾಧ್ಯಾಪಕಿ ಪ್ರೊ.ಪ್ರೀತಿ ಶುಭಚಂದ್ರ, ಕೃತಿ ಕರ್ತೃ ಡಾ.ಚಂದ್ರಮತಿ ಸೋಂದಾ ಹಾಗೂ ಇವರ ಪತಿ ಡಾ.ರಾಮಕೃಷ್ಣ ಜೋಷಿ ಚಿತ್ರದಲ್ಲಿದ್ದಾರೆ.

ಮೈಸೂರಿನ ವಿಜಯನಗರ ಮೊದಲನೇ ಹಂತದ 14ನೇ ಮುಖ್ಯರಸ್ತೆಯಲ್ಲಿರುವ ಆಶಯ ಡಿಸೈನ್ ಸಲ್ಯೂಷನ್ಸ್ ಸಂಸ್ಥಾಪಕ ಡಾ.ಮಹೇಶ್‌ರಾವ್ ಅವರ ನಿವಾಸದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಲೇಖಕಿ ಡಾ.ಚಂದ್ರಮತಿ ಸೋಂದಾ ಅವರ 'ದುಪಡಿ (ಕೌದಿ) ಕಾದಂಬರಿ' ಬಿಡುಗಡೆಗೊಳಿಸಿ ಮಾತನಾಡಿದ ಅವರು, ನಮ್ಮ ತಲೆಮಾರಿನವರು ತಾವು ಕಂಡ ಬದುಕು, ಅದರ ಕ್ರಮ, ರೀತಿ–ನೀತಿಗಳನ್ನು ಮುಂದಕ್ಕೆ ದಾಟಿಸುವ ಪ್ರಯತ್ನ ಇಂತಹ ಕಾದಂಬರಿಗಳ ಮೂಲಕ ನಡೆಯುತ್ತಿದ್ದಾರೆ ಎಂದು ತಿಳಿಸಿದರು.

ಬಹಳ ದಿನಗಳ ಹಿಂದೆ 'ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ' ನಾಟಕ ಬಂದಿತ್ತು. ಇದು ಹವ್ಯಕರು ಆಡುವ ಭಾಷೆಯಲ್ಲಿ ಕನ್ನಡದಲ್ಲಿ ಬಂದ ಮೊಟ್ಟ ಮೊದಲ ಸ್ವತಂತ್ರ ಸಾಮಾಜಿಕ ನಾಟಕ. ಅದೇ ರೀತಿ ಹವ್ಯಕ ಭಾಷೆ ಬಳಸಿಕೊಂಡು ಬರೆದ ಮೊದಲ ಕಾದಂಬರಿ ಇದಾಗಿರಬಹುದು. ಒಂದು ರೀತಿಯಲ್ಲಿ 'ದುಪಡಿ' ಆತ್ಮಕಥೆ ಎನ್ನಿಸುತ್ತದೆ. ನಾವು ಬರೆಯುವ ಎಲ್ಲವೂ ನಮ್ಮ ಆತ್ಮಕಥೆಯ ಭಾಗವೇ ಆಗಿರುತ್ತದೆ ಎಂದು ಹೇಳಿದರು.

ಹುಟ್ಟುತ್ತಾ ನಾವೆಲ್ಲಾ ಮಕ್ಕಳೇ. ಆದರೆ ಸುತ್ತಲ ಸಮಾಜ ಗಂಡು ಮತ್ತು ಹೆಣ್ಣು ಎಂಬ ಒತ್ತಡ ಹಾಕುತ್ತದೆ. ಇಂತಹ ಒತ್ತಾಯಕ್ಕೆ ಸಿಕ್ಕಿಕೊಂಡು ಗಂಡು ಮತ್ತು ಹೆಣ್ಣು ಇಬ್ಬರೂ ನರಳುತ್ತಾರೆ. ಈ ಪುಸ್ತಕ ಓದುತ್ತಿದ್ದಾಗ, ಇದು ಒಂದು ಸಮುದಾಯದ ಹೆಣ್ಣಿನ ಆತ್ಮಕಥೆ ಎನ್ನಿಸಿತು. ಜೊತೆಗೆ ಒಂದು ಪ್ರದೇಶದ ಕಥೆ ಇಲ್ಲಿದ್ದು, ಸ್ವಲ್ಪ ಮಟ್ಟಿಗೆ ಇಡೀ ನಮ್ಮ ನಾಡಿನ ಹಾಗೂ ದೇಶದ ಕಥೆಯೂ ಇಲ್ಲಿದೆ. ಈ ಕಾದಂಬರಿಯಲ್ಲಿ ಬಳಕೆಯಾಗಿರುವ ಶೈಲಿಗೆ ಉತ್ತಮ ಉದಾಹರಣೆ ಎಂದರೆ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಆಗಿದೆ ಎಂದು ತಿಳಿಸಿದರು.

'ಮಲೆಗಳಲ್ಲಿ ಮದುಮಗಳು' ಕುರಿತಂತೆ 'ನಾನು ಬರೆದಿರುವುದು ಮಲೆನಾಡಿನ ಬದುಕಿನ ಒಂದು ಹನಿ ಮಾತ್ರ' ಎಂದು ಕುವೆಂಪು ಹೇಳುತ್ತಾರೆ. ಅಂತೆಯೇ ಇದೂ ಶಿವಮೊಗ್ಗ ಸೊರಬ ಪ್ರದೇಶದಲ್ಲಿದ್ದ ಹವ್ಯಕ ಕುಟುಂಬದ ಹೆಣ್ಣು ಮನಸ್ಸು ರೂಪುಗೊಂಡ ಬಗೆ ಹಾಗೂ ಆ ಮನಸ್ಸು ಲೋಕವನ್ನು ನೋಡಿದ ರೀತಿಯ ಒಂದು ಹನಿ ಎನ್ನಬಹುದು.

> ಇನ್ನು ಮುಂದೆ ಬಹುಶಃ ಕನ್ನಡ ಓದುವವರು ಕಡಿಮೆಯಾಗುತ್ತಾರೆ. ಸುಶಿಕ್ಷಿತರ ಮನೆಯಲ್ಲಂತೂ ಕನ್ನಡ ಓದುವವರು ಇನ್ನೊಂದು 10 ವರ್ಷಕ್ಕೆ ಇರುವುದಿಲ್ಲವೇನೋ. ಆ ಮೂಲಕ ಭಾಷೆಯ ಜೊತೆಗೆ 2 ಸಾವಿರ ವರ್ಷಗಳು ಕಾಪಾಡಿದ ನೆನಪುಗಳು ಇಲ್ಲವಾಗುವುದೇನೋ. **–ಪ್ರೊ.ನಾಗಭೂಷಣ ಸ್ವಾಮಿ**

ಇದರೊಳಗೆ ಸ್ವಾತಂತ್ರ್ಯ ಸಂಗ್ರಾಮ, ಅಕ್ಕಪಕ್ಕದ ಕುಟುಂಬದವರು, ಮನೆಯೊಳಗಿನ ಕುಟುಂಬದ ಸದಸ್ಯರು ಎಲ್ಲಾ ಸೇರಿಕೊಂಡು ದಟ್ಟವಾದ ಕಥೆಯಾಗಿ ಮೂಡಿಬಂದಿದೆ ಎಂದು ವಿವರಿಸಿದರು.

ಇತ್ತೀಚೆಗೆ ಕನ್ನಡದಲ್ಲಿ ಮಹಿಳೆಯರೇ ಹೆಚ್ಚು ಬರೆಯುತ್ತಿದ್ದು, ಜೊತೆಗೆ ಅರ್ಥಪೂರ್ಣವಾಗಿಯೂ ಬರೆಯುತ್ತಿದ್ದಾರೆ. ನಮ್ಮಂತಹವರಿಗೆ ಬರವಣಿಗೆಯಲ್ಲಿ ಕೇವಲ ಕಥೆ ಹೇಳುವ ಉದ್ದೇಶ ಮಾತ್ರ ಇರುವುದಿಲ್ಲ. ತಾವು ಕಂಡ ಬದುಕಿನ ಒಂದು ರೀತಿಯನ್ನು ದಾಖಲೆ ಮಾಡಬೇಕೆಂಬ ಬಯಕೆ ಇರುತ್ತದೆ. ಹೀಗೆ ದಾಖಲು ಮಾಡದಿದ್ದರೆ ಅದು ಇಲ್ಲವಾಗುತ್ತದೆ. 'ಸರಸ್ವತಿಪುರಂ ಮೊದಲ ಮೇನ್‌ನಲ್ಲಿ ಒಂದು ಬೇಕರಿ ಇತ್ತು. ಆ ಬೇಕರಿ ಮುಂದೆ ಡಿ.ಎಲ್. ನರಸಿಂಹಚಾರ್ಯರು, ಪುತೀನ ಅವರು ಮಾತನಾಡುತ್ತಾ ಬಸ್‌ಗಾಗಿ ಕಾಯುತ್ತಿದ್ದರು. ಆ ಜಾಗಕ್ಕೆ ಹೋದರೆ ಅದೆಲ್ಲಾ ನೆನಪಾಗುತ್ತಿತ್ತು. ಆಮೇಲೆ ಆ ರಸ್ತೆ ಅಗಲೀಕರಣಗೊಂಡಿದ್ದು, ಬಳಿಕ ಆ ನೆನಪುಗಳೇ ಇಲ್ಲವಾಯಿತು' ಎಂದು ನನ್ನ ಗೆಳೆಯನೊಬ್ಬ ಹೇಳುತ್ತಿದ್ದ. ಕಾಲ ಹೋಗುತ್ತಾ ನಮಗೆ ಆದ ಅನುಭವಗಳು ಹಾಗೂ ಅದರ ಕುರುಹುಗಳು ನಿರ್ದಾಕ್ಷಿಣ್ಯವಾಗಿ ಅಳಿಸಿ ಹೋಗುತ್ತವೆ ಎಂದು ಬೇಸರ ವ್ಯಕ್ತಪಡಿಸಿದರು.

ಬೆಂಗಳೂರು ಮಹಾರಾಣಿ ಕಾಲೇಜಿನಲ್ಲಿ ನಾನು ಕೆಲಸ ಮಾಡುತ್ತಿದ್ದ ಕಾಲದಲ್ಲಿ ಕಾಲೇಜಿನ ಎರಡು ಬದಿಯಲ್ಲಿ ಎರಡೂ ಕೈಗಳಲ್ಲಿ ಅಪ್ಪಿಕೊಳ್ಳಲಾಗದಷ್ಟು ದಪ್ಪ ಮರಗಳಿದ್ದವು. ಇದು ಬಹಳ ಹಿಂದೆಯೇನಲ್ಲ. 2000ನೇ ಇಸವಿಯ ಸಂದರ್ಭವಷ್ಟೇ. ಆದರೆ ಈಗ ಒಂದು ಮರವೂ ಇಲ್ಲ. ಚಿತ್ರದುರ್ಗ–ಹಿರಿಯೂರು ಮಧ್ಯೆ 10 ಸಾವಿರ ಹುಣಸೆಮರಗಳಿದ್ದವು. ಈಗ ಒಂದೂ ಹುಣಸೆಮರ ಇಲ್ಲ. ಈ ಹಿಂದೆ ರಾತ್ರಿ ವೇಳೆ ಬಸ್‌ನಲ್ಲಿ ಪ್ರಯಾಣಿಸುವಾಗ, ಇದು ಇಂತಹದ್ದೇ ಊರು ಎಂದು ಗುರುತು ಹಿಡಿಯಲು ಆಗುತ್ತಿತ್ತು. ಆದರೆ ಈಗ ಹೈವೇ, ಸೂಪರ್ ಹೈವೇಗಳಾಗಿ ನಾವು ಎಲ್ಲಿದ್ದೇವೆ ಎಂಬುದೇ ಗೊತ್ತಾಗುವುದಿಲ್ಲ. ನಮ್ಮ ಮೊಮ್ಮಕ್ಕಳಿಗೆ ಮೊಬೈಲ್ ಬಿಟ್ಟರೆ ಬೇರೆ ಲೋಕವೇ ಇಲ್ಲ. ಊಟ ಮಾಡಲೂ ಮೊಬೈಲ್ ಬೇಕು. ನಾವು ಅತ್ಯಂತ ಸೆಲ್ಫಿ ಆಗುತ್ತಿದ್ದೇವಾ ಅಥವಾ ಸೆಲ್ಫಿಸ್ ಆಗುತ್ತಿದ್ದೇವಾ ಎಂದ ವಿಷಾದಿಸಿದರು.

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಸಬಿಹಾ ಭೂಮಿಗೌಡ ಅಧ್ಯಕ್ಷತೆ ವಹಿಸಿದ್ದರು. ಪುಸ್ತಕ ಕುರಿತು ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕಿ ಪ್ರೊ.ಪ್ರೀತಿ ಶುಭಚಂದ್ರ ಮಾತನಾಡಿದರು. ಕೃತಿ ಕರ್ತೃ ಡಾ.ಚಂದ್ರಮತಿ ಸೋಂದಾ ವೇದಿಕೆಯಲ್ಲಿದ್ದರು. 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ (ಕೆಬಿಜಿ), ಆಶಯ ಡಿಸೈನ್ ಸಲ್ಯೂಷನ್ಸ್ ಸಂಸ್ಥಾಪಕ ಡಾ.ಮಹೇಶ್‌ರಾವ್ (ಕೃತಿ ಕರ್ತೃಗಳ ಸಹೋದರ), ಇವರ ಪತ್ನಿ ವಿಜಯಾ ರಾವ್, ಡಾ.ಚಂದ್ರಮತಿ ಸೋಂದಾ ಅವರ ಪತಿ ಡಾ.ರಾಮಕೃಷ್ಣ ಜೋಷಿ ಮತ್ತಿತರರು ಹಾಜರಿದ್ದರು. ಅಲಕಾ ಕಟ್ಟೆಮನೆ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ಶೂನ್ಯ ಬಡ್ಡಿ ದರದಲ್ಲಿ 19.97 ಲಕ್ಷ ರೈತರಿಗೆ 15841.48 ಕೋಟಿ ಸಾಲ

ಕೆಪಿಸಿಸಿ ಮಾಧ್ಯಮ ಘಟಕದ ಉಪಾಧ್ಯಕ್ಷ ದಿನೇಶ್ ಗೂಳಿಗೌಡ

ಬೆಂಗಳೂರು: ಬರಗಾಲದಿಂದ ಸಂಕಷ್ಟದಲ್ಲಿರುವ ರೈತ ಸಮುದಾಯಕ್ಕೆ ಶೂನ್ಯ ಬಡ್ಡಿ ದರದಲ್ಲಿ 15,841.48 ಕೋಟಿ ರೂ. ಸಾಲ ನೀಡುವ ಮೂಲಕ ನಮ್ಮ ಸರ್ಕಾರ ಆಸರೆಯಾಗಿ ನಿಂತಿದೆ. ನಮ್ಮ ಕಾಂಗ್ರೆಸ್ ರೈತಸ್ನೇಹಿ ಸರ್ಕಾರವಾಗಿದೆ ಎಂದು ಶಾಸಕ, ಕೆಪಿಸಿಸಿ ಮಾಧ್ಯಮ ಘಟಕದ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ಹೇಳಿದ್ದಾರೆ.



ಈ ಕುರಿತು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಕಳೆದ ಬಾರಿಗಿಂತ 775.49 ಕೋಟಿ ಹೆಚ್ಚುವರಿ ಸಾಲ ವಿತರಣೆ ಮಾಡುವ ಮೂಲಕ ಸಂಕಷ್ಟ ಕಾಲದಲ್ಲಿ ಅನ್ನದಾತನ ನೆರವಿಗೆ ಸರ್ಕಾರ ಧಾವಿಸಿದ್ದು ಶ್ಲಾಘನೀಯ ಎಂದು ಬಣ್ಣಿಸಿದ್ದಾರೆ.

ಕಾಂಗ್ರೆಸ್ ಎಂದರೆ ನುಡಿದಂತೆ ನಡೆಯುವ ಪಕ್ಷವಾಗಿದೆ. ರಾಜ್ಯದಲ್ಲಿ ಈಗ ಐದೂ ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡುವ ಮೂಲಕ ಬೆಲೆ ಏರಿಕೆ ಈ ಸಂದರ್ಭದಲ್ಲಿ ಜನಸಾಮಾನ್ಯರ ನೆರವಿಗೆ ಧಾವಿಸಿದೆ. ಅಲ್ಲದೆ, ಜನರ ಪ್ರತಿ ಸಮಸ್ಯೆಗಳನ್ನು ಪರಿಹರಿಸುವಲ್ಲಿಯೂ ನಮ್ಮ ಸರ್ಕಾರ ಮುಂದಿದೆ ಎಂದು ವಿವರಿಸಿದ್ದಾರೆ.

ರೈತರ ಸಂಕಷ್ಟಗಳಿಗೆ ನೆರವಾಗುವತ್ತ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈವರೆಗೆ 19,97,607 ರೈತರಿಗೆ 15841.48 ಕೋಟಿ ರೂ. ಕೃಷಿ ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ವಿತರಣೆ ಮಾಡಿದ್ದು, ಅಗತ್ಯವಿದ್ದಲ್ಲಿ ರೈತರ ಕೈ ಹಿಡಿಯಲಾಗಿದೆ ಎಂದಿದ್ದಾರೆ.

21 ಡಿಸಿಸಿ ಬ್ಯಾಂಕ್ ಹಾಗೂ 6040 ಪ್ಯಾಕ್ಸ್ (ಕೃಷಿ ಪತ್ತಿನ ಸಹಕಾರ ಸಂಘಗಳು) ರೈತರಿಗೆ 24 600 ಕೋಟಿ ರೂ. ಬೆಳೆ ಸಾಲ ನೀಡುವ ಗುರಿ ಹಾಕಿಕೊಳ್ಳಲಾಗಿತ್ತು. ಇದರಲ್ಲಿ ಈಗ 19,97,607 ರೈತರಿಗೆ 15841.48 ಕೋಟಿ ಸಾಲವನ್ನು ನೀಡಲಾಗಿದೆ. ಈ ಗುರಿಯನ್ನೂ ಶೀಘ್ರ ತಲುಪುವ ನಿಟ್ಟಿನಲ್ಲಿ ಹೆಜ್ಜೆ ಹಾಕಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಅಲ್ಪಾವಧಿ ಕೃಷಿ ಸಾಲದ ಅಡಿ 19,63,962.7 ರೈತರಿಗೆ 15,031.72 ಕೋಟಿ ರೂ. ಸಾಲ ವಿತರಿಸಲಾಗಿದೆ. ಮಧ್ಯಮಾವಧಿ ಕೃಷಿ ಸಾಲದಡಿ 15,771 ರೈತರಿಗೆ 536.35 ಕೋಟಿ ರೂ. ಸಾಲ ನೀಡಲಾಗಿದೆ. ಇನ್ನು ದೀರ್ಘಾವಧಿ ಕೃಷಿ ಸಾಲದಡಿ 17,873 ರೈತರಿಗೆ 273.41 ಕೋಟಿ ರೂ. ಸಾಲ ನೀಡುವ ಮೂಲಕ ಒಟ್ಟಾರೆಯಾಗಿ 19,97,607 ರೈತರಿಗೆ 15,841.48 ಕೋಟಿ ರೂ. ಸಾಲವನ್ನು ನೀಡಿದಂತಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ನಮ್ಮದು ರೈತಪರ–ಜನಪರ ಸರ್ಕಾರ: ರಾಜ್ಯದಲ್ಲಿ ಎಂದೂ ಕಂಡರಿಯದ ಭೀಕರ ಬರಗಾಲ ಬಂದಿದ್ದು, 48 ಸಾವಿರ ಹೆಕ್ಟೇರ್ ಪ್ರದೇಶ ಬರಗಾಲಕ್ಕೆ ತುತ್ತಾಗಿವೆ. ಈ ಎಲ್ಲ ರೈತರಿಗೆ ಶೀಘ್ರದಲ್ಲೇ ಬರ ಪರಿಹಾರ ನೀಡುವ ಕೆಲಸವನ್ನು ನಮ್ಮ ರಾಜ್ಯ ಸರ್ಕಾರ ಮಾಡಲಿದೆ. ಈ ಹಿಂದೆ ಕೇಂದ್ರದಲ್ಲಿ ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರದ ಅವಧಿಯಲ್ಲಿ ರೈತರ 72 ಸಾವಿರ ಕೋಟಿ ರೈತರ ಸಾಲಮನ್ನಾ ಮಾಡಲಾಗಿತ್ತು. ರೈತರ ಸಂಕಷ್ಟಕ್ಕೆ ಸದಾ ಸ್ಪಂದಿಸುವುದು ಕಾಂಗ್ರೆಸ್ ಸರ್ಕಾರ. ಅದು ಕೇಂದ್ರದಲ್ಲಾಗಿರಲಿ ಅಥವಾ ರಾಜ್ಯದಲ್ಲಾಗಿರಲಿ ಜನಪರ ಸರ್ಕಾರ ನಮ್ಮದಾಗಿದೆ ಎಂದು ಹೇಳಿದ್ದಾರೆ.

ಹೆಚ್ಚುವರಿ 776.48 ಕೋಟಿ ಸಾಲ ವಿತರಣೆ: ಕಾಂಗ್ರೆಸ್ ಸರ್ಕಾರ ಜನಪರ ಆಡಳಿತ ನೀಡಲಾಗುತ್ತಿದೆ. ಜನಪರ ಕಾಳಜಿಯಿಂದ ಇಂದು ಅನೇಕ ಯೋಜನೆಗಳನ್ನು ಜಾರಿಗೆ ತರಲಾಗುತ್ತಿದೆ. ಇನ್ನು ರೈತರಿಗೆ ನೀಡುವ ಸಾಲ ವಿತರಣೆಯನ್ನು ನೋಡುವುದಾದರೆ ಈವರೆಗೆ ಕಳೆದ ಬಾರಿಗಿಂತ ಹೆಚ್ಚಿನ ಸಾಧನೆ ಮಾಡಲಾಗಿದೆ. ಕಳೆದ ಬಾರಿ ಈವರೆಗೆ ಒಟ್ಟು 15,065.99 ಕೋಟಿ ಸಾಲವನ್ನು ನೀಡಲಾಗಿತ್ತು. ಈ ವರ್ಷ 15,841.48 ಕೋಟಿ ಸಾಲ ವಿತರಿಸಲಾಗಿದೆ. ಅಂದರೆ ಹೆಚ್ಚುವರಿಯಾಗಿ 776.48 ಕೋಟಿ ಸಾಲ ವಿತರಿಸಿದಂತಾಗಿದೆ ಎಂದು ತಿಳಿಸಿದ್ದಾರೆ. ರೈತರಿಗೆ ಶೂನ್ಯ ಬಡ್ಡಿದರದಲ್ಲಿ ಸಾಲ ಕೊಡುವಲ್ಲಿ ಅಪಾರ ಕಾಳಜಿ ಹೊಂದಿರುವ ಸಿಎಂ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರ ಜತೆಗೆ ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಶಾಸಕ ದಿನೇಶ್ ಗೂಳಿಗೌಡ ಹೇಳಿದ್ದಾರೆ.

ಪ್ರಾಣಪ್ರತಿಷ್ಠೆ ಮುನ್ನ ರಾಮಲಲ್ಲಾ ಮೂರ್ತಿ ಫೋಟೋ ಸೋರಿಕೆ: ಕ್ರಮಕ್ಕೆ ದೇವಸ್ಥಾನ ಟ್ರಸ್ಟ್ ಚಿಂತನೆ

ಅಯೋಧ್ಯೆ: ಉತ್ತರಪ್ರದೇಶದ ಅಯೋಧ್ಯೆಯಲ್ಲಿ ಜನವರಿ 22ರಂದು ನಡೆಯಲಿರುವ ರಾಮಮಂದಿರ ಉದ್ಘಾಟನೆ ಸಮಾರಂಭಕ್ಕೆ ಮುನ್ನ ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಲಾಗುತ್ತಿರುವ ರಾಮಲಲ್ಲಾ ವಿಗ್ರಹದ ಫೋಟೋಗಳು ಸೋರಿಕೆಯಾಗಿ ಎಲ್ಲೆಡೆ ವೈರಲ್ ಆಗಿದ್ದು, ಶ್ರೀ ರಾಮತೀರ್ಥ ಕ್ಷೇತ್ರ ಟ್ರಸ್ಟ್‌ನ ಸದಸ್ಯರನ್ನು ಕಂಗೆಡಿಸಿದೆ.

ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಅವರು ಕೆತ್ತಿದ ನಿಂತಿರುವ ಭಂಗಿಯಲ್ಲಿರುವ ರಾಮ ದೇವರ ಬಾಲ ವಿಗ್ರಹದ ಮೊದಲ ಚಿತ್ರ ನಿನ್ನೆ ಮಾಧ್ಯಮಗಳಲ್ಲಿ ಮತ್ತು ಸೋಷಿಯಲ್ ಮೀಡಿಯಾದಲ್ಲಿ ಸಾಕಷ್ಟು ವೈರಲ್ ಆಗಿದೆ. ಇಂದು ದೇಶಾದ್ಯಂತ ಮಾಧ್ಯಮಗಳಲ್ಲಿ ಸಹ ಪ್ರಸಾರವಾಗಿದೆ.

'ಶ್ಯಾಮಲ್' (ಕಪ್ಪು ಬಣ್ಣದ ಮೂರ್ತಿ) ವಿಗ್ರಹದ ಕಣ್ಣುಗಳನ್ನು ಬಟ್ಟೆಯಿಂದ ಮುಚ್ಚಲ್ಪಟ್ಟಿತ್ತು.. ಮೂರ್ತಿಯ ಫೋಟೋಗಳನ್ನು ಯಾರು ಕ್ಲಿಕ್ಕಿಸಿದರು, ಅದು ಹೇಗೆ ಸೋರಿಕೆಯಾಯಿತು ಎಂಬ ಬಗ್ಗೆ ಸ್ಪಷ್ಟ ಮಾಹಿತಿಯನ್ನು ದೇವಾಲಯದ ಟ್ರಸ್ಟ್ ಆಗಲಿ ಇತರ ಸಂಬಂಧಪಟ್ಟ ಅಧಿಕಾರಿಗಳು ಬಿಟ್ಟುಕೊಡುತ್ತಿಲ್ಲ. ದೇವಾಲಯದಲ್ಲಿ ಪ್ರಾಣಪ್ರತಿಷ್ಠೆಯ ನಂತರವಷ್ಟೇ ಮೂರ್ತಿಯ ಅದರಲ್ಲೂ ಮೂರ್ತಿಯ ಕಣ್ಣುಗಳ ಚಿತ್ರವನ್ನು ಹೊರಗೆ ಬಿಡುಗಡೆ ಮಾಡಬಹುದು ಎಂಬ ನಿಯಮವಿದೆ. ಈ ಮಧ್ಯೆ, ಚಿತ್ರಗಳನ್ನು ಸೋರಿಕೆ ಮಾಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಗಂಭೀರವಾಗಿ ಚಿಂತನೆ ನಡೆಸುತ್ತಿದೆ.

ಉನ್ನತ ಹುದ್ದೆ ಗಿಟ್ಟಿಸಿಕೊಂಡು ತಂದೆ–ತಾಯಿ ಕನಸು ನನಸಾಗಿಸಿ

ಮೈಸೂರು ನಗರಪಾಲಿಕೆ ಸಿಬ್ಬಂದಿಯ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉಪ ಆಯುಕ್ತ ಸೋಮಶೇಖರ್ ಕಿವಿಮಾತು

ಮೈಸೂರು,ಜ.20(ಎಸ್‌ಪಿಎನ್)– ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಸದಾ ಓದಿನ ಕಡೆ ಗಮನಹರಿಸಬೇಕು ಎಂದು ಪಾಲಿಕೆ ಉಪಆಯುಕ್ತ (ಆಡಳಿತ) ಸೋಮಶೇಖರ್ ಅಭಿಪ್ರಾಯಪಟ್ಟರು.



ಮೈಸೂರು ಪಾಲಿಕೆ ನೌಕರರ ಸಹಕಾರ ಸಂಘದ ವತಿಯಿಂದ ಪಾಲಿಕೆ ನೌಕರರ ಮಕ್ಕಳು ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಉನ್ನತ ಶಿಕ್ಷಣದಲ್ಲಿ ಅತೀ ಹೆಚ್ಚು ಅಂಕಗಳಿಸಿದ 33 ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಹಾಗೂ ನಗದು ಬಹುಮಾನವನ್ನು ಪಾಲಿಕೆ ಉಪ ಆಯುಕ್ತ (ಆಡಳಿತ) ಜಿ.ಎಸ್.ಸೋಮಶೇಖರ್ ವಿತರಿಸಿದರು.

ಮೈಸೂರು ನಗರಪಾಲಿಕೆ ಹಳೆ ಕೌನ್ಸಿಲ್ ಸಭಾಂಗಣದಲ್ಲಿ ಪಾಲಿಕೆ ನೌಕರರ ಸಹಕಾರ ಸಂಘದ ವತಿಯಿಂದ ಪಾಲಿಕೆ ನೌಕರರ ಮಕ್ಕಳು ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಉನ್ನತ ಶಿಕ್ಷಣದಲ್ಲಿ ಅತೀ ಹೆಚ್ಚು ಅಂಕಗಳಿಸಿದ 33 ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಹಾಗೂ ನಗದು ಬಹುಮಾನ ವಿತರಿಸಿ ಮಾತನಾಡಿದರು.

ಸ್ಪರ್ಧಾತ್ಮಕ ಶಿಕ್ಷಣ ವ್ಯವಸ್ಥೆಯಲ್ಲಿ ಬಹಳಷ್ಟು ಪ್ರತಿಭೆಗಳು ಹೊರಹೊಮ್ಮುತ್ತಿವೆ. ಓದಿನೊಂದಿಗೆ ಉನ್ನತ ಹುದ್ದೆ ಗಳಿಸಿ, ತಂದೆ–ತಾಯಿಗಳ ಕನಸು ನನಸು ಮಾಡುವ ಹೊಣೆ ವಿದ್ಯಾರ್ಥಿಗಳದ್ದು ಎಂದರಲ್ಲದೆ, ಇತ್ತೀಚಿನ ದಿನಗಳಲ್ಲಿ ಸಮಾಜ ಸಂಘಟನೆಗಳು ಪ್ರತಿಭಾನ್ವಿತರನ್ನು ಪುರಸ್ಕರಿಸುವ ಹಾಗೂ ಅವರ ಬೆಂಬಲಕ್ಕೆ ನಿಲ್ಲುವ ಕೆಲಸ ಮಾಡುತ್ತಿರುವುದು ಮೆಚ್ಚುಗೆಯ ಸಂಗತಿ. ಅಲ್ಲದೆ, ಪ್ರತಿಭಾವಂತ ಮಕ್ಕಳು ಆರ್ಥಿಕ ಸಮಸ್ಯೆಯಿಂದ, ತಮ್ಮ ಶೈಕ್ಷಣಿಕ ಗುರಿಯಿಂದ, ಅವಕಾಶಗಳಿಂದ ವಂಚಿತರಾಗಬಾರದು ಎಂದು ಸಲಹೆ ನೀಡಿದರು.

ಪ್ರತಿಭಾವಂತ ವಿದ್ಯಾರ್ಥಿಗಳು ಯಾವುದೇ ಉನ್ನತ ಶಿಕ್ಷಣ ಪಡೆಯಲು ಹಿಂಜರಿಯಬೇಡಿ. ನಿಮಗೆ ಸದೃಢ ಸಮಾಜದ ಹಾಗೂ ನಮ್ಮೆಲ್ಲರ ಸಹಕಾರ, ಬೆಂಬಲ ಇದೆ. ಅಲ್ಲದೆ, ದಿ. ಡಾ.ಎಂ.ಡಿ.ನಾಯ್ಕರ ಮಾರ್ಗದರ್ಶನದಲ್ಲಿ ಆರಂಭವಾದ ಪಾಲಿಕೆ ನೌಕರರ ಸಂಘ ಸದೃಢವಾಗಿ ಬೆಳೆಯುತ್ತಿದ್ದು ಉತ್ತಮವಾದ ಕೆಲಸ ಮಾಡುತ್ತಿದೆ ಎಂದು ಶ್ಲಾಘಿಸಿದರು.

33 ವಿದ್ಯಾರ್ಥಿಗಳಿಗೆ ಸನ್ಮಾನ: ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ಆರ್.ಎನ್.ಪ್ರಾರ್ಥನಾ (ಶೇ.91.52) ಅವರಿಗೆ ಪ್ರಮಾಣ ಪತ್ರ, 8,500 ನಗದು ಬಹುಮಾನ ನೀಡಿ ಗೌರವಿಸಲಾಯಿತು. ಜಿ.ಪ್ರೇಮಕುಮಾರ್ (ಶೇ.89.76) ಅವರಿಗೆ ಪ್ರಮಾಣ ಪತ್ರ ಹಾಗೂ 4,500 ನಗದು ಬಹುಮಾನ, ಅನಿಸ್ ಎಸ್. ಕುಮಾರ್ (ಶೇ.88.67), ಆರ್.ಖುಷಿ (ಶೇ.85), ಪಿ.ಲಾವಣ್ಯ (ಶೇ.80), ಡಿ.ದೇವೇಂದ್ರ (ಶೇ.77.28), ಎಸ್.ಯದುನಂದನ್ (ಶೇ.77.12), ಎಂ.ಜೆ.ತರುಣ್ ರಾಜ್ (ಶೇ.73.83), ಎಂ.ಜೆ.ಭುವನ್ (ಶೇ.73.28), ಆರ್.ಪ್ರೇರಿತ್ (ಶೇ.72.6), ಕೆ.ಅರ್ಪಿತ (ಶೇ.69.6), ಎಂ.ಆರ್. ತ್ರಿಪಾದ (ಶೇ.68.33), ಬಿ.ಸತೀಶ (ಶೇ.67.04), ವಿ.ಹರ್ಷ(ಶೇ.65.76), ಎಂ.ಎಸ್. ಹರ್ಷಿತ್ (ಶೇ.60.50) ಅವರಿಗೆ ಪ್ರಮಾಣ ಪತ್ರ ಹಾಗೂ ಪ್ರತಿ ವಿದ್ಯಾರ್ಥಿಗೆ ತಲಾ 4,500 ರೂ. ನಗದು ಬಹುಮಾನ ನೀಡಿ ಗೌರವಿಸಲಾಗಿದೆ.

ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಎಸ್.ಎಲ್.ತನುಶ್ರೀ(ಶೇ.96.33) ಪ್ರಮಾಣ ಪತ್ರ ಹಾಗೂ 9 ಸಾವಿರ ನಗದು, ಎಂ.ಶಿವಂತ್ (ಶೇ.92.5), ಎಸ್.ರಮ್ಯಶ್ರೀ (ಶೇ.92), ಎಂ.ಸಾಗರ್ (ಶೇ.91.83), ಬಿ.ಹಿತಾಶ್ರೀ(ಶೇ.90.5) ಅವರಿಗೆ ಪ್ರಮಾಣ ಪತ್ರ ಹಾಗೂ ತಲಾ 9 ಸಾವಿರ ರೂ. ನಗದು ಬಹುಮಾನ ನೀಡಿ, ವಿಶೇಷ ಪುರಸ್ಕಾರ ನೀಡಲಾಗಿದೆ. ಅಂತೆಯೇ ಎಂ.ಆರ್.ಪಂಚಮ್ (ಶೇ.85.5), ಎಸ್. ಯದುತಿಲಕ್(ಶೇ.85.5), ಎಸ್.ಚಂದನ ಕುಮಾರ್(ಶೇ.76.5), ಆರ್.ನೇತ್ರ (ಶೇ.71), ಜಿ.ನಾಗುಶ್ರೀ (ಶೇ.60.5), ಬಿ.ಭೂಮಿಕಾ (ಶೇ.69) ಪಿಯುಸಿಯಲ್ಲಿ ಉತ್ತಮ ಅಂಕ ಗಳಿಸಿದ್ದು, ತಲಾ 5 ಸಾವಿರ ರೂ. ನಗದು, ಪ್ರಮಾಣ ಪತ್ರ ನೀಡಿ ಗೌರವಿಸಲಾಗಿದೆ.

ತಾಂತ್ರಿಕ ಶಿಕ್ಷಣದಲ್ಲಿ ಕೆ.ಗುರುಮೂರ್ತಿ ಐಟಿಐನಲ್ಲಿ ಶೇ.62ರಷ್ಟು ಅಂಕ ಗಳಿಸಿದ್ದು, ಇವರಿಗೆ 5 ಸಾವಿರ ನಗದು, ಪ್ರಮಾಣ ಪತ್ರ ನೀಡಲಾಗಿದೆ. ಜಿ.ಕೃತಿಕ್ ಬಿ.ಕಾಂನಲ್ಲಿ ಶೇ.67.82, ಪಿ.ಪ್ರಜ್ವಲ್ ಬಿ.ಕಾಂನಲ್ಲಿ ಶೇ.67.08 ಅಂಕ 'ಗಳಿಸಿದ್ದಾರೆ. ಇವರಿಗೆ ಪ್ರಮಾಣ ಪತ್ರ ಹಾಗೂ ತಲಾ 5 ಸಾವಿರ ನಗದು ಬಹುಮಾನ ನೀಡಿ, ಗೌರವಿಸಲಾಗಿದೆ. ಆರ್.ದರ್ಶನ್ ಎಂಬಿಎನಲ್ಲಿ ಉತ್ತಮ ಅಂಕ ಗಳಿಸಿದ್ದು, ಇವರಿಗೆ ಪ್ರಮಾಣ ಪತ್ರ ಹಾಗೂ 7 ಸಾವಿರ ರೂ. ನಗದು, ಬಿ.ಸುಸ್ಮಿತಾ, ವಿ.ರಾಹುಲ್, ಸಂಜನಾ ಎಸ್.ಶೆಟ್ಟಿ, ಆರ್.ವಿದ್ಯಾ ಬಿಇನಲ್ಲಿ ಉತ್ತಮ ಅಂಕ ಗಳಿಸಿದ್ದು, ಇವರಿಗೆ ಪ್ರಮಾಣ ಪತ್ರ ಹಾಗೂ ತಲಾ 8,500 ನಗದು ಬಹುಮಾನ ನೀಡಿ ಗೌರವಿಸಲಾಗಿದೆ.

ಈ ವೇಳೆ ಪಾಲಿಕೆ ಉಪ ಆಯುಕ್ತ (ಅಭಿವೃದ್ಧಿ)ರಾದ ಸಿಂಧೂ, ಎಂಸಿಸಿ ನೌಕರರ ಸಹಕಾರ ಸಂಘದ ಅಧ್ಯಕ್ಷ ಜವರೇಗೌಡ, ನಿರ್ದೇಶಕ ಬಿ.ಭಾಸ್ಕರ್, ಎಂ.ಬಸವಣ್ಣ, ವೆಂಕಟರಾಜು, ಡಿ.ಸುರೇಂದ್ರ ಕುಮಾರ್ ಇತರರು ಉಪಸ್ಥಿತರಿದ್ದರು.

ಬಿ.ಶೆಟ್ಟಿಗೇರಿ–ಕೂಟಿಯಾಲ ರಸ್ತೆ ಉದ್ಘಾಟನೆ



ಗೋಣಿಕೊಪ್ಪ, ಜ.20– 1.20 ಕೋಟಿ ರೂ. ಅನುದಾನದಲ್ಲಿ ಅಭಿವೃದ್ಧಿಪಡಿಸಿರುವ 2.5 ಕಿಮೀ ಬಿ.ಶೆಟ್ಟಿಗೇರಿ–ಕೂಟಿಯಾಲ ರಸ್ತೆಯನ್ನು ಶಾಸಕ ಎ.ಎಸ್. ಪೊನ್ನಣ್ಣ ಶನಿವಾರ ಲೋಕಾರ್ಪಣೆಗೊಳಿಸಿದರು.

ಬಿ.ಶೆಟ್ಟಿಗೇರಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಕೊಲ್ಲೀರ ಯು. ಬೋಪಣ್ಣ, ವಲಯ ಕಾಂಗ್ರೆಸ್ ಅಧ್ಯಕ್ಷ ತೀತಿಮಾಡ ಸದಾ, ಪ್ರಮುಖರಾದ ಉಮೇಶ್ ಕೇಚಮಯ್ಯ, ಕುಸುಮ ಜೋಯಪ್ಪ, ಚಂದುರ ರೋಹಿತ್, ಚೇರಂಡ ಜಗನ್, ರೋಶನ್, ಚೇಂದೀರ ರಾಯ್, ಅಪ್ಪಂಡೇರಂಡ ವಿಶ್ವನಾಥ್, ಕಡೇಮಾಡ ರಿಜು, ಕಳೇಂಗಡ ತುರುಣ್ ಇದ್ದರು.

ಕೊಡವ ಲ್ಯಾಂಡ್ ಹೋರಾಟಕ್ಕೆ ಗೌಡ ಸಮಾಜ, ಒಕ್ಕಲಿಗ ಸಂಘಟನೆಗಳ ಮುಖಂಡರ ವಿರೋಧ

ಒಂದು ಸಮುದಾಯದ ಹಿತಾಸಕ್ತಿಯನ್ನು ಪ್ರಶ್ನಿಸುವುದು ಪ್ರಜಾಪ್ರಭುತ್ವಕ್ಕೆ ಮಾರಕ

ಮಡಿಕೇರಿ, ಜ.20–ಇತ್ತೀಚೆಗೆ ಬೆಂಗಳೂರಿನ ಕೊಡಗು ಗೌಡ ಸಮಾಜದಲ್ಲಿ ಸಭೆ ಸೇರಿದ್ದ ಗೌಡ ಸಮಾಜ ಮತ್ತು ಒಕ್ಕಲಿಗ ಸಂಘಟನೆಗಳ ಮುಖಂಡರು, ಕೊಡವರ 'ಕೊಡವ ಲ್ಯಾಂಡ್' ಹೋರಾಟಕ್ಕೆ ವಿರೋಧ ವ್ಯಕ್ತಪಡಿಸಿದ್ದರು. ಗೌಡ ಸಮಾಜದ ಈ ಸಭೆಯ ತೀರ್ಮಾನವನ್ನು ಅಖಿಲ ಕೊಡವ ಸಮಾಜ ಕೇಂದ್ರ ಸಮಿತಿ ಖಂಡಿಸಿದೆ.

ಗೌಡ ಸಮಾಜ: ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಗೌಡ ಸಮಾಜ ಮತ್ತು ಒಕ್ಕಲಿಗ ಸಂಘಟನೆಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಸಭೆಯಲ್ಲಿ ಕೊಡವರ ಕೊಡವ ಲ್ಯಾಂಡ್ ಬೇಡಿಕೆ, ಈ ಸಂಬಂಧ ರಾಜ್ಯಸಭಾ ಸದಸ್ಯ ಡಾ. ಸುಬ್ರಹ್ಮಣ್ಯಸ್ವಾಮಿ ಅವರು ಹೈಕೋರ್ಟ್‌ನಲ್ಲಿ ಹೂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಕೊಡವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎಂಬ ಬೇಡಿಕೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಲಾಗಿತ್ತು.

ಕೊಡಗಿನಲ್ಲಿ ಶೇ.80 ರಿಂದ 90ರಷ್ಟು ಜನರು ಗೌಡರು, ಒಕ್ಕಲಿಗರು, ಹಿಂದುಳಿದ ವರ್ಗದವರು ಹಾಗೂ ಇತರ ಜನಾಂಗದವರು ವಾಸಿಸುತ್ತಿದ್ದಾರೆ. ಹೀಗಿರುವಾಗ ಕೊಡವರಿಗೆ ಪ್ರತ್ಯೇಕ ರಾಜ್ಯ ಅಥವಾ ಸ್ವಾಯತ್ತತೆ ನೀಡುವುದು ಎಷ್ಟು ಸಮಂಜಸ ಎಂದು ಮುಖಂಡರು ಚರ್ಚಿಸಿದರು. ಕೊನೆಗೆ ಸರ್ಕಾರವು ಇಂತಹ ಬೇಡಿಕೆಗಳಿಗೆ ಮಣಿದರೆ ಕೊಡಗಿನಲ್ಲಿ ಜನಾಂಗೀಯ ಸಂಘರ್ಷ ಉದ್ಭವಿಸಬಹುದು ಎಂದು ಸಭೆಯಲ್ಲಿ ಆತಂಕ ವ್ಯಕ್ತಪಡಿಸಲಾಯಿತು. ರಾಜ್ಯ ಹಿತಾಸಕ್ತಿ ದೃಷ್ಟಿಯಿಂದ ರಾಷ್ಟ್ರದ ಐಕ್ಯತೆಗಾಗಿ ಸಂವಿಧಾನದ ಮೂಲ ತತ್ವಗಳಿಗೆ ಧಕ್ಕೆಯಾಗದ ರೀತಿ ನಮ್ಮೆಲ್ಲರ ಅಸ್ತಿತ್ವಕ್ಕಾಗಿ ರಾಜಕೀಯ, ಸಾಮಾಜಿಕ ಮತ್ತು ಕಾನೂನಾತ್ಮಕವಾಗಿ ಹೋರಾಡಬೇಕೆಂದು ಸಭೆ ನಿರ್ಧರಿಸಿತು.

ಈ ಸಭೆಯಲ್ಲಿ ರಾಜ್ಯ ಒಕ್ಕಲಿಗರ ಜನಜಾಗೃತಿ ವೇದಿಕೆ ಅಧ್ಯಕ್ಷ ಕೆ.ಎನ್.ಲಿಂಗೇಗೌಡ, ಒಕ್ಕಲಿಗರ ಸಂಘ ಹಾಗೂ ಕಾರ್ಮಿಕ ಹೋರಾಟ ಸಮಿತಿಯ ಅಧ್ಯಕ್ಷ ಗೋವಿಂದೇಗೌಡ, ಒಕ್ಕಲಿಗರ ಕ್ರಿಯಾ ಸಮಿತಿ ಅಧ್ಯಕ್ಷ ಕುಮಾರ್, ರಾಜ್ಯ ಒಕ್ಕಲಿಗರ ಮಹಾಸಭಾ ಅಧ್ಯಕ್ಷ ದೇವರಾಜ್, ಒಕ್ಕಲಿಗರ ಸಂಘ ಉಲ್ಲಾಳದ ಅಧ್ಯಕ್ಷ ಬೆಟ್ಟಸ್ವಾಮಿ, ಒಕ್ಕಲಿಗರ ಡೈರೆಕ್ಟ್ ಸಂಸ್ಥೆಯ ಅಧ್ಯಕ್ಷ ಕೆ.ಟಿ. ಚಂದ್ರು, ಆದಿವಾಸಿ ಜನಾಂಗ ಹಿತರಕ್ಷಣಾ ಸಮಿತಿ ಅಧ್ಯಕ್ಷ ಗುರುಶಾಂತ್, ಬೆಂಗಳೂರು ಕೊಡಗು ಗೌಡ ಸಮಾಜದ ಅಧ್ಯಕ್ಷ ಕೇಕಡ ನಾಣಯ್ಯ, ಬೆಂಗಳೂರಿನ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜದ ಅಧ್ಯಕ್ಷ ಪಾಣತ್ತಲೆ ಪಳಂಗಪ್ಪ, ದಾಸರಹಳ್ಳಿ ಕೊಡಗು ಗೌಡ ಸಮಾಜದ ಅಧ್ಯಕ್ಷ ಕತ್ರಿಕೊಲ್ಲಿ ದೇವಯ್ಯ, ಯಲಹಂಕದ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜದ ಅಧ್ಯಕ್ಷ ಅಜಿತ್ ಕುಮಾರ್ ಕುನ್ಯಾಳಿ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕೊಡವ ಸಮಾಜದ ಕೇಂದ್ರ ಸಮಿತಿ ಆಕ್ಷೇಪ

ಅಖಿಲ ಕೊಡವ ಸಮಾಜದ ಕೇಂದ್ರ ಸಮಿತಿ: ಗೌಡ ಸಮಾಜ ಹಾಗೂ ಒಕ್ಕಲಿಗರ ಸಂಘಟನೆಗಳ ಸಭೆ ಸಂಬಂಧ ಶುಕ್ರವಾರ ವಿರಾಜಪೇಟೆಯಲ್ಲಿ ಅಖಿಲ ಕೊಡವ ಸಮಾಜದ ಕೇಂದ್ರ ಸಮಿತಿ ಸಭೆ ನಡೆಯಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಪರದಂಡ ಸುಬ್ರಮಣಿ ಕಾವೇರಿಯಪ್ಪ ಮಾತನಾಡಿ, 'ಕೊಡವ ಲ್ಯಾಂಡ್' ಸಂಬಂಧ ಕಾನೂನಾತ್ಮಕ ಮತ್ತು ಸಂವಿಧಾನಬದ್ಧ ಹೋರಾಟ ಹೈಕೋರ್ಟ್ ಅಂಗಳದಲ್ಲಿರುವುದರಿಂದ ಅದರ ಬಗ್ಗೆ ಹೆಚ್ಚು ಚರ್ಚೆ ಬೇಡ ಎಂದರಲ್ಲದೆ, ಕೊಡಗು ಅರೆಭಾಷೆ ಗೌಡ ಸಮಾಜದ ಕೆಲವರು ಕೊಡಗಿನಲ್ಲಿ ಇತರ ಸಮುದಾಯಗಳ ನಡುವೆ ಕಂದಕ ಸೃಷ್ಟಿಸುವ ಕೆಲಸದಲ್ಲಿ ತೊಡಗಿರುವುದು ವಿಷಾದಕರ ಎಂದರು.

ಸಂವಿಧಾನದ ಪರಿಮಿತಿಯಲ್ಲಿ ಒಂದು ಸಮುದಾಯದವರು ಸಲ್ಲಿಸುವ ಸಂವಿಧಾನಾತ್ಮಕವಾದ ಬೇಡಿಕೆಯನ್ನು ಮತ್ತೊಂದು ಸಮುದಾಯ ವಿರೋಧಿಸುವುದು ಪ್ರಜಾಪ್ರಭುತ್ವಕ್ಕೆ ಮಾರಕ ಎಂದರು. ಕೊಡಗು ಅರೆಭಾಷೆ ಗೌಡ ಸಮಾಜಗಳ ಪದಾಧಿಕಾರಿಗಳು, ಒಕ್ಕಲಿಗರ ಸಂಘ ಮತ್ತು ಕೊಡವ ಭಾಷಿಕ ಜನಾಂಗದ ಕೆಲವು ಮುಗ್ಧರಿಗೆ ಈ ವಿಚಾರದಲ್ಲಿ ತಪ್ಪು ಮಾಹಿತಿ ನೀಡಿ ಪ್ರಚಾರಕ್ಕೆ ಎಳೆತರುತ್ತಿರುವುದು ಹಾಸ್ಯಾಸ್ಪದ ಎಂದ ಅವರು, ಕೊಡಗು 'ಸಿ' ರಾಜ್ಯವಾದ ಸಂದರ್ಭದಲ್ಲಿ ಕೊಡಗಿನಲ್ಲಿ ಯಾವುದೇ ಜನಾಂಗಗಳ ನಡುವೆ ಕಂದಕವಿರಲಿಲ್ಲ. ಆಗ 'ವಸುದೈವ ಕುಟುಂಬಕಂ' ಎಂಬ ವೇದ ವಾಕ್ಯ ಜನಜನಿತವಾಗಿತ್ತು ಎಂದರು.

ಉತ್ತರ ಕರ್ನಾಟಕದ ಪ್ರತ್ಯೇಕತೆಯ ಕೂಗಿಗೆ ಪ್ರತಿಕ್ರಿಯೆ ನೀಡಲು ಅಶಕ್ತರಾಗಿರುವವರು ಇತರರ ಕಾನೂನಾತ್ಮಕ ಹೋರಾಟಗಳ ಬಗ್ಗೆ ಮೂಗು ತೂರಿಸುವುದು, ಇತಿಹಾಸವನ್ನು ತಿರುಚುವುದು, ತಪ್ಪು ಮಾಹಿತಿ ನೀಡಿ ಮುಗ್ಧರನ್ನು ಪ್ರಚೋದಿಸುವುದು ಸಭ್ಯತೆಯ ಲಕ್ಷಣವಲ್ಲ ಎಂದು ಪರದಂಡ ಸುಬ್ರಮಣಿ ಕಾವೇರಿಯಪ್ಪ ಹೇಳಿದರು.

ಸಭೆಯಲ್ಲಿ ಸಮಿತಿಯ ಉಪಾಧ್ಯಕ್ಷ ಅಜ್ಜಿಕುಟ್ಟೀರ ಸುಬ್ರಮಣಿ ಮಾದಯ್ಯ, ಕಾರ್ಯದರ್ಶಿ ಕೀತಿಯಂಡ ವಿಜಯಕುಮಾರ್, ಜಂಟಿ ಕಾರ್ಯದರ್ಶಿ ನಂದೇಟಿರ ರಾಜಮಾದಪ್ಪ, ಖಜಾಂಚಿ ಮಂಡೇಪಂಡ ಸುಗುಣ ಮುತ್ತಣ್ಣ, ಕಾನೂನು ಸಲಹೆಗಾರ ಬಲ್ಯಮಾಡ ಮಧು ಮಾದಪ್ಪ, ಕೇಂದ್ರ ಸಮಿತಿ ಸದಸ್ಯರಾದ ಅಮ್ಮಣಿಚಂಡ ರಾಜಾನಂಜಪ್ಪ, ಬಾಚರಣಿಯಂಡ ಅಪ್ಪಣ್ಣ, ಮಾಳೇಟಿರ ರತ್ನ ಮಾದಯ್ಯ, ಅಜ್ಜಿಕುಟ್ಟೀರ ದೇವಯ್ಯ, ಮುಲ್ಲೇಂಗಡ ಶಂಕರಿ ಪೊನ್ನಪ್ಪ, ಮಾಳೇಟಿರ ಶ್ರೀನಿವಾಸ್, ಅಮ್ಮಣಿಚಂಡ ಪ್ರವೀಣ್ ಚಂಗಪ್ಪ, ತೇಲಪಂಡ ಪ್ರಮೋದ್ ಸೋಮಯ್ಯ, ಕರೇರ ವಾಸು ಜೋಯಪ್ಪ, ಯೂತ್ ವಿಂಗ್ ಅಧ್ಯಕ್ಷ ಚಮ್ಮಟೀರ ಪ್ರವೀಣ್ ಉತ್ತಪ್ಪ, ಕಾಣತಂಡ ವಿವೇಕ್, ಪೊಮ್ಮಕ್ಕಡ ಪರಿಷತ್ ಅಧ್ಯಕ್ಷೆ ಶ್ರೀಮತಿ ಬಾಚರಣಿಯಂಡ ರಾಣು ಅಪ್ಪಣ್ಣ, ಶ್ರೀಮತಿ ಕೋಣಿಯಂಡ ಬೋಜಮ್ಮ ಉತ್ತಪ್ಪ, ಶ್ರೀಮತಿ ಮಳವಂಡ ಮುತ್ತಮ್ಮ, ಶ್ರೀಮತಿ ಮಂಡೆಪಂಡ ಗೀತಾ ಮಂದಣ್ಣ, ಶ್ರೀಮತಿ ಮಂಡೆಪಂಡ ತ್ಯಾಗಿ, ಅಮ್ಮತ್ತಿ ಕೊಡವ ಸಮಾಜದ ಅಧ್ಯಕ್ಷ ಐನಂಡ ಪ್ರಕಾಶ್ ಗಣಪತಿ, ವಿರಾಜಪೇಟೆ ಕೊಡವ ಸಮಾಜದ ಕಾರ್ಯದರ್ಶಿ ಮಾಳೇಟಿರ ಶ್ರೀನಿವಾಸ್ ಇನ್ನಿತರರು ಉಪಸ್ಥಿತರಿದ್ದರು.

ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆ

ನಾಳೆ ಕೊಡಗು ಜಿಲ್ಲೆಯ ದೇವಾಲಯ, ಮನೆ–ಮನೆಗಳಲ್ಲಿ ವಿಶೇಷ ಪೂಜೆ

ವಿಶ್ವ ಹಿಂದೂ ಪರಿಷತ್‌ನ ಜಿಲ್ಲಾ ಘಟಕ ಕರೆ

ಮಡಿಕೇರಿ,ಜ.20– ಅಯೋಧ್ಯೆಯಲ್ಲಿ ಶ್ರೀರಾಮನ ಪ್ರಾಣ ಪ್ರತಿಷ್ಠಾಪನೆಯ ದಿನವಾದ ಜ.22ರಂದು ಕೊಡಗು ಜಿಲ್ಲೆಯ ಎಲ್ಲಾ ದೇವಾಲಯಗಳಲ್ಲಿ ಮತ್ತು ಮನೆ ಮನೆಗಳಲ್ಲಿ ವಿಶೇಷ ಪೂಜೆ ಸಲ್ಲಿಸುವಂತೆ ವಿಶ್ವ ಹಿಂದೂ ಪರಿಷತ್‌ನ ಜಿಲ್ಲಾ ಘಟಕ ಕರೆ ನೀಡಿದೆ.

ಜಿಲ್ಲೆಯ ಎಲ್ಲಾ ದೇವಾಲಯಗಳನ್ನು ಶುಚಿ ಮಾಡಿ, ಅಲಂಕಾರಗೊಳಿಸಿ ಶ್ರದ್ಧಾಭಕ್ತಿಯಿಂದ ವಿಶೇಷ ಪೂಜೆ, ಪ್ರಾರ್ಥನೆ ಸಲ್ಲಿಸಬೇಕು. ಶ್ರೀರಾಮ ನಾಮಸ್ಮರಣೆ ಮತ್ತು ಭಜನೆಯೊಂದಿಗೆ ಬಾಲರಾಮನ ಪ್ರತಿಷ್ಠಾಪನೆಯ ದಿನವನ್ನು ಅರ್ಥಪೂರ್ಣಗೊಳಿಸಬೇಕು. ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಸೂಚನೆಯಂತೆ ಈಗಾಗಲೇ ಜಿಲ್ಲೆಯ ಪ್ರತಿ ಮನೆಗೂ ಅಯೋಧ್ಯೆಯ ಮಂತ್ರಾಕ್ಷತೆಯನ್ನು ತಲುಪಿಸಲಾಗಿದೆ. ಸೋಮವಾರ ಸೂರ್ಯಾಸ್ತವಾದ ನಂತರ ಎಲ್ಲಾ ಮನೆಯಲ್ಲಿ ದೀಪ ಬೆಳಗಿ ಮಂತ್ರಾಕ್ಷತೆಗೆ ವಿಶೇಷ ಪೂಜೆ ಸಲ್ಲಿಸಿ ದೀಪೋತ್ಸವ ಆಚರಿಸಬೇಕು ಎಂದು ವಿಹೆಚ್‌ಪಿ ಮನವಿ ಮಾಡಿದೆ.

ಕರಸೇವಕರಿಗೆ ಸನ್ಮಾನ: ಅಯೋಧ್ಯೆಯಲ್ಲಿ ಶ್ರೀರಾಮನ ಪ್ರಾಣ ಪ್ರತಿಷ್ಠಾಪನೆಯ ಹಿನ್ನೆಲೆಯಲ್ಲಿ ಮೂರ್ನಾಡಿನ ಕರಸೇವಕರನ್ನು ವಿಶ್ವ ಹಿಂದೂ ಪರಿಷತ್‌ನ ಮೂರ್ನಾಡು ಘಟಕ ಸನ್ಮಾನಿಸಿ ಗೌರವಿಸಿತು. 1992ರಲ್ಲಿ ರಾಮ ಜನ್ಮಭೂಮಿ ಹೋರಾಟದಲ್ಲಿ ಪಾಲ್ಗೊಂಡ ಕರಸೇವಕರಾದ ಬೈಲೋಳಿ ಸುಬ್ಬಯ್ಯ, ವೀರೇಶ್, ಸೋಮ ಚೆಲುವ ಹಾಗೂ ಬಿ.ಕೆ. ಪೂವಪ್ಪ ಅವರ ಪರವಾಗಿ ಪತ್ನಿ ಕಲಾವತಿ ಅವರನ್ನು ಸನ್ಮಾನಿಸಿ ಕರಸೇವೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಲಾಯಿತು.

ನಾಲ್ವರು ಕರಸೇವಕರ ಮನೆಗಳಿಗೆ ತೆರಳಿ ಗೌರವಿಸಿದ ವಿಹೆಚ್‌ಪಿ ಪ್ರಮುಖರು ಅಯೋಧ್ಯೆಯ ಮಂತ್ರಾಕ್ಷತೆ ನೀಡಿದರು. ಜ.22ರಂದು ಶ್ರೀರಾಮನ ಪ್ರಾಣ ಪ್ರತಿಷ್ಠಾಪನೆಯಾಗುತ್ತಿರುವ ಬಗ್ಗೆ ಹರ್ಷ ವ್ಯಕ್ತಪಡಿಸಿದರು. ಹಿಂದೂ ಕಾರ್ಯಕರ್ತರ ಪರಿಶ್ರಮದಿಂದ ಇದು ಸಾಧ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ವಿಶ್ವ ಹಿಂದೂ ಪರಿಷತ್‌ನ ಮೂರ್ನಾಡು ಘಟಕದ ಅಧ್ಯಕ್ಷ ಬಿ.ವಿ.ಮೋಹನ್, ಕಾರ್ಯದರ್ಶಿ ದಿನೇಶ್ ಮೂರ್ನಾಡು, ಬಜರಂಗದಳದ ಪ್ರಮುಖ ಎಂ.ಕೆ.ಪ್ರವೀಣ್, ಮಾತೃಶಕ್ತಿಯ ಜಿಲ್ಲಾ ಪ್ರಮುಖರಾದ ಪೂರ್ಣಿಮಾ ಸುರೇಶ್, ಜಾನಕಿ ಚಂಗಪ್ಪ ಹಾಗೂ ಕಾರ್ಯಕರ್ತರು ಈ ಸಂದರ್ಭ ಹಾಜರಿದ್ದರು.



ಅಯೋಧ್ಯೆಯಲ್ಲಿ ಶ್ರೀರಾಮನ ಪ್ರಾಣ ಪ್ರತಿಷ್ಠಾಪನೆಯ ಹಿನ್ನೆಲೆಯಲ್ಲಿ ಮೂರ್ನಾಡಿನ ಕರಸೇವಕರನ್ನು ವಿಶ್ವ ಹಿಂದೂ ಪರಿಷತ್‌ನ ಮೂರ್ನಾಡು ಘಟಕ ಸನ್ಮಾನಿಸಿ, ಗೌರವಿಸಿತು.

ನಾಳೆ ಶಿವಯೋಗಿ ಸಿದ್ದರಾಮೇಶ್ವರ, ಅಂಬಿಗರ ಚೌಡಯ್ಯ ಜಯಂತಿ

ಮಡಿಕೇರಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಹಾಗೂ ಶ್ರೀ ಅಂಬಿಗರ ಚೌಡಯ್ಯ ಜಯಂತಿ ಕಾರ್ಯಕ್ರಮವು ಜ.22 ರಂದು ಬೆಳಗ್ಗೆ 10.30 ಗಂಟೆಗೆ ನಗರದ ಗಾಂಧಿ ಭವನದಲ್ಲಿ ನಡೆಯಲಿದೆ. ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಗಣರಾಜ್ಯೋತ್ಸವದಲ್ಲಿ ಸಿಬ್ಬಂದಿ ಕಡ್ಡಾಯವಾಗಿ ಭಾಗವಹಿಸಬೇಕು



ಗಣರಾಜ್ಯೋತ್ಸವ ಪೂರ್ವಭಾವಿ ಸಭೆಯಲ್ಲಿ ತಹಶೀಲ್ದಾರ್ ರಾಮಚಂದ್ರ ಮಾತನಾಡಿದರು. ಕಸಾಪ ತಾಲೂಕು ಅಧ್ಯಕ್ಷ ಡಿ.ಪಿ.ರಾಜೇಶ್, ಮುಲ್ಲೇಂಗಡ ಶಂಕರಿ ಪೊನ್ನಪ್ಪ ಮತ್ತಿತರರಿದ್ದರು.

ವಿರಾಜಪೇಟೆ, ಜ.20– ಗಣರಾಜ್ಯೋತ್ಸವ ಆಚರಣೆ ಮತ್ತು ಸಿದ್ಧತೆಯಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ಕಡ್ಡಾಯವಾಗಿ ಭಾಗವಹಿಸಬೇಕು. ನಿರ್ಲಕ್ಷ್ಯ ತೋರುವ ಅಧಿಕಾರಿ ಹಾಗೂ ಸಿಬ್ಬಂದಿಯ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ತಹಶೀಲ್ದಾರ್ ರಾಮಚಂದ್ರ ಎಚ್ಚರಿಸಿದರು.

ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಗಣರಾಜ್ಯೋತ್ಸವ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಈ ಬಾರಿ ವಿಶಿಷ್ಟರೀತಿ ಗಣರಾಜ್ಯೋತ್ಸವ ಆಚರಿಸುವಂತಾಗಬೇಕು. ಗಣರಾಜ್ಯೋತ್ಸವ ದಿನ ರಜೆ ಎಂದು ಮನೆಯಲ್ಲಿ ಉಳಿಯಬಾರದು. ಕಾರ್ಯಕ್ರಮದಲ್ಲಿ ಭಾಗವಹಿಸಬೇಕು. ಶಿಕ್ಷಣ ಇಲಾಖೆಯವರು ಉತ್ತಮವಾಗಿ ಕಾರ್ಯನಿರ್ವಹಿಸಿ ಸಹಕರಿಸಬೇಕು. ಬೆಳಗ್ಗೆ ವಿದ್ಯಾರ್ಥಿಗಳಿಗೆ ಲಘು ಉಪಾಹಾರ ವ್ಯವಸ್ಥೆಯೊಂದಿಗೆ ಸಮಯದ ಇತಿ ಮಿತಿಯಲ್ಲಿ ಕಾರ್ಯಕ್ರಮ ಆಯೋಜಿಸುವಂತೆ ಸೂಚಿಸಿದರು. ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಿ.ಪಿ.ರಾಜೇಶ್ ಮಾತನಾಡಿ, ಪ್ರತಿ ಬಾರಿ ವಿರಾಜಪೇಟೆ ಹಾಗೂ ಪೊನ್ನಂಪೇಟೆ ಎರಡು ಕಡೆ ರಾಷ್ಟ್ರೀಯ ಹಬ್ಬಗಳ ಆಚರಣೆ ಕಷ್ಟವಾಗುತ್ತಿದೆ. ಆದ್ದರಿಂದ ಈ ಬಾರಿ ಪೊನ್ನಂಪೇಟೆಯಲ್ಲಿ ಸ್ಥಳೀಯ ಅಧಿಕಾರಿಗಳಿಗೆ ಸಮಾರಂಭ ನಡೆಸಲು ಅನುವು ನೀಡಬೇಕು ಎಂದು ಮನವಿ ಮಾಡಿದರು.

ವಿರಾಜಪೇಟೆ ಹಿರಿಯ ನಾಗರಿಕರ ಸಮಿತಿ ಅಧ್ಯಕ್ಷ ಮುಲ್ಲೇಂಗಡ ಶಂಕರಿ ಪೊನ್ನಪ್ಪ ಮಾತನಾಡಿ, ನಗರದ ದೊಡ್ಡಟ್ಟಿ ಚೌಕಿಯಲ್ಲಿರುವ ಅಪ್ಪಚ್ಚ ಕವಿಯ ಪುತ್ಥಳಿಗೆ ಶಾಸಕರು ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಅಧ್ಯಕ್ಷ ತಹಶೀಲ್ದಾರ್ ಮಾಲಾರ್ಪಣೆ ಮಾಡಿ ಮೆರವಣಿಗೆಗೆ ಚಾಲನೆ ನೀಡಬೇಕು ಎಂದು ಮನವಿ ಮಾಡಿದರು. ನಂತರ ಇದಕ್ಕೆ ತಹಶೀಲ್ದಾರ್ ಒಪ್ಪಿಗೆ ನೀಡಿದರು.

ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕಿ ಗಾಯತ್ರಿ ನರಸಿಂಹ ಮಾತನಾಡಿದರು. ಪುರಸಭೆ ಮುಖ್ಯಾಧಿಕಾರಿ ಚಂದ್ರಕುಮಾರ್, ಸಾರ್ವಜನಿಕ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ.ವಿಶ್ವನಾಥ್ ಸಿಂಪಿ, ಸೆಸ್ಕ್ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಸುರೇಶ್, ಜಿಪಂ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಮಹಾದೇವ, ನಗರ ಪೊಲೀಸ್ ಠಾಣಾಧಿಕಾರಿ ರವೀಂದ್ರ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ನಾಳೆ ಮಡಿಕೇರಿಯಲ್ಲಿ ತಾಲೂಕು ತ್ರೈಮಾಸಿಕ ಕೆಡಿಪಿ ಸಭೆ

ಮಡಿಕೇರಿ, ಜ.20– ತಾಲೂಕಿನ ತ್ರೈಮಾಸಿಕ ಕೆಡಿಪಿ ಸಭೆಯು ಜನವರಿ 22 ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಮುಖ್ಯಮಂತ್ರಿ ಅವರ ಕಾನೂನು ಸಲಹೆಗಾರರು ಹಾಗೂ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಎ.ಎಸ್.ಪೊನ್ನಣ್ಣ ಹಾಗೂ ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಡಾ॥ ಮಂತರ್ ಗೌಡ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ತಾ.ಪಂ ಇಒ ಶೇಖರ್ ಅವರು ತಮ್ಮ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ರೀಡೆಗಳಿಂದ ಯುವಕರಲ್ಲಿ ಸ್ನೇಹ, ಸೌಹಾರ್ದತೆ ಹೆಚ್ಚಾಗಲಿ: ಶಾಸಕ ದರ್ಶನ್ ಧ್ರುವನಾರಾಯಣ್



ಶಾಸಕ ದರ್ಶನ್ ಬ್ಯಾಟಿಂಗ್ ಮಾಡುವ ಮೂಲಕ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿದರು.

ಚಾಮರಾಜನಗರ, ಜ.20– ಕ್ರೀಡೆಗಳಿಂದ ಯುವಕರಲ್ಲಿ ಸ್ನೇಹ, ಸೌಹಾರ್ದತೆ ಹೆಚ್ಚಾಗಬೇಕು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಭಗೀರಥ ಪ್ರೀಮಿಯರ್ ಲೀಗ್ ಸೀಸನ್–2 ಕ್ರಿಕೆಟ್ ಪಂದ್ಯಾವಳಿಯನ್ನು ಬ್ಯಾಟಿಂಗ್ ಮಾಡುವ ಮೂಲಕ ಉದ್ಘಾಟಿಸಿ, ನಂತರ ಶ್ರೀಭಗೀರಥ ಮಹರ್ಷಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿದರು.

ಯುವಕರು ತಮ್ಮ ಪ್ರತಿಭೆ ಹೊರಹಾಕಲು ಇಂತಹ ಕಾರ್ಯಕ್ರಮಗಳು ವೇದಿಕೆಯಾಗಿವೆ. ಹೀಗಾಗಿ ಇಂತಹ ಕಾರ್ಯಕ್ರಮಗಳನ್ನು ಹೆಚ್ಚಾಗಿ ಆಯೋಜಿಸಬೇಕು ಎಂದರು.

ನನ್ನ ತಂದೆ ದಿ.ಆರ್.ಧ್ರುವನಾರಾಯಣ್ ಅವರು ಸಂಸದರಾಗಿದ್ದ ವೇಳೆ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ನಾನೂ ಕೂಡ ಅವರ ಹಾದಿಯಲ್ಲಿ ನಡೆಯುವ ಮೂಲಕ ಸಹಕಾರ ನೀಡುತ್ತೇನೆ ಎಂದರು.

ಜಿಪಂ ಮಾಜಿ ಅಧ್ಯಕ್ಷ ಸಿ.ಎ.ಮಹದೇವಶೆಟ್ಟಿ ಮಾತನಾಡಿ, ಈ ಬಾರಿ ಕವರ್ ಡ್ರೈವ್ ಸಂಸ್ಥೆ ಯೂಟ್ಯೂಬ್‌ನಲ್ಲಿ ಕ್ರಿಕೆಟ್ ಪಂದ್ಯಾವಳಿಯನ್ನು ಲೈವ್ ನೀಡುತ್ತಿರುವುದು ವಿಶೇಷವಾಗಿದೆ. ಕ್ರೀಡೆಯಲ್ಲಿ ಸೋಲು, ಗೆಲುವು ಸಾಮಾನ್ಯ ಕ್ರೀಡಾಪಟುಗಳು ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ಪರಿಸರ ಪ್ರೇಮಿ ವೆಂಕಟೇಶ್ ಮಾತನಾಡಿದರು. ಈ ವೇಳೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ತಾಪಂ ಮಾಜಿ ಅಧ್ಯಕ್ಷ ಚಿಕ್ಕಮಹದೇವು, ಎಪಿಎಂಸಿ ಮಾಜಿ ಅಧ್ಯಕ್ಷ ಮುದ್ದುಮಾದಶೆಟ್ಟಿ, ಬಿಜೆಪಿ ಪ್ರಧಾನ ಕಾರ್ಯದರ್ಶಿ ಕೃಷ್ಣ, ಬಿಜೆಪಿ ನಗರ ಮಂಡಲ ಯುವಮೋರ್ಚಾ ಅಧ್ಯಕ್ಷ ಆನಂದ್ ಭಗೀರಥ್, ಭಗೀರಥ ಪ್ರೀಮಿಯರ್ ಲೀಗ್ ಸೀಸನ್ 2 ಅಧ್ಯಕ್ಷ ರಾಜೇಂದ್ರ, ಕಾಂಗ್ರೆಸ್ ಮುಖಂಡ ದ್ವಾರಕೀಶ್ ಉಪ್ಪಾರ್, 7 ಸ್ಟಾರ್ ಬೀಡಿ ಮಾಲೀಕ ಭರತ್‌ಕುಮಾರ್, ಜಗ್ಗಣ್ಣ, ಅಜಯ್, ಮೋಹನ್, ರಾಜು, ಶ್ರೀನಿವಾಸ, ಚಂದನ್, ನವೀನ್, ರಾಜೇಂದ್ರ, ಸ್ವಾಮಿ ಸೇರಿದಂತೆ ಇನ್ನಿತರರಿದ್ದರು.

ಕ್ರೀಡಾಪಟುಗಳು ಗುರಿ ಮುಟ್ಟಲು ಶಿಸ್ತು, ಏಕಾಗ್ರತೆ ಮುಖ್ಯ

ಜಿಲ್ಲಾಧಿಕಾರಿ ಶಿಲ್ಪಾನಾಗ್ ಅಭಿಪ್ರಾಯ



ಚಾಮರಾಜನಗರ ಜಿಲ್ಲಾ ನೆಟ್‌ಬಾಲ್ ಅಸೋಸಿಯೇಷನ್ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಶಿಲ್ಪಾನಾಗ್ ಉದ್ಘಾಟಿಸಿದರು.

ಚಾಮರಾಜನಗರ, ಜ.20– ಕ್ರೀಡಾಪಟುಗಳು ಗುರಿ ಮುಟ್ಟಲು ಶಿಸ್ತು ತಾಳ್ಮೆ ಸಂಯಮ, ಏಕಾಗ್ರತೆ ಮುಖ್ಯ ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ಅಭಿಪ್ರಾಯಪಟ್ಟರು.

ನಗರದ ವರ್ತಕರ ಭವನದಲ್ಲಿ ಆಯೋಜಿಸಿದ್ದ ಚಾಮರಾಜನಗರ ಜಿಲ್ಲಾ ನೆಟ್‌ಬಾಲ್ ಅಸೋಸಿಯೇಷನ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದೈಹಿಕ ಹಾಗೂ ಮಾನಸಿಕವಾಗಿ ಸದೃಢಗೊಳ್ಳುವ ಜೊತೆಗೆ ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಕ್ರೀಡೆ ಸಹಕಾರಿಯಾಗಿದೆ. ಪ್ರತಿಯೊಬ್ಬರೂ ದೇಹ ಸದೃಢಗೊಳಿಸಲು ಯೋಗ, ವಾಕಿಂಗ್, ಕ್ರೀಡೆ ಹೀಗೆ ಒಂದೊಂದು ಮಾರ್ಗ ಅನುಸರಿಸುತ್ತಾರೆ ಎಂದರು.

ಗ್ರಾಮೀಣ ಭಾಗದ ಪ್ರತಿಭಾವಂತರು ಯಾವುದೇ ಸವಲತ್ತುಗಳಿಲ್ಲದೇ ರಾಷ್ಟ್ರಮಟ್ಟದಲ್ಲಿ ಸ್ಪರ್ಧಿಸಿ ಪ್ರಶಸ್ತಿ ತಂದಿರುವುದು ಸಂತಸದ ವಿಚಾರ. ಮುಂದಿನ ದಿನಗಳಲ್ಲಿ ಕ್ರೀಡಾಪಟುಗಳಿಗೆ ಬೇಕಾಗಿರುವ ಎಲ್ಲಾ ರೀತಿಯ ನೆರವು ನೀಡಲು ಜಿಲ್ಲಾಡಳಿತ ಸಿದ್ಧವಿದೆ. ಇದನ್ನು ಸದುಪಯೋಗಪಡಿಸಿಕೊಂಡು ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಬೇಕು ಎಂದು ಸಲಹೆ ನೀಡಿದರು. ಕ್ರೀಡಾಪಟುಗಳಿಗೆ ಬೇಕಿರುವ ಸವಲತ್ತುಗಳು, ಅಭಿವೃದ್ಧಿಗೆ ಬೇಕಾಗುವ ಮೂಲಸೌಕರ್ಯಗಳು ಜಿಲ್ಲೆಯಲ್ಲಿದೆ. ಮುಂದೆ ಏನಾಗಬೇಕು. ಏನೇನು ಅವಶ್ಯಕತೆ ಇದೆ ಎಂಬುದರ ಬಗ್ಗೆ ಚರ್ಚಿಸಿ ಜಿಲ್ಲೆಯನ್ನು ಕ್ರೀಡೆಯಲ್ಲಿ ನಂ.1 ಸ್ಥಾನಕ್ಕೆ ತರಲು ಪ್ರಯತ್ನಿಸಲಾಗುವುದು ಎಂದರು.

ಸಂತೇಮರಹಳ್ಳಿಯಲ್ಲಿ ಆರ್ಚರಿ ಶಾಲೆ ಇದೆ. ಜೊತೆಗೆ ಜಿಲ್ಲೆಗೆ ರೈಫಲ್ ಶೂಟಿಂಗ್‌ಗೆ ಸ್ಥಳಾವಕಾಶ ಹಾಗೂ ಕ್ರೀಡಾ ಇಲಾಖೆಗೆ ಉತ್ತಮ ತರಬೇತಿ ಪಡೆದ ಸಹಾಯಕ ನಿರ್ದೇಶಕರನ್ನು ಜಿಲ್ಲೆಗೆ ನೀಡುವಂತೆ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಅಲ್ಲದೇ ಮುಂದಿನ ಆರ್ಥಿಕ ವರ್ಷದಲ್ಲಿ ಕ್ರೀಡೆ ಉತ್ತೇಜನಕ್ಕೆ ಏನೆಲ್ಲಾ ಅನುಕೂಲ ಕಲ್ಪಿಸಬಹುದು ಎಂಬ ಬಗ್ಗೆ ರೂಪುರೇಷೆ ಸಿದ್ಧಪಡಿಸಲಾಗುತ್ತಿದೆ ಎಂದರು. ಇದೇ ವೇಳೆ ಮಧ್ಯಪ್ರದೇಶದಲ್ಲಿ ನಡೆಯುವ ರಾಷ್ಟ್ರೀಯ ಮಟ್ಟದ ಪಂದ್ಯಾವಳಿಗೆ ಭಾಗವಹಿಸುವ ವಿದ್ಯಾರ್ಥಿಗಳಿಗೆ ಶುಭ ಹಾರೈಸಿ, ಚಾಮರಾಜನಗರ ಎಂದರೆ ನೆಟ್‌ಬಾಲ್ ಎನ್ನುವಷ್ಟು ಮಟ್ಟಿಗೆ ಜಿಲ್ಲೆ ಹಾಗೂ ರಾಜ್ಯಕ್ಕೆ ಉತ್ತಮ ಕೀರ್ತಿ ತನ್ನಿ ಎಂದರು.

ನಿವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಡಾ. ಆರ್.ರಾಜು ಮಾತನಾಡಿ, ವಿದ್ಯಾರ್ಥಿಗಳಲ್ಲಿ ಏಕಾಗ್ರತೆ ಇರಬೇಕು. ವಿದ್ಯೆ ಹಾಗೂ ಕ್ರೀಡೆ ಎರಡಕ್ಕೂ ಸಮಾನ ಆದ್ಯತೆ ನೀಡುವ ಮೂಲಕ ಸದೃಢ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು ಎಂದರು.

ಕಾಡಂಚಿನ ಗ್ರಾಮಗಳ ಆಶ್ರಮ ಶಾಲೆಗಳು ಹಾಗೂ ಗಿರಿಜನರ ಮಕ್ಕಳಿಗೂ ಹೆಚ್ಚಿನ ಅವಕಾಶ ಕಲ್ಪಿಸುವ ಮೂಲಕ ಅವರಲ್ಲಿರುವ ಪ್ರತಿಭೆಗಳನ್ನು ಹೊರಚೆಲ್ಲುವ ಮೂಲಕ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಪ್ರತಿನಿಧಿಸುವಂತೆ ಮಾಡಬೇಕು. ಇದರಲ್ಲಿ ಪೋಷಕರು ಹಾಗೂ ಶಿಕ್ಷಕರ ಪಾತ್ರ ಹೆಚ್ಚಾಗಿರಬೇಕು ಎಂದರು.

ಭಾರತ ಸೇವಾದಳದ ಜಿಲ್ಲಾಧ್ಯಕ್ಷ ವೆಂಕಟನಾಗಪ್ಪ ಶೆಟ್ಟಿ ಮಾತನಾಡಿದರು. ಅಸೋಸಿಯೇಷನ್ ಅಧ್ಯಕ್ಷ ವಿ.ಶ್ರೀನಿವಾಸಪ್ರಸಾದ್ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ಅಮೆಚೂರ್ ನೆಟ್‌ಬಾಲ್ ಅಸೋಸಿಯೇಷನ್ ಆಫ್ ಕರ್ನಾಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಗಿರೀಶ್.ಸಿ., ಖಜಾಂಚಿ ವಿಶ್ವಾಥ್ ಎ.ಸಿ., ಕುದೇರು ಠಾಣೆ ಎಸ್‌ಐ ಟಿ.ಎಂ. ತಾಜುದ್ದೀನ್, ನಿವೃತ್ತ ಮುಖ್ಯ ಶಿಕ್ಷಕ ಹಾಗೂ ನಾಟಿ ವೈದ್ಯ ಎಸ್.ರಾಮಶೆಟ್ಟಿ, ಮೈಸೂರು ಜಿಲ್ಲಾ ನೆಟ್‌ಬಾಲ್ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ಲೋಕೇಶ್ ಎಚ್.ಎಸ್., ಚಾಮರಾಜನಗರ ಜಿಲ್ಲಾ ನೆಟ್‌ಬಾಲ್ ಅಸೋಸಿಯೇಷನ್ ಉಪಾಧ್ಯಕ್ಷ ರಾಜೇಂದ್ರ.ಸಿ., ಪ್ರಧಾನ ಕಾರ್ಯದರ್ಶಿ ಮಹದೇವಪ್ರಸಾದ್.ಬಿ, ಸಹ ಕಾರ್ಯದರ್ಶಿ ಸುರೇಶ್ ಕುಮಾರ್, ಖಜಾಂಚಿ ಮಹದೇವಸ್ವಾಮಿ ಎಂ.ಸಿ., ಸಂಘಟನಾ ಕಾರ್ಯದರ್ಶಿ ಮಧುಕುಮಾರ್ ಸಿ.ಎಂ., ಸದಸ್ಯರಾದ ದುಂಡಯ್ಯ, ಮಂಜುನಾಥ್ ಎಂ., ಲೋಕೇಶ್ ವೈ.ಎನ್., ನಾಗೇಂದ್ರ ಸಿ., ಶಾಂತಕುಮಾರ್.ಎಲ್., ಶ್ರೀಕಂಠಸ್ವಾಮಿ, ಶ್ರೀಧರ್, ಗಂಗಪ್ಪ, ರೂಪಾ, ಲಕ್ಷ್ಮಿ ಸೇರಿದಂತೆ ಇನ್ನಿತರರಿದ್ದರು.

> ಅವಕಾಶವಂಚಿತ ಹಾಗೂ ಎಲೆ ಮರೆ ಕಾಯಿಯಂತಿರುವ ಕ್ರೀಡಾಪಟುಗಳನ್ನು ಗುರುತಿಸಿ ಅವರ ಭವಿಷ್ಯ ಉಜ್ವಲಗೊಳಿಸುವ ಉದ್ದೇಶದಿಂದ ಈ ಅಸೋಸಿಯೇಷನ್ ಅನ್ನು ಪ್ರಾರಂಭಿಸಿದ್ದು, ಪ್ರತಿಯೊಬ್ಬ ಕ್ರೀಡಾಪಟುಗಳಿಗೂ ಕೂಡಾ ಅವಕಾಶ ಕಲ್ಪಿಸುವುದೇ ನಮ್ಮ ಸಂಸ್ಥೆಯ ಮುಖ್ಯ ಉದ್ದೇಶ.
>
> –ನರ್ಗಿಸ್‌ಬಾನು, ಜಿಲ್ಲಾ ನೆಟ್‌ಬಾಲ್ ಅಸೋಸಿಯೇಷನ್ ಗೌರವಾಧ್ಯಕ್ಷೆ.

ನಾಳೆ ಪೂರ್ವಭಾವಿ ಸಭೆ

ಚಾಮರಾಜನಗರ: ಸಂವಿಧಾನ ದಿನಾಚರಣೆ ಪ್ರಯುಕ್ತ ಜ.26 ರಿಂದ ಫೆ.23ರವರೆಗೆ ನಡೆಸಲಾಗುವ ಸಂವಿಧಾನ ಜಾಗೃತಿ ಜಾಥಾ ಮತ್ತು ಸಂವಿಧಾನ ಜಾಗೃತಿ ಕಾರ್ಯಕ್ರಮದ ಅಂಗವಾಗಿ ಜ.22ರಂದು ಬೆಳಗ್ಗೆ 10.30ಕ್ಕೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆಯನ್ನು ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಈ ಸಭೆಗೆ ಜಿಲ್ಲೆಯ ಎಲ್ಲಾ ಸಂಘ ಸಂಸ್ಥೆಗಳ ಮುಖಂಡರು, ಪದಾಧಿಕಾರಿಗಳು, ಎಲ್ಲಾ ಸಮುದಾಯಗಳ ಮುಖಂಡರು ಭಾಗವಹಿಸಿ ಸೂಕ್ತ, ಸಲಹೆ ನೀಡುವಂತೆ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಮಲ್ಲಿಕಾರ್ಜುನ್ ಪ್ರಕಟಣೆಯಲ್ಲಿ ಕೋರಿದ್ದಾರೆ.

ನಾಳೆ ಜನಸಂಪರ್ಕ ಸಭೆ

ಚಾಮರಾಜನಗರ, ಜ.20– ಶಾಸಕ ಎ.ಆರ್.ಕೃಷ್ಣಮೂರ್ತಿ ಅಧ್ಯಕ್ಷತೆಯಲ್ಲಿ ಜ.22 ರಂದು ಬೆಳಗ್ಗೆ 10 ಗಂಟೆಗೆ ಸಂತೇಮರಹಳ್ಳಿ ಗ್ರಾಪಂ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಹಾಗೂ ಮಧ್ಯಾಹ್ನ 2 ಗಂಟೆಗೆ ಕೆಂಪನಪುರ ಗ್ರಾಪಂ ಸರ್ಕಾರಿ ಶಾಲಾ ಆವರಣದಲ್ಲಿ ಜನಸಂಪರ್ಕ ಸಭೆ ಏರ್ಪಡಿಸಲಾಗಿದೆ ಎಂದು ತಾಪಂ ಇಒ ಪೂರ್ಣಿಮಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕಮಲಮ್ಮ ನಿಧನ

ಚಾಮರಾಜನಗರ, ಜ.20– ತಾಲೂಕಿನ ಆಲೂರು ಗ್ರಾಮದ ನಿವಾಸಿ ಕಮಲಮ್ಮ(95) ನಿಧನರಾದರು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮೃತರ ತೋಟದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀರಾಮ, ಲಕ್ಷ್ಮಣರು ನಡೆದಾಡಿದ

ಗವಿರಾಯಸ್ವಾಮಿ ಬೆಟ್ಟದ ರಾಮ ಪಾದುಕೆಗೆ ಪೂಜೆ



ಕೊಳ್ಳೇಗಾಲ ತಾಲೂಕಿನ ಗವಿರಾಯಸ್ವಾಮಿ ಬೆಟ್ಟದ ತಪ್ಪಲಿನ ರಾಮ ಪಾದುಕೆಗೆ ಕರಸೇವಕ ರವಿಶಂಕರ್ ಸೇರಿದಂತೆ ಇನ್ನಿತರರು ಪೂಜೆ ಸಲ್ಲಿಸಿದರು.

ಕೊಳ್ಳೇಗಾಲ, ಜ.20– ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನೆ ಹಿನ್ನೆಲೆಯಲ್ಲಿ ಶ್ರೀರಾಮ, ಲಕ್ಷ್ಮಣರು ನಡೆದಾಡಿದ ತಾಲೂಕಿನ ಗವಿರಾಯಸ್ವಾಮಿ ಬೆಟ್ಟದ ತಪ್ಪಲಿನಲ್ಲಿರುವ ರಾಮ ಪಾದುಕೆ, ಉತ್ಸವ ಮೂರ್ತಿ ಪೂಜಿಸುವ ಮಂಟಪಕ್ಕೆ ಬಿಜೆಪಿ ಮುಖಂಡ, ಕರಸೇವಕ, ರಾಮ ಭಕ್ತ ಸತ್ತೇಗಾಲ ರವಿಶಂಕರ್ ಶ್ರೀರಾಮ ವೇಷಧಾರಿಯಾಗಿ ಹಲವು ಭಕ್ತರ ಜೊತೆಗೂಡಿ ಪೂಜೆ ಸಲ್ಲಿಸಿದರು.

ಉದ್ಯಮಿ ನಿರಂಜನ್ ರವಿ, ಮಹೇಶ್, ನಾಗೇಂದ್ರ ಮಾದಪ್ಪ ಸೇರಿದಂತೆ ಹಲವರು ತಾಲೂಕಿನ ಹ್ಯಾಂಡ್‌ಪೋಸ್ಟ್‌ನ ಪಟ್ಟಶೆಟ್ಟಿದೊಡ್ಡಿಗೆ ತೆರಳುವ ಮಾರ್ಗಕ್ಕೆ ಹೊಂದಿಕೊಂಡಂತಿರುವ ಕಾಡಿನ ಮಧ್ಯದಲ್ಲಿ ಬೆಟ್ಟದ ಮೇಲಿರುವ ಗವಿರಾಯಸ್ವಾಮಿ ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸಿದರು.

ಈ ಸ್ಥಳವನ್ನು ಶ್ರೀರಾಮ ತಂದೆ ದಶರಥನಿಗೆ ಮೋಕ್ಷ ಕೊಟ್ಟ ಸ್ಥಳವೆಂದು ಕರೆಯಲಾಗುತ್ತಿದೆ. ಶ್ರೀರಾಮ, ಲಕ್ಷ್ಮಣರು ವನವಾಸ ಮುಗಿಸಿದ ಬಳಿಕ ತಮ್ಮ ತಂದೆ ದಶರಥರಿಗೆ ಪಿಂಡ ಪ್ರಧಾನ ಮಾಡಲು ಈ ಸ್ಥಳ ಆಯ್ಕೆ ಮಾಡಿಕೊಂಡರು ಎಂಬ ನಂಬಿಕೆ ಇದೆ. ಶ್ರೀರಾಮ ಈ ಸ್ಥಳಕ್ಕೆ ಭೇಟಿ ನೀಡಿದ ಸಂದರ್ಭ ಗವಿರಾಯ ಎಂಬ ರಾಕ್ಷಸ ಇಲ್ಲಿದ್ದ. ಆತ ಈ ಭಾಗದ ಜನರಿಗೆ ಹಿಂಸೆ ನೀಡುತ್ತಿದ್ದ. ಹೀಗಾಗಿ ರಾಮ ಅವನನ್ನು ಸಂಹಾರ ಮಾಡಿದ. ನಂತರ ಅವನಿಗೆ ಮೋಕ್ಷ ಪ್ರಾಪ್ತಿಯಾಗುವ ವರ ನೀಡಿದ ಕುರುಹಾಗಿ ಗವಿರಾಯಸ್ವಾಮಿ ಬೆಟ್ಟದ ಕೆಳಗೆ ಮೋಕ್ಷ ನೀಡಿದ ಸ್ಥಳ ಇದೆ. ಇಲ್ಲಿ ರಾಮ ಪಾದುಕೆಗಳಿದ್ದು ಒಂದು ಚಿಕ್ಕ ಮಂಟಪ ಕೂಡ ಇದೆ ಎಂಬುದು ಸ್ಥಳದ ಪುರಾಣದಿಂದ ತಿಳಿದು ಬರುತ್ತದೆ. ಗವಿರಾಯನನ್ನು ಸಂಹಾರ ಮಾಡಿದ್ದರಿಂದ ರಾಮನನ್ನು ಗವಿರಾಯಸ್ವಾಮಿ ಎಂದು ಪೂಜಿಸಲಾಗುತ್ತಿದೆ ಎಂಬುದು ಐತಿಹ್ಯ.

ಕರಸೇವಕ ರವಿಶಂಕರ್ ಮಾತನಾಡಿ, ಜ.22ರಂದು ಅಯೋಧ್ಯೆಯಲ್ಲಿ ಶ್ರೀರಾಮನ ಪ್ರಾಣ ಪ್ರತಿಷ್ಠಾಪನೆ ನಡೆಯುವ ಹಿನ್ನೆಲೆಯಲ್ಲಿ ನಾವು ಇಂದು ಇಲ್ಲಿಗೆ ಆಗಮಿಸಿ ಪೂಜೆ ಸಲ್ಲಿಸಿದ್ದೇವೆ. ರಾಮಮಂದಿರ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ನಮಗೆ ಅಧಿಕೃತ ಆಹ್ವಾನ ಬಂದಿದೆ. ಮುಂದಿನ ತಿಂಗಳು ನಾವು ತೆರಳುತ್ತೇವೆ. ಈ ಕ್ಷೇತ್ರ ರಾಮ ನಡೆದಾಡಿದ ಕ್ಷೇತ್ರ ಎಂಬ ಪ್ರತೀತಿ ಇರುವುದರಿಂದ ರಾಮನ ವೇಷ ಧರಿಸಿ ಇಲ್ಲಿಗೆ ಬಂದು ಪೂಜೆ ಸಲ್ಲಿಸಿದ್ದೇವೆ ಎಂದರು.

ಕೆಸ್ತೂರು ಪಿಎಸಿಎಸ್‌ಗೆ ನಾಗರಾಜು ಅಧ್ಯಕ್ಷ



ಯಳಂದೂರು ತಾಲೂಕಿನ ಕೆಸ್ತೂರು ಪಿಎಸಿಎಸ್ ನೂತನ ಅಧ್ಯಕ್ಷರಾಗಿ ಕೆ.ಎಸ್. ನಾಗರಾಜು, ಉಪಾಧ್ಯಕ್ಷರಾಗಿ ಮಾದೇಶ್ ಅವಿರೋಧವಾಗಿ ಆಯ್ಕೆಯಾದರು.

ಯಳಂದೂರು: ತಾಲೂಕಿನ ಕೆಸ್ತೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕೆ.ಎಸ್.ನಾಗರಾಜು, ಉಪಾಧ್ಯಕ್ಷರಾಗಿ ಮಾದೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನೂತನ ಅಧ್ಯಕ್ಷ ಕೆ.ಎಸ್.ನಾಗರಾಜ್ ಮಾತನಾಡಿ, ಸರ್ಕಾರದಿಂದ ಸಿಗುವ ಎಲ್ಲಾ ರೀತಿಯ ಸೌಲಭ್ಯಗಳನ್ನು ರೈತರಿಗೆ ತಲುಪಿಸಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ. ಇಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ರೈತರ ಪರ ಕೆಲಸ ಮಾಡಲಿದ್ದು, ನಿಮ್ಮೆಲ್ಲರ ಸಹಕಾರ ಇರಲಿ. ಕೆಸ್ತೂರು ಸಹಕಾರ ಸಂಘವನ್ನು ಮಾದರಿಯಾಗಿಸುವ ಗುರಿ ಹೊಂದಿದ್ದೇನೆ ಎಂದರು.

ಉಪಾಧ್ಯಕ್ಷ ಮಾದೇಶ್ ಮಾತನಾಡಿ, ಅಗರದಲ್ಲಿರುವ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘ ಕೆಸ್ತೂರಿನಲ್ಲಿತ್ತು. ಅಗರ ಹೋಬಳಿಯಾದ ಬಳಿಕ ಇಲ್ಲಿನ ಸಂಘ ಅಲ್ಲಿಗೆ ವರ್ಗಾವಣೆಯಾಯಿತು. ಕೆಸ್ತೂರು ಗ್ರಾಪಂ ವ್ಯಾಪ್ತಿಯ ಕಟ್ನವಾಡಿ, ಬಸವಾಪುರ, ಕೆ.ಹೊಸೂರು ರೈತರ ಅನುಕೂಲಕ್ಕಾಗಿ ಕೆಸ್ತೂರಿನಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸ್ಥಾಪಿಸಲಾಗಿದೆ ಎಂದರು.

ಈ ವೇಳೆ ನಿರ್ದೇಶಕರಾದ ಕೆ.ಶಾಂತಮೂರ್ತಿ, ಬಿ.ನಾಗರಾಜು, ಚಂದ್ರ, ಆರ್.ನಾಗರಾಜು, ಎಸ್.ಮಾದಶೆಟ್ಟಿ ಪುಟ್ಟನಂಜಮ್ಮ, ಶಿವನಂಜಮ್ಮ, ಮಲ್ಲೇಗೌಡ, ಆರ್.ಮಾದೇಶ್, ಪಿ.ನಾಗ, ರಿಟರ್ನಿಂಗ್ ಅಧಿಕಾರಿ ಎಸ್.ಸುಭಾಷಿಣಿ, ಮುಖಂಡರಾದ ಬಿ.ಸಿದ್ದರಾಜು, ಡಿ.ನಾಗರಾಜು, ಸಿದ್ದಯ್ಯ ಬಸಪ್ಪಾಚಾರ್, ಸಿ.ಎಂ.ಮಹೇಶ್, ರಂಗಶೆಟ್ಟಿ, ಆರ್.ಕುಮಾರ್, ಮರಯ್ಯ ಇನ್ನಿತರರಿದ್ದರು.

ಒಂದನೇ ಪುಟದಿಂದ

ರಾಜ್ಯದಲ್ಲಿ ಕಟ್ಟೆಚ್ಚರ



ನಿಗಾ ಇಡಲು ಡ್ರೋನ್ ಬಳಸಿಕೊಳ್ಳುವಂತೆಯೂ ತಿಳಿಸಲಾಗಿದೆ. ಖಾಸಗಿಯವರು ಯಾವುದೇ ಕಾರಣಕ್ಕೂ ಈ ದಿನಗಳಲ್ಲಿ ಡ್ರೋನ್‌ಗಳನ್ನು ಬಳಸದಂತೆ ಕಟ್ಟಾದೇಶ ಮಾಡಲಾಗಿದೆ. ಪ್ರತಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಶಾಂತಿ-ಸೌಹಾರ್ದತಾ ಸಭೆಗಳನ್ನು ನಡೆಸಬೇಕು, ಸೂಕ್ಷ್ಮ ಹಾಗೂ ಅತೀಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚುವರಿ ಪೊಲೀಸ್ ಪಡೆ ನಿಯೋಜಿಸುವುದಲ್ಲದೆ, ಹಿರಿಯ ಪೊಲೀಸ್ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಗಸ್ತು ಹೆಚ್ಚಿಸುವಂತೆ ಆದೇಶಿಸಲಾಗಿದೆ.

ಪೊಲೀಸ್ ಪಹರೆ: ರಾಜ್ಯದ ವಿವಿಧ ಜಿಲ್ಲೆಗಳು, ಪಟ್ಟಣಗಳ ಸೂಕ್ಷ್ಮ, ಅತೀಸೂಕ್ಷ್ಮ ಪ್ರದೇಶಗಳು, ಪ್ರಾರ್ಥನಾ ಮಂದಿರಗಳ ಬಳಿ ಹೆಚ್ಚಿನ ಪೊಲೀಸರನ್ನು ನಿಯೋಜಿಸಿ ಭದ್ರತೆಯನ್ನು ಬಿಗಿಗೊಳಿಸಿ, ಪರಿಸ್ಥಿತಿಯ ಮೇಲೆ ಹಿರಿಯ ಪೊಲೀಸ್ ಅಧಿಕಾರಿಗಳು ನಿಗಾ ವಹಿಸಬೇಕು.

ಶಾಂತಿ ಸಭೆ: ಠಾಣೆಗಳ ವ್ಯಾಪ್ತಿಯಲ್ಲಿ ಎಲ್ಲಾ ಧರ್ಮಗಳ ಮುಖಂಡರನ್ನು ಕರೆಸಿ ಶಾಂತಿಪಾಲನಾ ಸಭೆ ನಡೆಸಿ ಶಾಂತಿ, ಸುವ್ಯವಸ್ಥೆ ಕಾಪಾಡುವಂತೆ ಸೂಚಿಸಲಾಗಿದೆ. ತಮ್ಮ ಸಮುದಾಯದ ಮುಖಂಡರಿಗೆ ಸಲಹೆ ನೀಡಿ, ಕಾನೂನು ಬಾಹಿರ ಚಟುವಟಿಕೆಗಳನ್ನು ನಡೆಸುವವರ ಬಗ್ಗೆ ಮಾಹಿತಿ ನೀಡಲು ತಿಳಿಸುವಂತೆಯೂ ಮುಖಂಡರಿಗೆ ಹಿರಿಯ ಅಧಿಕಾರಿಗಳು ಸೂಚಿಸಲಿದ್ದಾರೆ. ಕೋಮು ಸಾಮರಸ್ಯಕ್ಕೆ ಧಕ್ಕೆ ತರುವ ಕೃತ್ಯಗಳ ಬಗ್ಗೆ ಸುಳ್ಳು ಸುದ್ದಿಗಳನ್ನು ಹರಡುವವರ ಮೇಲೆ ಹೆಚ್ಚಿನ ಎಚ್ಚರಿಕೆ ವಹಿಸುವಂತೆ ಸೂಚಿಸಲಾಗಿದೆ.

ಗೃಹ ಸಚಿವರ ಸೂಚನೆ: ಮುಖ್ಯಮಂತ್ರಿ ಅವರ ಸೂಚನೆ ಹಿನ್ನೆಲೆಯಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು, ಪೊಲೀಸ್ ಕಮಿಷನರ್ಸ್ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠರಿಗೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಎಚ್ಚರ ವಹಿಸುವಂತೆ ಆದೇಶಿಸಿದ್ದಾರೆ. ರಾಮಲಲ್ಲಾ ಪ್ರಾಣ ಪ್ರತಿಷ್ಠೆ ಸಂದರ್ಭದಲ್ಲಿ ರಾಜ್ಯದಲ್ಲೂ ಪೂಜೆ-ಪುನಸ್ಕಾರಗಳು ನಡೆಯುತ್ತವೆ. ಇದು ಸೂಕ್ಷ್ಮ ವಿಚಾರವಾಗಿದ್ದು, ಕಾನೂನುಬಾಹಿರ ಚಟುವಟಿಕೆಗಳಿಗೆ ಆಸ್ಪದ ನೀಡದಂತೆ ಕ್ರಮ ಕೈಗೊಳ್ಳಿ ಎಂದಿದ್ದಾರೆ.

ನಾಳೆ ಪೊಲೀಸ್ ಹಿರಿಯ ಅಧಿಕಾರಿಗಳು, ಜಿಲ್ಲಾಡಳಿತದ ಜೊತೆಗೆ ಈ ಸಂಬಂಧ ಚರ್ಚೆ ನಡೆಸಿ ಕೆಲವು ಸಲಹೆ-ಸೂಚನೆಗಳನ್ನು ನೀಡಲಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ. ಕಾಂಗ್ರೆಸ್‌ನ ಹಿರಿಯ ನಾಯಕ ಬಿ.ಕೆ ಹರಿಪ್ರಸಾದ್ ಅವರ ಗೋಧ್ರಾ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಿದ ಕೇಂದ್ರ ಸರ್ಕಾರ, ಕರ್ನಾಟಕದಲ್ಲಿ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳುವಂತೆ ನೀಡಿದ ಸೂಚನೆ ಹಿನ್ನೆಲೆಯಲ್ಲಿ ರಾಜ್ಯ ಗೃಹ ಸಚಿವಾಲಯ ಪೊಲೀಸ್ ಸಿಬ್ಬಂದಿಗೆ ಆದೇಶ ರವಾನಿಸಿದೆ.

ಪರಿಶೀಲನೆಗೆ ಸಮಿತಿ ರಚಿಸಿದ ಕೇಂದ್ರ

ಬೇಡಿಕೆಯನ್ನು ಈಡೇರಿಸಬೇಕೆಂಬ ಪ್ರಾಮಾಣಿಕ ಉದ್ದೇಶ ಕೇಂದ್ರ ಸರ್ಕಾರಕ್ಕೆ ಇದ್ದರೆ ಸಂವಿಧಾನ 341ನೇ ಪರಿಚ್ಛೇದಕ್ಕೆ ತಿದ್ದುಪಡಿ ಮಾಡುವ ಮಸೂದೆಯನ್ನು ಸಂಸತ್‌ನಲ್ಲಿ ಮಂಡಿಸಿ ಅಂಗೀಕಾರ ಪಡೆಯಬೇಕು ಮತ್ತು ಶೀಘ್ರವಾಗಿ ಒಳಮೀಸಲಾತಿಯನ್ನು ಜಾರಿಗೆ ತರಬೇಕು ಎಂದು ಒತ್ತಾಯಿಸಿದ್ದಾರೆ. ಎಷ್ಟೇ ಉನ್ನತ ಮಟ್ಟದ ಸಮಿತಿಗಳನ್ನು ರಚಿಸಿದರೂ ಅವುಗಳು ಸಂವಿಧಾನವನ್ನು ಮೀರಿ ಯಾವ ಶಿಫಾರಸನ್ನೂ ಮಾಡಲು ಸಾಧ್ಯವೇ ಇಲ್ಲ. ಸಂವಿಧಾನದ ಪರಿಚ್ಛೇದ 341(1) ಮತ್ತು (2)ರ ಪ್ರಕಾರ ಪರಿಶಿಷ್ಟ ಜಾತಿಯ ಪಟ್ಟಿಗೆ ಹೊಸ ಜಾತಿಗಳನ್ನು ಸೇರಿಸುವುದಾಗಲಿ ಇಲ್ಲವೇ ಯಾವುದಾದರೂ ಜಾತಿಯನ್ನು ಹೊರಗೆ ತೆಗೆಯಲು ಸಂವಿಧಾನಕ್ಕೆ ತಿದ್ದುಪಡಿ ಅಗತ್ಯವಾಗಿದೆ ಎನ್ನುವುದು ಸಂವಿಧಾನದ ಬಗ್ಗೆ ಸಾಮಾನ್ಯ ಜ್ಞಾನ ಹೊಂದಿದವರಿಗೆ ತಿಳಿದಿರುವ ಸರಳ ಸತ್ಯ.

ಸಾಮಾಜಿಕ ಜಾಲತಾಣಗಳಿಗೆ ಕೇಂದ್ರ ಸೂಚನೆ

ಇದು ಕೋಮು ಸೌಹಾರ್ದತೆ ಮತ್ತು ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆ ತರುತ್ತದೆ. ರಾಮ್ ಲಲ್ಲಾ ವಿಗ್ರಹದ ಪ್ರತಿಷ್ಠಾಪನೆ ಸಮಾರಂಭದಲ್ಲಿ ಪ್ರಧಾನಿ ಮೋದಿ ಮತ್ತು ಹಲವಾರು ಗಣ್ಯರು ಭಾಗವಹಿಸಲಿದ್ದಾರೆ. ಪತ್ರಿಕೆಗಳು, ಖಾಸಗಿ ಟಿವಿ ಚಾನೆಲ್‌ಗಳು ಮತ್ತು ಡಿಜಿಟಲ್ ಮಾಧ್ಯಮದಲ್ಲಿ ಸುದ್ದಿ ಮತ್ತು ಪ್ರಚಲಿತ ವಿದ್ಯಮಾನಗಳ ಪ್ರಕಾಶಕರು ಸುಳ್ಳು ಅಥವಾ ತಿರುಚಿದ ಇಲ್ಲವೇ ದೇಶದಲ್ಲಿ ಕೋಮು ಸೌಹಾರ್ದತೆ ಅಥವಾ ಸಾರ್ವಜನಿಕ ಸುವ್ಯವಸ್ಥೆಗೆ ಭಂಗ ತರುವ ಯಾವುದೇ ವಿಷಯವನ್ನು ಪ್ರಕಟಿಸುವುದು ಮತ್ತು ಪ್ರಸಾರ ಮಾಡಬಾರದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವಂಚಿಸಿದ ಮೊಮ್ಮಗ ಜೈಲು ಪಾಲು!

ಅಭಿಲಾಷ್ ನಂಜು ಮಳಿಗೆಯಲ್ಲಿ ನಡೆಸುತ್ತಿದ್ದ ಶ್ರೀ ಚಾಮುಂಡೇಶ್ವರಿ ಡಿಸ್ಟ್ರಿಬ್ಯೂಟರ್ಸ್ ಗೋದಾಮು ಬಳಿ ನಾವಿಬ್ಬರೂ ಹೋಗಿ ಹಣ ಕೇಳಿದಾಗ ಅಭಿಲಾಷ್ ಮತ್ತು ಅವನ ತಂದೆ (ಅಳಿಮಯ್ಯ) ಟಿ.ಸಿ.ನಾಗರಾಜು ಇಬ್ಬರೂ ಸೇರಿಕೊಂಡು ನಮಗೆ ಅವಾಚ್ಯ ಶಬ್ಧಗಳಿಂದ ಬೈದು, ಹಲ್ಲೆ ಮಾಡಿದರು. ನಿಮಗೆ ಯಾವುದೇ ಹಣ ಕೊಡಬೇಕಾ ಗಿಲ್ಲ ಎಂದು ಹೇಳಿ, ನಿಂದಿಸಿದರು ಎಂದು ವೃದ್ಧ ದಂಪತಿ ದೂರಿದ್ದಾರೆ.

ಮತ್ತೆ ಹಣ ಕೇಳಿಕೊಂಡು ಬಂದರೆ ನಿಮ್ಮನ್ನು ಮುಗಿಸಿಬಿಡುತ್ತೇವೆಂದು ಬೆದರಿಕೆ ಹಾಕಿದರು ಎಂದು ವಯೋವೃದ್ಧ ದಂಪತಿ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿದ್ದ ಲಕ್ಷ್ಮೀ ಪುರಂ ಠಾಣೆ ಇನ್ಸ್‌ಪೆಕ್ಟರ್ ರವಿಶಂಕರ್, ಅಭಿಲಾಷ್‌ನನ್ನು ಬಂಧಿಸಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದು, ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ತಲೆಮರೆಸಿಕೊಂಡಿರುವ ಎರಡನೇ ಆರೋಪಿ ಅಳಿಯನ ಪತ್ತೆಗೆ ಪೊಲೀಸರು ಶೋಧ ನಡೆಸುತ್ತಿದ್ದಾರೆ. ತಾವೇ ಬೆಳೆಸಿದ ಮೊಮ್ಮಗನನ್ನು ಜೈಲಿಗೆ ಕಳಿಸುವ ಅನಿವಾರ್ಯ ಸಂದರ್ಭ ಸೃಷ್ಟಿಯಾಗಿದ್ದಕ್ಕೆ ಹಿರಿಯ ಜೀವಗಳು ನೊಂದುಕೊಂಡಿವೆ. ಇಲ್ಲಿ ಸಂಬಂಧಕ್ಕೆ ಬೆಲೆಯೇ ಇಲ್ಲದಂತಾಗಿದ್ದು, ಹಣವೇ ಈಗ ಪ್ರಧಾನವಾಗಿದೆ.

ಶಿಲಾ ಸ್ಥಳದಲ್ಲಿ ಶ್ರೀರಾಮಮಂದಿರ

ಎಂದು ಜಿ.ಟಿ. ದೇವೇಗೌಡರು ತಿಳಿಸಿದರು. ಕ್ಷೇತ್ರದ ಜನರ ಪರವಾಗಿ ನಾನೂ ಸಹ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಶ್ರೀರಾಮನ ಪರಮ ಭಕ್ತರಾಗಿರುವ ನರೇಂದ್ರ ಮೋದಿ ಅವರು ಕೆಲ ತಿಂಗಳ ಹಿಂದೆ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ, ಅಧಿದೇವತೆ ತಾಯಿ ಶ್ರೀ ಚಾಮುಂಡೇಶ್ವರಿ ದೇವಿಯ ದರ್ಶನ ಮಾಡಿ, ಆಶೀರ್ವಾದ ಪಡೆದಿದ್ದರು. ದೇವಿಯ ಕೃಪೆಯಿಂದಲೇ ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯಲ್ಲಿ ರಾಮನ ಮೂರ್ತಿಯ ಶಿಲೆ ದೊರೆತಿರುವುದು ನಮ್ಮ ಸೌಭಾಗ್ಯ ಎಂದು ಅವರು ಭಾವಪರವಶರಾಗಿ ನುಡಿದರು.

> "ನಮ್ಮ ಶಾಸಕರಾದ ಜಿ.ಟಿ. ದೇವೇಗೌಡರು, ಬಾಲರಾಮನ ಶಿಲೆ ಸಿಕ್ಕ ನಮ್ಮ ಭೂಮಿಯಲ್ಲಿ ರಾಮಮಂದಿರ ನಿರ್ಮಾಣ ಮಾಡಲು ನಿರ್ಧರಿಸಿರುವುದು ಅತ್ಯಂತ ಸಂತೋಷದ ವಿಚಾರ. ನಮ್ಮ ಪೂರ್ಣ ಒಪ್ಪಿಗೆ ಇದೆ.–ರಾಮದಾಸ್, ಹಾರೋಹಳ್ಳಿ

ಸೋಮವಾರ (ಜ.22) ಬೆಳಗ್ಗೆ 6ರಿಂದ 8 ಗಂಟೆವರೆಗೆ ಶಿಲೆ ಸಿಕ್ಕಿದ ಹಾರೋಹಳ್ಳಿಯ ಜಮೀನಿನಲ್ಲಿ ಶ್ರೀರಾಮಮಂದಿರ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಲಿದ್ದು, ಧಾರ್ಮಿಕ ಕೈಂಕರ್ಯ, ಧ್ಯಾನ, ಭಜನೆ, ಹೋಮ, ಹವನಾದಿಗಳೂ ನಡೆಯಲಿವೆ. ಇಲ್ಲಿ ಪ್ರತಿಷ್ಠಾಪಿಸುವ ರಾಮನ ಮೂರ್ತಿಯನ್ನೂ ಶಿಲ್ಪಿ ಅರುಣ್ ಯೋಗಿರಾಜ್ ಅವರಿಂದಲೇ ಕೆತ್ತನೆ ಮಾಡಿಸಲಾಗುವುದು ಎಂದರು. ಹಾರೋಹಳ್ಳಿ ಸೇರಿದಂತೆ ಸುತ್ತಮುತ್ತಲ ಗ್ರಾಮಗಳು, ದಾನಿಗಳಿಂದ ದೇಣಿಗೆ ಸಂಗ್ರಹಿಸಿ ಶ್ರೀರಾಮ ಮಂದಿರ ನಿರ್ಮಿಸಿ ನಂತರ ಈ ಸ್ಥಳವನ್ನು ಪ್ರಮುಖ ಧಾರ್ಮಿಕ ಕ್ಷೇತ್ರವನ್ನಾಗಿ ಮಾಡುವುದು ತಮ್ಮ ಉದ್ದೇಶವಾಗಿದ್ದು, ಈ ಪವಿತ್ರ ದೇವರ ಕೆಲಸಕ್ಕೆ ಸರ್ವರೂ ಸಹಕರಿಸಬೇಕೆಂದೂ ಅವರು ಮನವಿ ಮಾಡಿದರು. ಪತ್ರಿಕಾ ಗೋಷ್ಠಿಯಲ್ಲಿ ಜಮೀನಿನ ಮಾಲೀಕರಾದ ರಾಮದಾಸ ಹಾಗೂ ಶಿಲೆ ಹೊರತೆಗೆಯುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಶ್ರೀನಿವಾಸ ಹಾಗೂ ಇತರರು ಉಪಸ್ಥಿತರಿದ್ದರು.

ಶಿಲೆ ದೊರೆತಿರುವುದು ಪೂರ್ವಜನ್ಮದ ಪುಣ್ಯ

ಮಾಡಿಕೊಡುವಂತೆ ಹೇಳಿದ್ದರಿಂದ ನಾವು ಜೆಸಿಬಿಯಲ್ಲಿ ಕೆಲಸ ಆರಂಭಿಸಿದ್ದೆವು ಎಂದರು. ದೊಡ್ಡ ಕಲ್ಲನ್ನು ಮಾರ್ಕಿಂಗ್ ಮಾಡಿ ಡಾಟ್, ಐರನ್ ಇಲ್ಲದಂತೆ ಹೊರತೆಗೆಯಲಾಯಿತು. ನಂತರ 3 ಭಾಗ ಮಾಡಿ ಅದನ್ನು ಒಂದೆಡೆ ಇರಿಸಲಾಗಿತ್ತು. ಅದು 10 ಅಡಿ ಉದ್ದ ಆಗಿದ್ದರಿಂದ ಪರಿಶೀಲಿಸಿ ಕ್ರಾಸ್ ಆಗದಂತೆ ಇಟಿದ್ದೆವು. ಆ ವೇಳೆ ಮಾನಯ್ಯ ಬಡೀಗಾರ್, ಸುರೇಂದ್ರ, ಶಿಲ್ಪಿ ವಿಶ್ವಕರ್ಮ, ಗೋಪಾಲ್ ಅವರು ರಾಮಲಲ್ಲಾ ಮೂರ್ತಿಗೆ ಸೂಕ್ತವಾದ ಕಲ್ಲು ಹುಡುಕಿಕೊಡಿ ಎಂದು ಹೇಳಿದ್ದರು. ಆಗ ನಾವು ಎತ್ತಿ ಇಟ್ಟಿದ್ದ ಕಲ್ಲನ್ನು ತೋರಿಸಿದಾಗ ಅವರು ಒಪ್ಪಿಕೊಂಡರು ಎಂದು ಶ್ರೀನಿವಾಸ ಹೇಳಿದರು.

ಹತ್ತೂವರೆ ಅಡಿ, ಒಂಭತ್ತು ಅಡಿಯ ಮೂರು ಕಲ್ಲುಗಳನ್ನು ತೆಗೆದುಕೊಂಡು ಹೋದ ಅವರು, ತಜ್ಞರಿಂದ ಪರಿಶೀಲನೆ ಮಾಡಿಸಿದ್ದಾರೆ. ನಮ್ಮದು ಶೇ. 85ರಷ್ಟು ಗ್ರೇಡ್ ಹೊಂದಿರುವ ಶಿಲೆಯಾಗಿದ್ದರಿಂದ ರಾಮಲಲ್ಲಾ ವಿಗ್ರಹಕ್ಕೆ ಆಯ್ಕೆಯಾಗಿದೆ ಎಂಬ ವಿಚಾರವನ್ನು ಸುರೇಂದ್ರ ಶಿಲ್ಪಿ ವಿಶ್ವಕರ್ಮ ಹೇಳಿದಾಗ ನಮ್ಮ ವಂಶ ಈ ವೃತ್ತಿ ಮಾಡಿಕೊಂಡು ಬಂದಿದ್ದಕ್ಕೂ ಸಾರ್ಥಕವಾಯಿತು ಎನಿಸಿತು ಎಂದು ತಿಳಿಸಿದರು.

ಅಯೋಧ್ಯೆಯಿಂದ ಆಗಮಿಸಿದ್ದ ಪೂಜಾರ ಮತ್ತು ತಂಡದ ಸದಸ್ಯರು, ನಮ್ಮೊಂದಿಗೆ ಮಾತನಾಡಿ ಕವರ್‌ನಲ್ಲಿ ಮಣ್ಣು ತುಂಬಿಕೊಂಡು ಹೋಗಿದ್ದರು. ಅಲ್ಲಿ ಪೂಜೆ ನೆರವೇರಿಸುವ ದಿನ ನೀವು ಭೂಮಿ ಬಳಿ ಇರುವಂತೆ ತಿಳಿಸಿದ್ದರಿಂದ ಅಂದು ನಾವು ಪೂಜೆ ದಿನ ಭಾಗಿಯಾಗಿದ್ದೆವು. ಭರತ, ಲಕ್ಷ್ಮಣ, ಶತ್ರುಘ್ನ ಮೂರ್ತಿ ಕೆತ್ತನೆಗೂ ಮೂರು ಕಲ್ಲುಗಳನ್ನು ತೆಗೆದುಕೊಂಡು ಹೋಗಿದ್ದರು ಎಂದ ಶ್ರೀನಿವಾಸ, ಕಡೆಗೆ ನಮ್ಮ ಕಲ್ಲಿನಲ್ಲಿ ಶಿಲ್ಪಿ ಅರುಣ್ ಯೋಗಿ ಅವರು ಕೆತ್ತಿದ ರಾಮಲಲ್ಲಾ ಮೂರ್ತಿಯೇ ಪ್ರತಿಷ್ಠಾಪನೆಗೆ ಆಯ್ಕೆಯಾಗಿರುವುದು ತುಂಬಾ ಸಂತೋಷವಾಯಿತು ಎಂದು ತಿಳಿಸಿದರು.

ಕರ್ನಾಟಕ-ಗೋವಾ ರಣಜಿ ಪಂದ್ಯ

ಗೋವಾ 321ಕ್ಕೆ ಆಲ್‌ಔಟ್, ಕರ್ನಾಟಕ 4 ವಿಕೆಟ್‌ಗೆ 251

ಕರ್ನಾಟಕದ ಮಯಾಂಕ್ ಅಗರ್‌ವಾಲ್, ದೇವದತ್ತ ಪಡಿಕಲ್ ಶತಕ

ಮೈಸೂರು,ಜ.20(ಎಂಟಿವೈ)– ನಾಯಕ ಮಯಾಂಕ್ ಅಗರ್‌ವಾಲ್(114) ಹಾಗೂ ದೇವದತ್ತ ಪಡಿಕಲ್(101) ಅವರ ಭರ್ಜರಿ ಶತಕದ ನೆರವಿನಿಂದ ರಣಜಿ ಪಂದ್ಯದಲ್ಲಿ ಕರ್ನಾಟಕ ತಂಡ ಗೋವಾ ವಿರುದ್ಧ ಭರ್ಜರಿ ಬ್ಯಾಟಿಂಗ್ ಪ್ರದರ್ಶನ ನೀಡಿದ್ದು, ಪಂದ್ಯದ ಎರಡನೇ ದಿನದ ಅಂತ್ಯಕ್ಕೆ 64 ಓವರ್‌ನಲ್ಲಿ 4 ವಿಕೆಟ್ ಕಳೆದುಕೊಂಡು 251 ರನ್ ಗಳಿಸಿ ದಿನದ ಗೌರವಕ್ಕೆ ಪಾತ್ರವಾಯಿತು.

ಮಾನಸ ಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮೈದಾನದಲ್ಲಿ ಶುಕ್ರವಾರ ಆರಂಭವಾದ ರಣಜಿ ಪಂದ್ಯಾವಳಿಯ ಕರ್ನಾಟಕ ಮತ್ತು ಗೋವಾ ನಡುವಿನ ಪಂದ್ಯದ ಎರಡನೇ ದಿನವಾದ ಶನಿವಾರ ಕರ್ನಾಟಕ ತಂಡದ ಬ್ಯಾಟ್ಸ್‌ಮನ್‌ಗಳು ಗೋವಾ ತಂಡದ ಬೌಲರ್‌ಗಳ ಬೆವರಿಳಿಸಿದರು. ಗೋವಾ ತಂಡ ಭೋಜನ ವಿರಾಮಕ್ಕೆ ಇನ್ನು ಒಂದು ಗಂಟೆ ಇರುವಷ್ಟರಲ್ಲೇ 110.1 ಓವರ್‌ನಲ್ಲಿ 321 ರನ್ ಗಳಿಸಿ ಆಲೌಟ್ ಆಯಿತು. ಬಳಿಕ ಮೊದಲ ಇನ್ನಿಂಗ್ಸ್‌ನಲ್ಲಿ ಗೋವಾ ನೀಡಿದ 321 ರನ್‌ಗಳ ಗುರಿ ಬೆನ್ನತ್ತಿದ ಕರ್ನಾಟಕ ತಂಡ ಆತ್ಮವಿಶ್ವಾಸದಿಂದ ಇನ್ನಿಂಗ್ಸ್ ಆರಂಭಿಸಿತು. ಈ ವೇಳೆ ಕರ್ನಾಟಕದ ಬ್ಯಾಟ್ಸ್‌ಮನ್‌ಗಳು ಗೋವಾ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದರು.

ಕರ್ನಾಟಕದ ಆರಂಭಿಕ ಆಟಗಾರ ನಿಶ್ಚಲ್ ಡಿ. ಹಾಗೂ ನಾಯಕ ಮಯಾಂಕ್ ಅಗರ್‌ವಾಲ್ ಉತ್ತಮ ಆರಂಭ ನೀಡುವ ಪ್ರಯತ್ನ ಮಾಡಿದರು. ಈ ವೇಳೆ 20 ಎಸೆತಗಳಲ್ಲಿ 16 ರನ್ ಗಳಿಸಿದ್ದ ನಿಶ್ಚಲ್, ತಂಡದ ಮೊತ್ತ 27ರನ್ ಆಗಿದ್ದಾಗ ದರ್ಶನ್ ಮಿಶಲ್ ಬೌಲಿಂಗ್‌ನಲ್ಲಿ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದು ಮೊದಲ ವಿಕೆಟ್ ಒಪ್ಪಿಸಿದರು. ಬಳಿಕ ಮಯಾಂಕ್ ಅಗರ್‌ವಾಲ್ ಜೊತೆಗೂಡಿದ ದೇವದತ್ತ ಪಡಿಕಲ್ ಉತ್ತಮ ಆಟ ಪ್ರದರ್ಶಿಸಿದರು.



ಮಯಾಂಕ್ ಅಗರ್‌ವಾಲ್, ದೇವದತ್ತ ಪಡಿಕಲ್ ಜುಗಲ್‌ಬಂದಿ ಆಟ

ಉಭಯ ಆಟಗಾರರು ಜುಗಲ್‌ಬಂದಿಯಂತೆ ಬ್ಯಾಟ್ ಬೀಸುತ್ತಾ ಮುರಿಯದ ಎರಡನೇ ವಿಕೆಟ್‌ಗೆ 209 ರನ್ ಜೊತೆಯಾಟ ನೀಡಿದರು. ಈ ಇಬ್ಬರು ಬ್ಯಾಟ್ಸ್‌ಮನ್‌ಗಳು ಗೋವಾದ ಐವರು ಬೌಲರ್‌ಗಳನ್ನು ದಂಡಿಸಿದರು.

ಭರ್ಜರಿ ಬ್ಯಾಟಿಂಗ್ ಪ್ರದರ್ಶನ ನೀಡುತ್ತಿದ್ದ ದೇವದತ್ತ ಪಡಿಕಲ್ 142 ಎಸೆತಗಳಲ್ಲಿ 13 ಬೌಂಡರಿಯುಳ್ಳ 101 ರನ್ ಗಳಿಸಿದ್ದಾಗ 54.4ನೇ ಓವರ್‌ನಲ್ಲಿ ಮೋಹಿತ್ ರೆಡ್ಕರ್ ಬೌಲಿಂಗ್‌ನಲ್ಲಿ ದರ್ಶನ್ ಮಿಶಲ್ ಹಿಡಿದ ಕ್ಯಾಚ್‌ಗೆ ವಿಕೆಟ್ ಒಪ್ಪಿಸಿ ನಿರ್ಗಮಿಸಿದರು. ಈ ವೇಳೆ ಕರ್ನಾಟಕ ತಂಡ 236 ರನ್ ಕಲೆಹಾಕಿತ್ತು. ಎರಡನೇ ವಿಕೆಟ್ ಪತನದ ನಂತರ ಆರಂಭಿಕ ಆಟಗಾರ, ನಾಯಕ ಮಯಾಂಕ್ ಅಗರ್‌ವಾಲ್ 180 ಎಸೆತದಲ್ಲಿ 10 ಬೌಂಡರಿಯುಳ್ಳ 114ರನ್ ಗಳಿಸಿದ್ದಾಗ ದರ್ಶನ್ ಮಿಶಲ್ ಬೌಲಿಂಗ್‌ನಲ್ಲಿ ಇಶಾನ್ ಗಡೇಕರ್‌ಗೆ ಕ್ಯಾಚ್ ನೀಡಿ ಔಟಾದರು. ಆಗ ತಂಡದ ಮೊತ್ತ 57.2 ಓವರ್‌ನಲ್ಲಿ 3 ವಿಕೆಟ್ ನಷ್ಟಕ್ಕೆ 244ರನ್ ದಾಖಲಾಗಿತ್ತು.

ಇಬ್ಬರು ಶತಕಧಾರಿಗಳು ಒಬ್ಬರ ಹಿಂದೆ ಮತ್ತೊಬ್ಬರು ಪೆವಿಲಿಯನ್ ಸೇರಿದ ಬಳಿಕ ಕರ್ನಾಟಕ ತಂಡದ ರನ್ ಗಳಿಕೆ ಕುಸಿಯಿತು. 4.09ರ ಸರಾಸರಿಯಲ್ಲಿ ರನ್ ಗಳಿಸುತ್ತಿದ್ದ ಕರ್ನಾಟಕದ ಆಟಗಾರರು ರಕ್ಷಣಾತ್ಮಕ ಆಟದ ಮೊರೆ ಹೋದರು. ಈ ವೇಳೆ ಐದನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದಿದ್ದ ರೋಹಿತ್ ಕುಮಾರ್ ಕೇವಲ 2 ರನ್ ಗಳಿಸಿದ್ದಾಗ ಮೋಹಿತ್ ರೆಡ್ಕರ್ ಬೌಲಿಂಗ್‌ನಲ್ಲಿ ಸಮರ್ ದುಬಾಂಶಿಗೆ ಕ್ಯಾಚ್ ನೀಡಿ ನಿರ್ಗಮಿಸಿದರು. ಪಂದ್ಯದ ಎರಡನೇ ದಿನದ ಅಂತ್ಯಕ್ಕೆ ಕರ್ನಾಟಕ ತಂಡ 64 ಓವರ್‌ನಲ್ಲಿ 4 ವಿಕೆಟ್ ಕಳೆದುಕೊಂಡು 251 ರನ್ ಗಳಿಸಿದ್ದು, ಗೋವಾದ ಮೊದಲ ಇನ್ನಿಂಗ್ಸ್ ಸರಿದೂಗಿಸಲು ಇನ್ನು 70 ರನ್ ಕಲೆ ಹಾಕಬೇಕಿದೆ. ಕ್ರೀಸ್‌ನಲ್ಲಿ ನಾಲ್ಕನೇ ಕ್ರಮಾಂಕದ ಆಟಗಾರ ಎಸ್.ಜೆ.ನಿಕಿನ್ ಜೋಸ್ ಅಜೇಯ 3 ರನ್ ಹಾಗೂ ವಿಕೆಟ್ ಕೀಪರ್ ಎಸ್.ಶರತ್ ಅಜೇಯರಾಗಿ ಯಾವುದೇ ರನ್ ಗಳಿಸದೇ ಕ್ರೀಸ್ ಕಾಯ್ದುಕೊಂಡಿದ್ದಾರೆ.

ಗೋವಾ ತಂಡದ ಪರವಾಗಿ ದರ್ಶನ್ ಮಿಶಲ್ 24 ಓವರ್‌ನಲ್ಲಿ 68ರನ್ ನೀಡಿ 2 ವಿಕೆಟ್, ಮೋಹಿತ್ ರೆಡ್ಕರ್ 18 ಓವರ್‌ನಲ್ಲಿ 65 ರನ್ ನೀಡಿ 2 ವಿಕೆಟ್ ಪಡೆದರು. ಅರ್ಜುನ್ ತೆಂಡುಲ್ಕರ್ 8 ಓವರ್‌ನಲ್ಲಿ 36 ರನ್, ಹೇರಂಬ್ ಪರಾಬ್ 5 ಓವರ್‌ನಲ್ಲಿ 26ರನ್, ಫೆಲಿಕ್ಸ್ ಅಲೆಮೊ 9 ಓವರ್‌ನಲ್ಲಿ 45 ರನ್ ನೀಡಿ ವಿಕೆಟ್ ಪಡೆಯುವಲ್ಲಿ ವಿಫಲರಾದರು.

ಗೋವಾದ ಮೊದಲ ಇನ್ನಿಂಗ್ಸ್ ಅಂತ್ಯ: ಪಂದ್ಯದ ಮೊದಲ ದಿನವಾದ ಶುಕ್ರವಾರ ಗೋವಾ 8 ವಿಕೆಟ್ ಕಳೆದುಕೊಂಡು 228ರನ್ ಗಳಿಸಿ, ಇಂದು ಇನ್ನಿಂಗ್ಸ್ ಆರಂಭಿಸಿತು. ಮೊದಲ ದಿನ ಅರ್ಜುನ್ ತೆಂಡುಲ್ಕರ್ 45 ಎಸೆತ ಎದುರಿಸಿ ಅಜೇಯ 10 ರನ್, 10ನೇ ಕ್ರಮಾಂಕ ಆಟಗಾರ ಹೇರಂಬ್ ಪರಾಬ್ 6 ರನ್‌ಗಳಿಸಿ ಕ್ರೀಸ್ ಕಾಯ್ದುಕೊಂಡು, ಇಂದು ಆಟ ಮುಂದುವರೆಸಿದರು. ಈ ಇಬ್ಬರು ಆಟಗಾರರು ಗೋವಾ ತಂಡಕ್ಕೆ ನೆರವಾದರು. ಮುರಿಯದ 9ನೇ ವಿಕೆಟ್‌ಗೆ ಈ ಇಬ್ಬರು 93 ರನ್ ಕೊಡುಗೆ ನೀಡಿದರು. ಈ ಇಬ್ಬರೂ ಅರ್ಧ ಶತಕ ಸಿಡಿಸಿದ್ದು, ತಂಡವನ್ನು 300ರ ಗಡಿ ದಾಟಿಸಿತು. 81 ಎಸೆತದಲ್ಲಿ 8 ಬೌಂಡರಿ, 1 ಸಿಕ್ಸರ್ ನೆರವಿನಿಂದ 53 ರನ್‌ಗಳಿಸಿದ್ದ ಹೇರಂಬ್ ಪರಾಬ್ ತಂಡದ ಮೊತ್ತ 314 ರನ್ ಆಗಿದ್ದಾಗ ವೆಂಕಟೇಶ್ ಬೌಲಿಂಗ್‌ನಲ್ಲಿ ಬೌಲ್ಡ್ ಆದರು. ಆ ನಂತರ 11ನೇ ಕ್ರಮಾಂಕದ ಆಟಗಾರ ಫೆಲಿಕ್ಸ್ ಅಲೆಮೊ(ಅಜೇಯ 3 ರನ್) ಜೊತೆ ಆಟ ಮುಂದುವರೆಸುವ ಪ್ರಯತ್ನ ಮಾಡಿದ ಅರ್ಜುನ್ ತೆಂಡುಲ್ಕರ್ 112 ಎಸೆತದಲ್ಲಿ 3 ಬೌಂಡರಿ, 1 ಸಿಕ್ಸರ್ ನೆರವಿನಿಂದ 52 ರನ್ ಗಳಿಸಿದ್ದಾಗ ವೆಂಕಟೇಶ್ ಬೌಲಿಂಗ್‌ನಲ್ಲಿ ಶರತ್‌ಗೆ ಕ್ಯಾಚ್ ನೀಡಿ ಕೊನೆಯ ವಿಕೆಟ್ ಒಪ್ಪಿಸಿದರು. ಅಂತಿಮವಾಗಿ ಗೋವಾ ತಂಡ 110.1 ಓವರ್‌ನಲ್ಲಿ 321 ರನ್ ದಾಖಲಿಸಿ ಔಟಾಯಿತು.

ಕರ್ನಾಟಕದ ಪರ ವಿ.ವೈಶಾಕ್ 25 ಓವರ್‌ನಲ್ಲಿ 76 ರನ್ ನೀಡಿ 3 ವಿಕೆಟ್ ಪಡೆದರೆ, ರೋಹಿತ್‌ಕುಮಾರ್ 29 ಓವರ್‌ನಲ್ಲಿ 90 ರನ್ ನೀಡಿ 3 ವಿಕೆಟ್, ಎಂ.ವೆಂಕಟೇಶ್ 19.1 ಓವರ್‌ನಲ್ಲಿ 41 ರನ್ ನೀಡಿ 3 ವಿಕೆಟ್ ಗಳಿಸಿದರು. ಕೌಶಿಕ್ 26 ಓವರ್‌ನಲ್ಲಿ 49 ರನ್ ನೀಡಿ 1 ವಿಕೆಟ್ ಪಡೆದರು. ಶುಭಂಗ್ ಹೆಗಡೆ 8.1 ಓವರ್‌ನಲ್ಲಿ 28 ರನ್, ಮಯಾಂಕ್ ಅಗರ್‌ವಾಲ್ 2 ಓವರ್‌ನಲ್ಲಿ 13 ರನ್, ಎಸ್.ಜೆ. ನಿಕಿನ್ ಜೋಸ್ 0.5 ಓವರ್‌ನಲ್ಲಿ 8 ರನ್ ನೀಡಿ ಗಮನ ಸೆಳೆದರು.

ಸಂಕ್ಷಿಪ್ತ ಸ್ಕೋರ್

ಗೋವಾ ಮೊದಲ ಇನ್ನಿಂಗ್ಸ್: 110.1 ಓವರ್‌ನಲ್ಲಿ 321 ರನ್‌ಗೆ ಆಲೌಟ್
ಸ್ನೇಹಲ್ ಕೌತಂಕರ್ 83ರನ್, ಹೇರಂಬ್ ಪರಾಬ್ 53 ರನ್, ಅರ್ಜುನ್ ತೆಂಡುಲ್ಕರ್ 52 ರನ್

ಕರ್ನಾಟಕ ಮೊದಲ ಇನ್ನಿಂಗ್ಸ್: ಎರಡನೇ ದಿನದ ಅಂತ್ಯಕ್ಕೆ 64 ಓವರ್‌ನಲ್ಲಿ 4 ವಿಕೆಟ್ ನಷ್ಟಕ್ಕೆ 251 ರನ್
ಮಯಾಂಕ್ ಅಗರ್‌ವಾಲ್ 114 ರನ್, ದೇವದತ್ತ ಪಡಿಕಲ್ 101 ರನ್

ದೇಶದ ಬದಲು ಹಿಂದುತ್ವದ ವಕ್ತಾರರಾಗುತ್ತಿರುವ ಮೋದಿ

ಪ್ರೊ.ಮಹೇಶ್ ಚಂದ್ರಗುರು ಆರೋಪ



ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಪ್ರೊಮಹೇಶ್ ಚಂದ್ರಗುರು ಮಾತನಾಡಿದರು.

ಮೈಸೂರು,ಜ.20(ಜಿಎ)–ಲೋಕಸಭಾ ಚುನಾವಣೆ ಗೆಲ್ಲಲು ರಾಮಮಂದಿರ ಪ್ರತಿಷ್ಠಾಪನೆಯನ್ನು ವೈಭವೀಕರಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ದೇಶದ ವಕ್ತಾರರಾಗುವ ಬದಲು ಹಿಂದುತ್ವದ ವಕ್ತಾರರಾಗುತ್ತಿದ್ದಾರೆ ಎಂದು ಪ್ರಗತಿಪರ ಚಿಂತಕ ಪ್ರೊ. ಮಹೇಶ್ ಚಂದ್ರಗುರು ಆರೋಪಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಯೋಧ್ಯೆ ರಾಮ ಮಂದಿರದ ಪ್ರಾಣಪ್ರತಿಷ್ಠಾಪನೆ ಒಂದು ಹಾಸ್ಯಾಸ್ಪದ ಸಂಗತಿ. ಭಯೋತ್ಪಾದಕರ ದೇವರಾಗಿ ರಾಮನನ್ನು ಬದಲಾಯಿಸಲಾಗಿದೆ. ಕೋಮುವಾದಿ ಮತ್ತು ರಾಜ ಕೀಯವಾದಿಗಳ ಅನೈತಿಕ ಜೊತೆಗಾರಿಕೆಯಿಂದ ಪ್ರಜಾಪ್ರಭುತ್ವ ಸಾಯುತ್ತಿದೆ ಎಂದ ಅವರು, 21ನೇ ಶತಮಾನದಲ್ಲಿ ಅಗತ್ಯವಿರುವುದು ರಾಮರಾಜ್ಯವಲ್ಲ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಭೀಮರಾಜ್ಯ. ಬರುವ ಲೋಕಸಭಾ ಚುನಾವಣೆ ರಾಮ್ ವರ್ಸಸ್ ಭೀಮ್. ಬಿಜೆಪಿಯನ್ನು ಸೋಲಿಸಿ ಪ್ರಗತಿಪರರನ್ನು ಗೆಲ್ಲಿಸುವುದೇ ನಮ್ಮ ಉದ್ದೇಶ ಎಂದರು.

ನ್ಯಾಯಾಲಯದ ತೀರ್ಪನ್ನು ನಾವು ಸ್ವಾಗತಿಸುತ್ತೇವೆ. ರಾಮಮಂದಿರ ನಿರ್ಮಾಣಕ್ಕೆ ಯಾವುದೇ ವಿರೋಧವಿಲ್ಲ. ನಾವು ಹಿಂದೂ ದೇವರನ್ನು ಪೂಜಿಸ ದಿದ್ದರೂ ಗೌರವಿಸುತ್ತೇವೆ. ಅಯೋಧ್ಯೆಯ ರಾಮ ಮಂದಿರ ಕಾಮಗಾರಿ ಪೂರ್ಣ ಗೊಂಡಿಲ್ಲ. ಚುನಾವಣೆ ಉದ್ದೇಶದಿಂದ ಆತುರಾತುರವಾಗಿ ಪ್ರಾಣ ಪ್ರತಿಷ್ಠಾಪನೆ ಮಾಡುತ್ತಿದ್ದಾರೆ. ಈಗಾಗಲೇ ಶಂಕರಾಚಾರ್ಯ ಪೀಠದ ಗುರುಗಳು ಹಾಗೂ ಹಿಂದೂ ಮಹಾಸಭಾ ಕೂಡ ಆತುರದ ಪ್ರಾಣ ಪ್ರತಿಷ್ಠಾಪನೆ ಕುರಿತು ಅಸಮಾಧಾನ ವ್ಯಕ್ತಪಡಿಸಿ, ಪ್ರಾಣ ಪ್ರತಿಷ್ಠಾಪನೆಗೆ ಇದು ಸೂಕ್ತ ಸಮಯವಲ್ಲ ಎಂದು ತಿಳಿಸಿದ್ದಾರೆ. ಸಂಸದ ಪ್ರತಾಪ ಸಿಂಹನಂತಹ ಬುದ್ಧಿ ಬೆಳೆಯದ ಜನರು ಪೂರ್ಣಗೊಳ್ಳದ ದೇವಸ್ಥಾನದ ಉದ್ಘಾಟನೆಯನ್ನು ಬೆಂಬಲಿಸುತ್ತಿರುವುದು ಧರ್ಮ ವಿರೋಧಿಯಲ್ಲವೇ? ಎಂದು ಪ್ರಶ್ನಿಸಿದರು.

ರಾಮಮಂದಿರದಿಂದ ದೇಶದ ಅಭಿವೃದ್ಧಿ ಸಾಧ್ಯವೇ? ಚುನಾವಣೆ ಗೆಲ್ಲಲು ಮಂದಿರ ಪ್ರತಿಷ್ಠಾಪನೆಯನ್ನು ವೈಭವೀಕರಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ಸಾಂವಿಧಾನಿಕ ಕರ್ತವ್ಯ ಮರೆತಿದ್ದು, ಹಿಂದುತ್ವದ ವಕ್ತಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮೌಢ್ಯತೆ ಸ್ಥಾಪಿಸಲು ಹೊರಟಿದ್ದಾರೆ. ರಾಮ ಮಂದಿರ ಉದ್ಘಾಟನೆಯಲ್ಲಿ ಅರಾಜ ಕತೆ ಸೃಷ್ಟಿಸಿ, ಪ್ರಜಾಪ್ರಭುತ್ವದ ಕಗ್ಗೊಲೆ ನಡೆಸಿ ಮತ್ತೊಮ್ಮೆ ದೇಶದ ಅಧಿಕಾರ ಹಿಡಿಯಲು ಸಂಚು ರೂಪಿಸಲಾಗಿದೆ ಎಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ದಲಿತ ವೆಲ್ಫೇರ್ ಟ್ರಸ್ಟ್ ಗೌರವಾಧ್ಯಕ್ಷ ಟಿ.ಎಂ. ಮಹೇಶ್, ಪ್ರಧಾನ ಕಾರ್ಯ ದರ್ಶಿ ಚಿಕ್ಕಂದಾನಿ, ನಿರ್ದೇಶಕರಾದ ನಾಗರಾಜು, ನಂಜುಂಡಸ್ವಾಮಿ, ಸಿದ್ದಸ್ವಾಮಿ ಉಪಸ್ಥಿತರಿದ್ದರು.



ಇತ್ತೀಚೆಗೆ ನಡೆದ ಹಿಂದುಳಿದ ವರ್ಗಗಳ ಸಹಕಾರ ಸಂಘದ ಚುನಾವಣೆಯಲ್ಲಿ ನಿರ್ದೇಶಕರಾಗಿ ಆಯ್ಕೆಯಾದ ಬೆಲವತ್ತ ಶಿವಕುಮಾರ್ ಅವರನ್ನು ದೇವರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಟಿ. ಸುಂದರ್‌ಕುಮಾರ್, ಹೋಟೆಲ್ ಮಾಲೀಕರ ಸಂಘದ ನಿರ್ದೇಶಕರಾದ ಹೇಮಂತ್‌ಕುಮಾರ್, ಕುಳ್ಳೇಗೌಡ, ಟಿ.ಆರ್. ಸುರೇಶ್, ಸಿದ್ದರಾಜು, ಪ್ರಕಾಶ್ ಇತರರು ಅಭಿನಂದಿಸಿದರು.

ಪರೀಕ್ಷೆ ಒಂದು ಹಬ್ಬದಂತೆ ಆಚರಿಸಿ

ಮೈಸೂರು, ಜ.19– 10ನೇ ತರಗತಿ ವಿದ್ಯಾರ್ಥಿಗಳಿಗೆ ಚೇತನ್ ರಾಮ್ ಅವರಿಂದ ಜ.21(ಭಾನುವಾರ) ಮೈಸೂರಿನ ಬೋಗಾದಿಯ ಹರಿ ವಿದ್ಯಾಲಯದಲ್ಲಿ 10ನೇ ತರಗತಿಯ ವಿದ್ಯಾರ್ಥಿಗಳಿಗೆ "ಪರೀಕ್ಷೆ ಒಂದು ಹಬ್ಬ – ಆಚರಿಸಿ" ಉಚಿತ ಕಾರ್ಯಾಗಾರವನ್ನು ಆಯೋಜಿಸಲಾಗಿದೆ. ಸಿಬಿಎಸ್‌ಇ–ಐಸಿಎಸ್‌ಇ ಶಾಲೆಗಳಲ್ಲಿ ಓದುತ್ತಿರುವ 10ನೇ ತರಗತಿ ವಿದ್ಯಾರ್ಥಿಗಳು ಅನುಕೂಲ ಪಡೆದುಕೊಳ್ಳಬಹುದು. ಮಾಹಿತಿಗಾಗಿ ದೂರವಾಣಿ ಸಂಖ್ಯೆ: 9141054735, 9141054736, 9141054737 ಸಂಪರ್ಕಿಸುವುದು.

ರಾಜ್ಯಮಟ್ಟದ ಪುರುಷರ ಹಾಕಿ ಪಂದ್ಯಾವಳಿ

ಮೈಸೂರು, ಬೆಂಗಳೂರು, ಹಾಸನ, ಎಜಿಓಆರ್‌ಸಿ ಸೆಮಿಫೈನಲ್‌ಗೆ



ಹಾಕಿ ಮೈಸೂರು ಅಸೋಸಿಯೇಷನ್ ವತಿಯಿಂದ ಭಾರತೀಯ ಹಾಕಿ ತಂಡದ ಹಿರಿಯ ಆಟಗಾರ ಧನರಾಜ್ ಪಿಳ್ಳೆ ಅವರನ್ನು ಸನ್ಮಾನಿಸಲಾಯಿತು.



ಮೈಸೂರು ವಿಶ್ವವಿದ್ಯಾನಿಲಯದ ಹಾಕಿ ಮೈದಾನದಲ್ಲಿ ನಡೆಯುತ್ತಿರುವ ಹಾಕಿ ಪಂದ್ಯಾವಳಿಯಲ್ಲಿ ಎಜಿಓಆರ್‌ಸಿ ಹಾಗೂ ಬಳ್ಳಾರಿ ತಂಡದ ಆಟಗಾರರು ಸೆಣಸಾಡುತ್ತಿರುವುದು.

ಮೈಸೂರು,ಜ.20(ಎಂಟಿವೈ)– ಹಾಕಿ ಮೈಸೂರು ಅಸೋಸಿಯೇಷನ್ ವತಿಯಿಂದ ನಡೆಯುತ್ತಿರುವ ರಾಜ್ಯಮಟ್ಟದ ಪುರುಷರ ಹಾಕಿ ಪಂದ್ಯಾವಳಿಯ ಸೆಮಿಫೈನಲ್‌ಗೆ ಮೈಸೂರು, ಬೆಂಗಳೂರು, ಹಾಸನ ಹಾಗೂ ಎಜಿಓಆರ್‌ಸಿ ತಂಡಗಳು ಪ್ರವೇಶಿಸಿದವು.

ಮೈಸೂರು ವಿಶ್ವವಿದ್ಯಾನಿಲಯದ ಹಾಕಿ ಮೈದಾನದಲ್ಲಿ ಕಳೆದ ಎರಡು ದಿನಗಳಿಂದ ನಡೆಯುತ್ತಿರುವ 'ಹಾಕಿ ಮೈಸೂರು ಇನ್ವಿಟೇಷನ್ ಕಪ್–2024' ರಾಜ್ಯಮಟ್ಟದ ಪುರುಷರ ಹಾಕಿ ಪಂದ್ಯಾವಳಿಯಲ್ಲಿ 12 ತಂಡಗಳು ಪಾಲ್ಗೊಂಡಿದ್ದು, ಇಂದು ನಡೆದ ಕ್ವಾರ್ಟರ್ ಫೈನಲ್ಸ್‌ನಲ್ಲಿ ಸೆಣಸಾಡಿದ 8 ತಂಡಗಳಲ್ಲಿ ನಾಲ್ಕು ತಂಡ ಸೆಮಿಫೈನಲ್ ಪ್ರವೇಶಿಸಿ, ಗಮನ ಸೆಳೆದವು.

ಶನಿವಾರ ಬೆಳಗ್ಗೆ 7.30ಕ್ಕೆ ನಡೆದ ಮೊದಲ ಕ್ವಾರ್ಟರ್ ಫೈನಲ್‌ನ ಮೊದಲ ಪಂದ್ಯದಲ್ಲಿ ಕಸ್ಟಮ್ಸ್ ಹಾಗೂ ಹಾಸನ ತಂಡ ಸೆಣಸಾಡಿದವು. ಎರಡೂ ತಂಡಗಳು ಪೈಪೋಟಿ ಪ್ರದರ್ಶನ ನೀಡಿದವು. ಹಾಸನ 2 ಗೋಲು ಹೊಡೆಯುವಲ್ಲಿ ಸಫಲವಾದರೆ, ಎದುರಾಳಿ ಕಸ್ಟಮ್ಸ್ ತಂಡ ಕೇವಲ 1 ಗೋಲನ್ನು ಮಾತ್ರ ಹೊಡೆಯಿತು. ಅಂತಿಮವಾಗಿ ಹಾಸನ ತಂಡ 2–1 ಗೋಲುಗಳ ಅಂತರದ ಗೆಲುವು ಸಾಧಿಸಿ ಸೆಮಿಫೈನಲ್ ಪ್ರವೇಶಿಸಿತು.

9.30ಕ್ಕೆ ನಡೆದ ಎರಡನೇ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಎಂಇಜಿ ಬಾಯ್ಸ್ ಮತ್ತು ಡಿವೈಇಎಸ್ ಬೆಂಗಳೂರು ತಂಡದ ನಡುವೆ ನಡೆದ ಪಂದ್ಯ ರೋಚಕವಾಗಿತ್ತು. ಉಭಯ ತಂಡದ ಆಟಗಾರರು ಜಿದ್ದಾಜಿದ್ದಿಗೆ ಬಿದ್ದು ಉತ್ತಮ ಆಟ ಪ್ರದರ್ಶಿಸಿದರು. ಈ ವೇಳೆ ನಿಗದಿತ ಸಮಯದಲ್ಲಿ ಎರಡೂ ತಂಡಗಳು ತಲಾ ಒಂದೊಂದು ಗೋಲು ಬಾರಿಸಿದವು. ಇದರಿಂದ ಪಂದ್ಯ ಡ್ರಾ ಆಯಿತು. ನಂತರ ನಿಯಮಾನುಸಾರ ಶೂಟ್‌ಔಟ್‌ನಲ್ಲಿ ಡಿವೈಇಎಸ್ ಬೆಂಗಳೂರು ತಂಡ 3 ಗೋಲು ಹೊಡೆದರೆ, ಎಂಇಜಿ ಬಾಯ್ಸ್ ತಂಡ 2 ಗೋಲು ಬಾರಿಸಿ ವೀರೋಚಿತ ಸೋಲನುಭವಿಸಿತು. ಶೂಟ್‌ಔಟ್ ಮೂಲಕ ಡಿವೈಇಎಸ್ ಬೆಂಗಳೂರು ತಂಡ ಸೆಮಿಫೈನಲ್ ಪ್ರವೇಶಿತು.

ಮಧ್ಯಾಹ್ನ 2ಕ್ಕೆ ಆರಂಭವಾದ 3ನೇ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಎಜಿಓಆರ್‌ಸಿ ಹಾಗೂ ಬಳ್ಳಾರಿ ತಂಡ ಸೆಣಸಾಡಿದವು. ಈ ವೇಳೆ ಎಜಿಓಆರ್‌ಸಿ ತಂಡ, ಬಳ್ಳಾರಿ ವಿರುದ್ಧ 6–0 ಗೋಲುಗಳ ಭಾರಿ ಅಂತರದ ಜಯ ದಾಖಲಿಸಿತು.

ಕೊನೆ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಎಸ್‌ಡಬ್ಲ್ಯುಆರ್ ಹುಬ್ಬಳ್ಳಿ ಹಾಗೂ ಮೈಸೂರು ತಂಡದ ನಡುವೆ ನಡೆಯಿತು. ಇದರಲ್ಲಿ ಮೈಸೂರು ತಂಡ 2 ಗೋಲು ಬಾರಿಸಿದರೆ, ಎದುರಾಳಿ ಎಸ್‌ಡಬ್ಲ್ಯುಆರ್ ಹುಬ್ಬಳ್ಳಿ ತಂಡ ಯಾವುದೇ ಗೋಲು ಬಾರಿಸದಂತೆ ಕಟ್ಟೆಚ್ಚರ ವಹಿಸಿ ತಡೆಯೊಡ್ಡಿತು. ಇದರಿಂದ ಅಂತಿಮವಾಗಿ ಮೈಸೂರು ತಂಡ ಸೆಮಿಫೈನಲ್ ಪ್ರವೇಶಿತು.

ಇಂದು ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ 8 ತಂಡಗಳು ಸೆಣಸಾಡಿದವು. ಅದರಲ್ಲಿ ನಾಲ್ಕು ತಂಡ ಸೆಮಿಫೈನಲ್ ಪ್ರವೇಶಿಸಿದವು. ಭಾನುವಾರ(ಜ.21) ಬೆಳಗ್ಗೆ 7 ಗಂಟೆಗೆ ಡಿವೈಇಎಸ್ ಬೆಂಗಳೂರು ಹಾಗೂ ಹಾಸನ ತಂಡದ ನಡುವೆ ಮೊದಲ ಸೆಮಿಫೈನಲ್ ಪಂದ್ಯ ಜರುಗಲಿದೆ. ಬೆಳಗ್ಗೆ 8.30ಕ್ಕೆ ಎಜಿಓಆರ್‌ಸಿ ಹಾಗೂ ಮೈಸೂರು ತಂಡದ ನಡುವೆ ಎರಡನೇ ಸೆಮಿಫೈನಲ್ ಪಂದ್ಯ ನಡೆಯಲಿದೆ. ಈ ಎರಡು ಪಂದ್ಯದಲ್ಲಿ ಜಯಗಳಿಸಿದ ಎರಡು ತಂಡ ಫೈನಲ್ ಪ್ರವೇಶಿಸಲಿವೆ.

ಈ ಪಂದ್ಯಾವಳಿಯಲ್ಲಿ ಪ್ರಥಮ ಬಹುಮಾನ 2 ಲಕ್ಷ ರೂ, ದ್ವಿತೀಯ ಬಹುಮಾನ 1.50 ಲಕ್ಷ ರೂ., ತೃತೀಯ ಬಹುಮಾನ 1 ಲಕ್ಷ ರೂ, ನಾಲ್ಕನೇ ಬಹುಮಾನ 50 ಸಾವಿರ ರೂ. ನಗದು ಸೇರಿದಂತೆ ಟ್ರೋಫಿ ನೀಡಲಾಗುತ್ತದೆ.

ಈ ವೇಳೆ ಭಾರತೀಯ ಹಾಕಿ ತಂಡದ ಹಿರಿಯ ಆಟಗಾರ ಧನರಾಜ್ ಪಿಳ್ಳೆ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಹಾಕಿ ಮೈಸೂರು ಅಸೋಸಿಯೇಷನ್ ಅಧ್ಯಕ್ಷ ದಿಲೀಪ್, ಹಾಕಿ ಮೈಸೂರು ಸಂಸ್ಥೆಯ ಖಜಾಂಚಿ ಪೊನ್ನಪ್ಪ, ಕಾರ್ಯದರ್ಶಿ ಸಿ.ಟಿ.ಸತೀಶ್, ಗಿರೀಶ್ ಹಾಗೂ ಇನ್ನಿತರು ಉಪಸ್ಥಿತರಿದ್ದರು.

ರಾಷ್ಟ್ರೀಯ ಹಾಕಿ ತಂಡಕ್ಕೆ ರಾಜ್ಯದಿಂದ ಆಯ್ಕೆಯಾಗುವವರ ಸಂಖ್ಯೆ ಕಡಿಮೆಯಾಗಿದೆ: ಹಾಕಿ ತಾರೆ ಧನರಾಜ್ ಪಿಳ್ಳೆ

ಮೈಸೂರು, ಜ.20(ಎಂಕೆ)– ರಾಷ್ಟ್ರೀಯ ಹಾಕಿ ತಂಡಕ್ಕೆ ರಾಜ್ಯದಿಂದ ಆಯ್ಕೆಯಾಗುವವರ ಸಂಖ್ಯೆ ಕಡಿಮೆಯಾಗುತ್ತಿದೆ ಎಂದು ಖ್ಯಾತ ಹಿರಿಯ ಹಾಕಿ ಪಟು, ಪದ್ಮಶ್ರೀ ಪುರಸ್ಕೃತ ಧನರಾಜ್ ಪಿಳ್ಳೆ ಬೇಸರ ವ್ಯಕ್ತಪಡಿಸಿದರು.

ಕರ್ನಾಟಕದಲ್ಲಿ ಪ್ರತಿಭಾನ್ವಿತ ಹಾಕಿ ಆಟಗಾರರಿದ್ದರೂ ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾಗುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಆದ್ದರಿಂದ ಹಾಕಿ ಆಟಗಾರರಿಗೆ ಇನ್ನಷ್ಟು ಪ್ರೋತ್ಸಾಹದ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಹಾಕಿ ಮೈಸೂರು ಪಂದ್ಯಾವಳಿ ಆಯೋಜನೆ ಮಾಡಿರುವುದು ಶ್ಲಾಘನೀಯ ಎಂದರು. ಮೈಸೂರು ನಾನು ಮರೆಯಲಾಗದ ನಗರವಾಗಿದೆ. ನಾನು ರಾಷ್ಟ್ರೀಯ ತಂಡದಲ್ಲಿ ಆಯ್ಕೆಯಾಗುವ ಮುನ್ನ ಮೈಸೂರಿನಲ್ಲಿ ಹಾಕಿ ಪಂದ್ಯವನ್ನಾಡಿದ್ದೇನೆ ಎಂದು ಸ್ಮರಿಸಿದರು. ಇದಕ್ಕೂ ಮುನ್ನ ಹಾಕಿ ಸ್ಟಿಕ್ ಹಿಡಿದು ಚೆಂಡನ್ನು ಗೋಲ್‌ನೊಳಗೆ ಬಾರಿಸುವ ಮೂಲಕ ಪಂದ್ಯಾವಳಿಗೆ ಹಾಗೂ ಹಾಕಿ ಆಟಗಾರರಿಗೆ ಶುಭ ಕೋರಿದರು. ನಗರ ಪಾಲಿಕೆ ಮಾಜಿ ಸದಸ್ಯ ಎ.ಯು.ಸುಬ್ಬಯ್ಯ, ಹಾಕಿ ಮೈಸೂರು ಅಧ್ಯಕ್ಷ ದಿಲೀಪ್, ಐಐಟಿ ಬಾಂಬೆ ನಿವೃತ್ತ ಪ್ರಾಧ್ಯಾಪಕ ಪ್ರೊ.ಡಾ.ಅಪ್ಪಾಜಿ ಮತ್ತಿತರರು ಉಪಸ್ಥಿತರಿದ್ದರು.

ವಾರದ ಮಿತ್ರ
ಮೈಸೂರು ಮಿತ್ರ
ಭಾನುವಾರ 21-1-2024
ಪುಟ 10
ಸಾಪ್ತಾಹಿಕ ಪುರವಣಿ

ಮಿರ್ಲೆ ಚಂದ್ರಶೇಖರ, ಮೊ: 9916129654





ರಾಮ ಸನ್ನಿಧಿ ಚುಂಚನಕಟ್ಟೆ

(ಅಯೋಧ್ಯೆಯ ರಾಮಮಂದಿರ ಉದ್ಘಾಟನೆಯ ಸಂದರ್ಭಕ್ಕೆ ಪೂರಕವಾದ ಲೇಖನ, ರಾಮಲಲ್ಲಾ ಮತ್ತು ಚುಂಚನಕಟ್ಟೆಯ 30 ಅಡಿ ಎತ್ತರದ ಹನುಮ ಮೂರ್ತಿ ಎರಡನ್ನೂ ಅರುಣ್ ಯೋಗಿರಾಜ್ ಕೆತ್ತಿರುವುದು ವಿಶೇಷ)

ಶ್ರೀ ರಾಮನ ಜನ್ಮಸ್ಥಳ ಅಯೋಧ್ಯೆಯಲ್ಲಿ ರಾಮ ಮಂದಿರವನ್ನು ನಿರ್ಮಿಸಬೇಕೆನ್ನುವ ಬಹುಕಾಲದ ಕೋಟ್ಯಾಂತರ ಜನಗಳ ಕನಸು ಜನವರಿ 22ರಂದು ಉದ್ಘಾಟನೆಗೊಳ್ಳುವ ಮುಖಾಂತರ ನನಸಾಗುತ್ತಿದೆ, ಕೆಲವು ದಿನಗಳಿಂದ ಎಲ್ಲರ ಚಿತ್ತ ಅಯೋಧ್ಯೆಯ ಕಡೆಗೆ ಹಾಗೂ ಮಾಧ್ಯಮಗಳಲ್ಲಿ ಮರ್ಯಾದಾ ಪುರುಷ ಶ್ರೀರಾಮನದ್ದೆ ಗುಣಗಾನ. ಶ್ರೀರಾಮನ ಜಪತಪಗಳು, ಭಜನೆಗಳು, ಪೂಜಾ ಕಾರ್ಯಗಳು ದೇಶದ ರಾಮಮಂದಿರಗಳಲ್ಲಿ ಶ್ರದ್ಧಾ ಭಕ್ತಿಯಿಂದ ನಡೆಯುತ್ತಿವೆ. ಅಯೋಧ್ಯೆ ರಾಮಮಂದಿರದಲ್ಲಿನ ವಿಶೇಷತೆ ಹಾಗೂ ರಾಮಭಕ್ತ ಹನುಮನು ಜನಿಸಿದ ಪುಣ್ಯಭೂಮಿ ಕರ್ನಾಟಕದ ಜನತೆಯು ಹೆಮ್ಮೆ ಪಡುವ ವಿಷಯವೆಂದರೆ ರಾಮ ಲಲ್ಲಾನನ್ನು ನಿರ್ಮಿಸಲು ಉಪಯೋಗಿಸಿದ ಕೃಷ್ಣಶಿಲೆ ಮೈಸೂರಿಗೆ ಸಮೀಪ ಇರುವ ಹಾರೋಹಳ್ಳಿಯ ಜಮೀನಿನಲ್ಲಿ ಸಿಕ್ಕಿರುವುದು. ಆಕಾರವಿಲ್ಲದ ಕಲ್ಲನ್ನು ಸುಂದರ ಮೂರ್ತಿಯನ್ನಾಗಿ ಕೆತ್ತಿ ಭಕ್ತರ ಪ್ರಶಂಸೆಗೆ ಪಾತ್ರರಾಗಿರುವ ಶಿಲ್ಪಿ ಮೈಸೂರಿನವರೇ ಆಗಿರುವುದು, ಹೇಳಿಕೊಳ್ಳಲು ಇದಕ್ಕಿಂತ ಹೆಚ್ಚುಗಾರಿಕೆ ಇನ್ನೇನು ಬೇಕು. ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್‌ರವರ ಕೌಶಲ್ಯದಿಂದ ಮೂಡಿದ ರಾಮಲಲ್ಲಾ ಭಕ್ತರಿಗೆ ಪ್ರಿಯವಾಗಿದ್ದಾನೆ.

ಕೃಷ್ಣಶಿಲೆ ದೊರಕಿದ ಹಾರೋಹಳ್ಳಿಯ ವ್ಯವಸಾಯಕ್ಕೂ ಕಷ್ಟವಾಗಿದ್ದ ಬಂಜರು ಜಮೀನು ಸಹ ಇಂದು ಪುಣ್ಯಭೂಮಿಯಾಗಿ ಪರಿವರ್ತನೆಗೊಂಡು, ಇದೇ ಸ್ಥಳದಲ್ಲಿ ರಾಮನ ಗುಡಿ ನಿರ್ಮಾಣ ಮಾಡುವುದಕ್ಕೆ ಆ ಭಾಗದ ಜನರು ಮನಸ್ಸು ಮಾಡಿದ್ದಾರೆ. ಒಟ್ಟಾರೆಯ ವಾತಾವರಣವು ಇಡೀ ರಾಷ್ಟ್ರವೇ ರಾಮಮಂದಿರದಂತೆ ಗೋಚರವಾಗುತ್ತಿದೆ. ಎಲ್ಲೆಡೆ ಜೈಶ್ರೀರಾಮನ ಭಕ್ತಿಯ ಅಲೆ ಹಿತವಾಗಿ ಬೀಸುತ್ತಾ ಮನ ಸ್ಸಂತೋಷಗೊಳಿಸುತ್ತಿದೆ, ಈಗ ಎಲ್ಲೆಲ್ಲೂ ರಾಮ ನಾಮದ ಜೈಕಾರ ಮೊಳಗುತ್ತಿದೆ.

ಕರ್ನಾಟಕಕ್ಕೂ ಶ್ರೀರಾಮನಿಗೂ ಅವಿನಾವಭಾವ ಸಂಬಂಧವಿದೆ. ಶ್ರೀರಾಮನು ಉತ್ತರದವನೇ ಆಗಿದ್ದರೂ ಅವನ ನಿಷ್ಠಾವಂತ ಭಕ್ತ ಆಂಜನೇಯ ಕರ್ನಾಟಕದವನು. ಹಾಗೆಯೇ ಮೈಸೂರು ಜಿಲ್ಲೆಯ ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆಗೂ ಸಂಬಂಧವಿದೆ. ಇದು ಕಾವೇರಿ ನದಿಯ ಬಲದಂಡೆ ಮೇಲೆ ಇರುವ ಗ್ರಾಮ. ಹತ್ತೊಂಬತ್ತನೇ ಶತಮಾನದಲ್ಲಿ ಶ್ರೀಕೃಷ್ಣರಾಜ ಒಡೆಯರ್‌ರವರಿಂದ ವಿಜಯನಗರ ದೇವಸ್ಥಾನಗಳ ಮಾದರಿಯಲ್ಲಿ ಶ್ರೀಕೋದಂಡರಾಮ ದೇವಸ್ಥಾನವನ್ನು ನಿರ್ಮಿಸಲಾಗಿದೆ. ಇದೇ ಮಾದರಿಯಲ್ಲಿ ನದಿಯ ಎಡದಂಡೆಯಲ್ಲಿನ ಗ್ರಾಮಕ್ಕೆ ಆ ಭಾಗದ ಜನರ ನಂಬಿಕೆ ಹಾಗೂ ಪೂರ್ವಿಕರು ಹೇಳುತ್ತಿದ್ದ ಪುರಾಣ ಕಥೆಯಂತೆ ಹಿಂದೆ ಸೀತಾ ಮಾತೆಯು ಬಂದಿದ್ದಳೆಂದು, ನೆನಪಿಗಾಗಿ ಗ್ರಾಮವನ್ನು ಮಿಥಿಲಾ ನಗರವೆಂದು ಕರೆಯಲ್ಪಡುತ್ತಿದ್ದು ಕಾಲಾನುಸಾರ ಬದಲಾದ ಮಿರ್ಲೆ ಗ್ರಾಮದಲ್ಲೂ ಸುಂದರವಾದ ಮೂರ್ತಿ ಇರುವ ಶ್ರೀಕೋದಂಡರಾಮನ ದೇವಾಲಯವಿದೆ. ಸ್ಪಷ್ಟ ಆಧಾರಗಳಿಲ್ಲದಿದ್ದರೂ ತಲತಲಾಂತರದಿಂದ ಇರುವ ನಂಬಿಕೆಯನ್ವಯ ಚುಂಚನಕಟ್ಟೆ ಹಾಗೂ ಮಿರ್ಲೆ ಗ್ರಾಮದ ಅಷ್ಟೂ ಭೂಭಾಗವನ್ನು 'ರಾಮನ ಬಯಲು' ಎಂದು ಇಂದಿಗೂ ಕರೆಯಲಾಗುತ್ತಿದೆ, ರಾಮನ ಬಯಲು ಕಬ್ಬು-ಭತ್ತಗಳ ಹಸಿರು ಹೊದಿಕೆ ಹೊದ್ದು ನೀಲಿಬಾನಿನ ಅಂಚಿನವರೆಗೂ ಸದಾ ಚಾಚಿಕೊಂಡಿರುತ್ತದೆ. ಕೃಷ್ಣರಾಜನಗರ ಮತ್ತು ಸಾಲಿಗ್ರಾಮ ತಾಲೂಕುಗಳಲ್ಲಿ ಬಹುತೇಕ ಜನರ ಹೆಸರು ಗಂಡಸರಿಗೆ ರಾಮೇಗೌಡ, ರಾಮಶೆಟ್ಟಿ, ರಾಮಯ್ಯ, ರಾಮನಾಯಕ, ಜಯರಾಮ ಎಂಬುದಾಗಿದ್ದರೆ ಹೆಣ್ಣು ಮಕ್ಕಳಿಗೆ ಸೀತಾ, ಸೀತಮ್ಮನೆಂದು ಇಟ್ಟುಕೊಂಡಿರುವುದನ್ನು ಕಾಣಬಹುದು. ಅದೇ ರೀತಿ ವ್ಯಾಪಾರ-ವಹಿವಾಟು, ಕಾರ್ಖಾನೆಗಳ ಹೆಸರು ಸಹ ಶ್ರೀರಾಮನದ್ದೇ ಆಗಿದೆ, ಒಟ್ಟಿನಲ್ಲಿ ಶ್ರೀರಾಮನ ಪ್ರಭಾವ ರಾಜ್ಯದ ಇತರೆಲ್ಲೆಡೆಗಿಂತ ಇಲ್ಲಿ ಹೆಚ್ಚು ಆಗಿದೆ. ಎರಡೂ ತಾಲೂಕುಗಳ ಹಳ್ಳಿಗಳಲ್ಲಿ ಭಜನೆಗಾಗಿ ರಾಮಮಂದಿರಗಳು ಬಹಳ ಹಿಂದೆಯೇ ನಿರ್ಮಾಣಗೊಂಡಿವೆ.

ರಾಜ್ಯದ ಜೀವನಾಡಿ ಕಾವೇರಿ ನದಿಯಲ್ಲಿ ಚುಂಚನಕಟ್ಟೆಯ ಬಳಿ ಅಂದಾಜು ಅರವತ್ತೈದು ಅಡಿಗಳಷ್ಟು ಆಳಕ್ಕೆ ಧುಮುಕುವ ಜಲಪಾತವನ್ನು ಕಾವೇರಿ ಮಾತೆ ಸೃಷ್ಟಿಸಿಕೊಂಡಿದ್ದಾಳೆ. ಶ್ರೀರಾಮನು ತನ್ನ ಹದಿನಾಲ್ಕು ವರ್ಷಗಳ ವನವಾಸ ಕಾಲದಲ್ಲಿ ತನ್ನ ಪತ್ನಿ ಸೀತಾದೇವಿಯೊಡನೆ ಇಲ್ಲಿಗೆ ಬಂದಿದ್ದನೆಂಬ ಐತಿಹ್ಯವಿದೆ ಹಾಗಾಗಿ ಇಲ್ಲಿನ ಕೋದಂಡರಾಮನ ದೇವಾಲಯವು ಪ್ರಸಿದ್ಧಿ ಪಡೆದಿದೆ, ಪ್ರತೀ ವರ್ಷ ಸಂಕ್ರಾಂತಿಯಂದು ದನಗಳ ಜಾತ್ರೆ ಶ್ರೀರಾಮನ ರಥೋತ್ಸವ ಅದ್ದೂರಿಯಾಗಿ ನಡೆಯುವುದು, ಚುಂಚನಕಟ್ಟೆಯ ಪ್ರಕೃತಿಯು ಪ್ರವಾಸಿಗರ ಮನಸ್ಸನ್ನು ಸೂರೆಗೊಳ್ಳುತ್ತಿರುವ ಪವಿತ್ರ ಕ್ಷೇತ್ರವಾಗಿದೆ. ದೇವಾಲಯದ ವಿಶೇಷವೆಂದರೆ ಶ್ರೀರಾಮನ ಬಲಬದಿಗೆ ಸೀತಾದೇವಿಯ ವಿಗ್ರಹವಿದೆ, ಸಾಮಾನ್ಯವಾಗಿ ಇತರೆ ದೇವಾಲಯಗಳಲ್ಲಿ ಎಡಬದಿಯಲ್ಲಿ ಇರುವುದು, ಅಯೋಧ್ಯೆಯಲ್ಲೂ ಎಡಭಾಗದಲ್ಲಿ ಸೀತೆ, ಬಲಭಾಗದಲ್ಲಿ ಸಹೋದರ ಲಕ್ಷ್ಮಣನು ನಿಂತಿರುವುದನ್ನು ಕಾಣಬಹುದು. ತಲಕಾವೇರಿಯಲ್ಲಿ ಉದ್ಭವಿಸುವ ಕಾವೇರಿ ನದಿಯ ಮೊದಲ ಜಲಪಾತ ಇದಾಗಿದ್ದು ನದಿ ತುಂಬಿ ಹರಿಯುವಾಗ ನೋಡುತ್ತಿದ್ದರೆ ಆಗುವ ಆನಂದದ ಹಬ್ಬಕ್ಕೆ ಪಾರವೇ ಇಲ್ಲ.

ಇಲ್ಲಿನ ಜಲಪಾತವು ಭೋರ್ಗರೆಯುತ್ತಾ ಧುಮುಕುವ ಶಬ್ದವು ದೂರದ

> ಸರಯೂ ನದಿ ದಂಡೆಯ ಮೇಲೆ ನಿರ್ಮಾಣವಾಗಿರುವ ರಾಮಮಂದಿರದ ಉದ್ಘಾಟನೆಗೆ ಅಥವಾ ಸಾಮಾನ್ಯ ದಿನಗಳಲ್ಲಿ ಪ್ರವಾಸಕ್ಕೆ ಅಯೋಧ್ಯೆಗೆ ಹೋಗುವುದಕ್ಕೆ ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಇಲ್ಲೇ ಸಮೀಪದ ಚುಂಚನಕಟ್ಟೆಯಲ್ಲಿ ನೆಲೆಸಿರುವ ಶ್ರೀಕೋದಂಡರಾಮ ದೇವಾಲಯಕ್ಕೆ ಹೋಗುವುದರಿಂದ ಸಾರ್ಥಕತೆಯನ್ನು ಪಡೆಯಬಹುದು. ಇತ್ತೀಚೆಗೆ ಶ್ರೀಕೋದಂಡರಾಮನ ದೇವಾಲಯದ ಎದುರು ರಾಮನ ಬಂಟ ಆಂಜನೇಯನ ಮೂರ್ತಿಯನ್ನು ಸ್ಥಾಪನೆ ಮಾಡಲಾಗಿದೆ. ಮೂರ್ತಿಯು ಪೀಠವೂ ಸೇರಿದಂತೆ ಮೂವತ್ತು ಅಡಿ(ಮೂರ್ತಿ ಇಪ್ಪತ್ತಮೂರು ಅಡಿ) ಎತ್ತರದ ಆಂಜನೇಯಸ್ವಾಮಿಯ ಸುಂದರ ಮೂರ್ತಿಯನ್ನು ಕೃಷ್ಣಶಿಲೆಯಲ್ಲಿ ಕೆತ್ತಿದ್ದು ಇದೇ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಎಂಬುದು ವಿಶೇಷ. ಕೃಷ್ಣರಾಜನಗರದಿಂದ ಕೇವಲ ಹದಿನೈದು ಕಿಮೀ. ದೂರವಿರುವ ಚುಂಚನಕಟ್ಟೆಗೆ ಭೇಟಿ ನೀಡಿದರೆ ಕಾವೇರಿ ನದಿಯ ಜಲಪಾತದಲ್ಲಿನ ಸೀತೆ ಬಚ್ಚಲು, ಸೀತೆ ಮಡು, ಶ್ರೀಕೋದಂಡರಾಮ ಹಾಗೂ ಅರುಣ್ ಯೋಗಿರಾಜ್ ಕೆತ್ತಿರುವ ಆಂಜನೇಯಸ್ವಾಮಿಯ ಸುಂದರ ಮೂರ್ತಿಯನ್ನು ಕಣ್ತುಂಬಿಕೊಂಡು ಜೈಶ್ರೀರಾಮನ ಭಕ್ತಿಯಲ್ಲಿ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಬಹುದು.

ಹಲವು ಹಳ್ಳಿಗಳಿಗೆ ಕೇಳಿಸುತ್ತದೆ, ನಾಲ್ಕು ಕಿಮೀ ದೂರವಿರುವ ನನ್ನೂರು ಮಿರ್ಲೆಯ ಮನೆಯಲ್ಲಿ ನಾನು ಮಲಗುತ್ತಿದ್ದಾಗ ರಾತ್ರಿ ಸಮಯ ಜಲಪಾತದಲ್ಲಿ ಧುಮುಕುವ ನೀರಿನ ಶಬ್ದವನ್ನು ಕೇಳಿ ಭಯಪಟ್ಟುಕೊಳ್ಳುತ್ತಿದ್ದುಂಟು. ವಿಶೇಷವೆಂದರೆ ದಂಡೆಯಲ್ಲೇ ಇರುವ ಕೋದಂಡರಾಮನ ದೇವಾಲಯದ ಗರ್ಭಗುಡಿಯ ಒಳಗಡೆಗೆ ಸ್ವಲ್ಪವೂ ಕೇಳಿಸುವುದಿಲ್ಲ. ಅಲ್ಲಿನ ಸ್ಥಳೀಯರು ಹೇಳುವ ಪ್ರಕಾರ ರಾಮಾಯಣದ ಕಾಲದಲ್ಲಿ ರಾಮ, ಸೀತೆ, ಲಕ್ಷ್ಮಣರು ಕೆಲವು ಸಮಯ ಚುಂಚಾರಣ್ಯವೆಂದು ಕರೆಯಲ್ಪಡುತ್ತಿದ್ದ ಇಲ್ಲಿ ನೆಲೆಸಿದ್ದರಂತೆ. ಆ ದಿನಗಳಲ್ಲಿ ಚುಂಚಾರಣ್ಯದಲ್ಲಿನ ಜನರಿಗೆ 'ಚುಂಚ-ಚುಂಚಿ' ಎಂಬ ರಾಕ್ಷಸರು ಹಿಂಸೆ ನೀಡುತ್ತಿದ್ದರೆಂದು, ಶ್ರೀರಾಮನು ರಾಕ್ಷಸರನ್ನು ವಧೆ ಮಾಡಿ, ಹಿಂಸೆಯಿಂದ ಮುಕ್ತಿಗೊಳಿಸಿದನಂತೆ. ಸಾಯುವ ಗಳಿಗೆಯಲ್ಲಿ ನಮ್ಮ ಹೆಸರು ಕೊನೆಯಾಗುತ್ತಿದೆಯಲ್ಲ ಎಂದು ಚಿಂತೆಗೆ ಒಳಗಾಗಿದ್ದ ರಾಕ್ಷಸರ ಬೇಡಿಕೆಯಂತೆ ರಾಕ್ಷಸರ ಹೆಸರು ಚಿರಕಾಲ ಉಳಿಯುವಂತೆ ಈ ಪ್ರದೇಶವನ್ನು ಚುಂಚನಕಟ್ಟೆ ಎಂದು ನಾಮಕರಣ ಮಾಡಿದರೆಂದು ಅಲ್ಲಿನ ಜನರು ಹೇಳುತ್ತಾರೆ.

ಚುಂಚನಕಟ್ಟೆಯ ಮತ್ತೊಂದು ವಿಷಯವೆಂದರೆ ಒಮ್ಮೆ ಸೀತಾ ಮಾತೆಯು ವಿಶ್ರಾಂತಿ ಪಡೆಯುತ್ತಿದ್ದಾಗ ರಾಮನು ತನ್ನ ಪತ್ನಿಗೆ ಜಲಪಾತದ ಶಬ್ದದಿಂದ ವಿಶ್ರಾಂತಿಗೆ ಭಂಗ ಆಗಬಾರದೆಂದು, ಕಾವೇರಿ ನದಿಗೆ ಸಮಾನಾಂತರವಾಗಿ ಬಾಣ ಬಿಟ್ಟು, ನೀನು ಹರಿಯುವ ಭೋರ್ಗರೆತದ ಶಬ್ದ ನನ್ನ ಸೀತೆಗೆ ಕೇಳಿಸಬಾರದೆಂದು ಆಜ್ಞೆ ಮಾಡಿದನಂತೆ. ಅಂದಿನಿಂದ ಇಲ್ಲಿಯವರೆಗೂ ನದಿಯಲ್ಲಿ ಎಷ್ಟೇ ನೀರಿದ್ದರೂ ಕೋದಂಡ ರಾಮ ದೇವಾಲಯದ ಗರ್ಭಗುಡಿಯ ಒಳಭಾಗಕ್ಕೆ ಶಬ್ದ ಕೇಳಿಸುವುದಿಲ್ಲ.

ಜಲಪಾತದ ಬಲಭಾಗದಲ್ಲಿ ಹಳದಿ ಬಣ್ಣದ ನೀರು ಇಂದಿಗೂ ಹರಿಯುವುದನ್ನು ನೋಡಬಹುದು, ಸೋಜಿಗವೆಂದರೆ ಪಕ್ಕದ ಜಲಪಾತದಲ್ಲಿ ಧುಮುಕುವ ನೀರು ತಿಳಿಯಾಗಿರುತ್ತದೆ. ಇದರ ಬಗ್ಗೆ ಜನರು ಹೇಳುವ ಪ್ರಕಾರ ವನವಾಸದ ಸಂದರ್ಭದಲ್ಲಿ ಸೀತೆಯು ಸ್ನಾನ ಮಾಡುವಾಗ ಮಾತೆಯು ಬಳಸಿದ ಅರಿಶಿನ, ಸೀಗೆಕಾಯಿಯ ಬಣ್ಣದ ನೀರು ಹೀಗೆ ಹರಿಯುವುದೆಂದು ಹೇಳುತ್ತಾರೆ, ಆ ಸುಗಂಧವು ಇನ್ನೂ ಬೀರುತ್ತಿದೆ. ಈ ಭಾಗವನ್ನು "ಸೀತೆ ಬಚ್ಚಲು" ಎಂದು ಕರೆಯುತ್ತಾರೆ. ಜಲಪಾತದ ಕೆಳಭಾಗವನ್ನು "ಸೀತೆ ಮಡು" ಎನ್ನುತ್ತಾರೆ. ಪ್ರವಾಸಿಗರ ದಟ್ಟಣೆ ಜಾಸ್ತಿಯಾದಂತೆ ಅನಾಹುತಗಳು ಆಗದಿರಲೆಂದು ಸೀತೆ ಬಚ್ಚಲು ಸಮೀಪ ಹೋಗುವುದನ್ನು ನಿಷೇಧಿಸಲಾಗಿದೆ. ಸೂಕ್ತ ಆಧಾರಗಳಿಲ್ಲದ ಮತ್ತೊಂದು ಕಥೆಯನ್ನು ಮಿಥಿಲಾ(ಮಿರ್ಲೆ) ಗ್ರಾಮದ ಜನರು ಹೇಳುತ್ತಿರುವುದು; ಹಿಂದಿನ ಕಾಲದಲ್ಲಿ ದೈವಾಂಶದಿಂದ ಕೂಡಿದ ರಾಮನ ರಥೋತ್ಸವವು ಚಿನ್ನದ ತೇರಿನಲ್ಲಿ ನಡೆಯುತ್ತಿದ್ದು, ಯಾರೋ ರಾಮನ ನಿಂದನೆ ಮಾಡಿದ್ದರಿಂದ ಆ ತೇರು ಕಾವೇರಿ ನದಿಯಲ್ಲಿ ಮುಳುಗಿತೆಂದು ಇಲ್ಲಿಯವರೆಗೂ ಅದನ್ನು ಯಾರೂ ಹುಡುಕಲು ಆಗಿಲ್ಲವಂತೆ. ಹೀಗೆ ಹತ್ತು ಹಲವಾರು ಕಥೆಗಳು ರಾಮನ ಬಯಲು ಪ್ರದೇಶವಾದ ಚುಂಚನಕಟ್ಟೆಯ ಸುತ್ತಲಿನ ಗ್ರಾಮಗಳಲ್ಲಿ ಇಂದಿಗೂ ಹರಿದಾಡುತ್ತಿವೆ. ಇಲ್ಲಿನ ಭೂಪ್ರದೇಶದ ಗುಣಲಕ್ಷಣಗಳನ್ನು ನೋಡಿದರೆ ಜನರೇಳುವ ಕಥೆಗಳನ್ನು ಅಲ್ಲಗಳೆಯಲಾಗದು. ಏಕೆಂದರೆ ಎಲ್ಲವೂ ಕಥೆಗಳಿಗೆ ಪೂರಕವಾಗಿವೆ.

ಸರಯೂ ನದಿ ದಂಡೆಯ ಮೇಲೆ ನಿರ್ಮಾಣವಾಗಿರುವ ರಾಮಮಂದಿರದ ಉದ್ಘಾಟನೆಗೆ ಅಥವಾ ಸಾಮಾನ್ಯ ದಿನಗಳಲ್ಲಿ ಪ್ರವಾಸಕ್ಕೆ ಅಯೋಧ್ಯೆಗೆ ಹೋಗುವುದಕ್ಕೆ ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಇಲ್ಲೇ ಸಮೀಪದ ಚುಂಚನಕಟ್ಟೆಯಲ್ಲಿ ನೆಲೆಸಿರುವ ಶ್ರೀಕೋದಂಡರಾಮ ದೇವಾಲಯಕ್ಕೆ ಹೋಗುವುದರಿಂದ ಸಾರ್ಥಕತೆಯನ್ನು ಪಡೆಯಬಹುದು. ಇತ್ತೀಚೆಗೆ ಶ್ರೀಕೋದಂಡರಾಮನ ದೇವಾಲಯದ ಎದುರು ರಾಮನ ಬಂಟ ಆಂಜನೇಯನ ಮೂರ್ತಿಯನ್ನು ಸ್ಥಾಪನೆ ಮಾಡಲಾಗಿದೆ. ಮೂರ್ತಿಯು ಪೀಠವೂ ಸೇರಿದಂತೆ ಮೂವತ್ತು ಅಡಿ(ಮೂರ್ತಿ ಇಪ್ಪತ್ತಮೂರು ಅಡಿ) ಎತ್ತರದ ಆಂಜನೇಯಸ್ವಾಮಿಯ ಸುಂದರ ಮೂರ್ತಿಯನ್ನು ಕೃಷ್ಣಶಿಲೆಯಲ್ಲಿ ಕೆತ್ತಿದ್ದು ಇದೇ ಮೈಸೂರಿನ ಶಿಲ್ಪಿ ಅರುಣ್‌ಯೋಗಿರಾಜ್ ಎಂಬುದು ವಿಶೇಷ. ಕೃಷ್ಣರಾಜನಗರದಿಂದ ಕೇವಲ ಹದಿನೈದು ಕಿಮೀ. ದೂರವಿರುವ ಚುಂಚನಕಟ್ಟೆಗೆ ಭೇಟಿ ನೀಡಿದರೆ ಕಾವೇರಿ ನದಿಯ ಜಲಪಾತದಲ್ಲಿನ ಸೀತೆ ಬಚ್ಚಲು, ಸೀತೆ ಮಡು, ಶ್ರೀಕೋದಂಡರಾಮ ಹಾಗೂ ಅರುಣ್‌ಯೋಗಿರಾಜ್ ಕೆತ್ತಿರುವ ಆಂಜನೇಯಸ್ವಾಮಿಯ ಸುಂದರ ಮೂರ್ತಿಯನ್ನು ಕಣ್ತುಂಬಿಕೊಂಡು ಜೈಶ್ರೀರಾಮನ ಭಕ್ತಿಯಲ್ಲಿ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಬಹುದು.





ವಾರಭವಿಷ್ಯ

21.01.2024 ರಿಂದ 27.01.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮಕರ, ಚಂದ್ರ-ವೃಷಭ, ಮಿಥುನ, ಕಟಕ, ಕುಜ-ಧನುಸ್ಸು, ಬುಧ-ಧನುಸ್ಸು, ಗುರು-ಮೇಷ, ಶುಕ್ರ-ಧನುಸ್ಸು, ಶನಿ-ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ನೀವು ಒಳ್ಳೆಯದನ್ನು ಮಾಡಿದರೆ ಇತರರೂ ಒಳ್ಳೆಯದನ್ನೇ ಮಾಡುತ್ತಾರೆ. ವಾರದ ಆದಿಗೆ ಧನ -ಕನಕಗಳನ್ನು ಸಂಪಾದಿಸುವಿರಿ. ನಿಮ್ಮ ಸಹವರ್ತಿಗಳ ಸಹಕಾರದಿಂದ ಕಾರ್ಯಸಾಧನೆ ಆಗುತ್ತದೆ. ಇದಕ್ಕೆ ಸಹೋದರರ ಸಹಾಯವೂ ದೊರೆಯುತ್ತದೆ. ಕೃಷಿಕರು ಅಭಿವೃದ್ಧಿ ಹಾಗೂ ಲಾಭವನ್ನು ಹೊಂದುವರು. ಕಟ್ಟಡ ಕೆಲಸ ನಿಧಾನವಾಗಿ ಸಾಗುವುದು. ಯಾರನ್ನೂ ತೀರ ನಂಬಿ ಮೋಸ ಹೋಗದಿರಿ.

ಶ್ರೀ ಲಕ್ಷ್ಮೀನರಸಿಂಹ ದರ್ಶನ. ಶುಭ ಸಂಖ್ಯೆ-5.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರ ಮೈ ಮನಗಳಲ್ಲಿ ಹರ್ಷ ಉಲ್ಲಾಸಗಳನ್ನು ನೀಡಲಿರುವನು. ಮಾತೃಶ್ರೀಯವರ ಆಶೀರ್ವಾದದಿಂದ ಜಟಿಲ ಸಮಸ್ಯೆಯೊಂದು ಸುಖಾಂತ್ಯವಾಗುವುದು. ಹತ್ತಿ ಫಸಲು ಸಮೃದ್ಧವಾಗಿ ಬರುವುದು. ಹೊಸ ಯೋಜನೆಗಳಿಗೆ ಹಣ ಹೂಡಿಕೆ ಮಾಡುವಾಗ ಅನುಭವಿಗಳ ಸಲಹೆ ಪಡೆಯಿರಿ. ತಾನಾಗಿ ಬರುವ ಬಂಧು ಜನರ ಸಹಾಯಹಸ್ತವನ್ನು ಸ್ವೀಕರಿಸಿ. ಬೆಟ್ಟಿಂಗ್‌ನಿಂದ ನಷ್ಟವಾಗುತ್ತದೆ.

ಶ್ರೀದೇವಿ ಉಪಾಸನೆ. ಶುಭ ಸಂಖ್ಯೆ-7

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಸಪ್ತಾಹದ ಪ್ರಾರಂಭಕ್ಕೆ ಐಹಿಕ ಸುಖ ಭೋಗಗಳು, ನೂತನ ವಸ್ತ್ರ ವಾಹನಗಳು ನಿಮ್ಮ ಪಾಲಿಗಿದೆ. ಸ್ವಪ್ರಯತ್ನದಿಂದ ಕೆಲಸ ಸಾಧನೆಯಾಗುವುದು. ಪ್ರತಿಜ್ಞಾ ಪರಿಪಾಲನೆ ಮಾಡಿ ಮೆಚ್ಚುಗೆಗೆ ಪಾತ್ರರಾಗುವಿರಿ. ಮಹತ್ವದ ನಿರ್ಧಾರಕ್ಕೆ ಮುನ್ನ ನಿಧಾನಿಸಿ. ಗುರಿ ಸಾಧಿಸಲು ಗುರುಬೇಕು. ವಾರ ಮಧ್ಯೆ ಅಪಚನ ಕಾಡಬಹುದು. ದುರ್ಘಟನೆ ಸ್ಥಳ ವೇಳೆ ಹೇಳದೆ ಜರುಗಿ ಬಿಡುತ್ತದೆ. ಜಾಗೃತರಾಗಿರಿ.

ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ-4.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ವಾರದ ಆದಿಗೆ ನಿಮ್ಮ ರಾಶ್ಯಾಧಿಪತಿ ಚಂದ್ರನ ಉಚ್ಚ ಸಂಚಾರದಿಂದ ನಿಮ್ಮ ಮನೋಭಿಲಾಷೆಗಳು ಪೂರ್ಣಗೊಳ್ಳುವ ಸಂಭವವಿದೆ. ಪ್ರೀತಿ-ಪ್ರೇಮ ವಿಷಯಗಳು ಗುಪ್ತವಾಗಿ ಇರಲಾರದು. ಹೋಟೆಲ್ ಟ್ರಾವೆಲ್ ಏಜೆನ್ಸಿಯವರಿಗೆ ಕೈ ತುಂಬಾ ಕೆಲಸ ಹಾಗೂ ಹೇರಳ ಧನ ಲಾಭವಾಗುವುದು. ಅಷ್ಟಮ ಶನಿಯಿಂದ ಶರೀರದಲ್ಲಿ ಶಕ್ತಿಹೀನತೆ ಕಾಡುವುದು. ಈರ್ಷಾ ಸ್ವಭಾವ ತ್ಯಜಿಸಿ ಒಳಿತಾಗುತ್ತದೆ.

ಶ್ರೀ ದುರ್ಗಾಸ್ತುತಿ. ಶುಭ ಸಂಖ್ಯೆ-8.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ನಿಮ್ಮ ನಿರಂತರ ಪರಿಶ್ರಮ ಈಗ ಫಲ ನೀಡುವ ಸಮಯ ಸನ್ನಿಹಿತವಾಗಿದೆ. ಆಸ್ತಿಪಾಸ್ತಿ ಹೊಂದಲು ಗ್ರಹಗಳ ಅನುಕೂಲವಿದೆ. ಸಮಾಜದಲ್ಲಿ ಗೌರವಾದರಗಳಿಗೆ ಪಾತ್ರರಾಗುವಿರಿ. ವಧು-ವರಾನ್ವೇಷಣೆ ಮುಂದುವರೆಯಲಿ. ವಿದ್ಯಾ ಪ್ರಸಂಗಗಳಲ್ಲಿ ಉನ್ನತವಾದುದನ್ನು ಸಾಧಿಸುವಿರಿ. ಧರ್ಮಕ್ಷೇತ್ರಕ್ಕೆ ಭೇಟಿ ನೀಡುವುದರಿಂದ ಮನಸ್ಸು ಪ್ರಫುಲ್ಲವಾಗುವುದು. ನೆರೆಹೊರೆಯಲ್ಲಿ ಸೌಹಾರ್ದದಿಂದಿರಿ.

ಶ್ರೀ ಸೂರ್ಯ ನಮಸ್ಕಾರ. ಶುಭ ಸಂಖ್ಯೆ-6.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ನೀವು ಅಂದುಕೊಂಡದ್ದು ಒಂದು, ಆಗುತ್ತಿರುವುದು ಮತ್ತೊಂದು. ಇದಕ್ಕೆ ಈ ವಾರದ ಗ್ರಹ ಸಂಯೋಗಗಳೇ ಕಾರಣ. ಅಧೀರರಾಗುವ ಅಗತ್ಯವಿಲ್ಲ. ವಾರ ಮಧ್ಯೆ ಹಣಕಾಸಿನ ಪರಿಸ್ಥಿತಿ ಸುಧಾರಿಸುವುದು. ಜೊತೆಗೆ ಖರ್ಚುಗಳೂ ಹೆಚ್ಚಾಗುವುದು. ನಿಮ್ಮ ಸ್ವೇಚ್ಛಾಚಾರಗಳಿಂದ ತೊಂದರೆಗೆ ಸಿಲುಕುವಿರಿ. ನಿಮ್ಮ ಆರೋಗ್ಯದ ಬಗ್ಗೆ ಉಪೇಕ್ಷೆ ಸಲ್ಲದು. ವಾರಾಂತ್ಯಕ್ಕೆ ಸಂಸಾರ ಸಮೇತ ಮನೆ ದೇವರ ದರ್ಶನ ಮಾಡಿ.

ಶ್ರೀರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-9.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಆಸ್ತಿ ಕೊಳ್ಳುವ ವಿಚಾರದಲ್ಲಿ ಉಂಟಾಗಿದ್ದ ಗೊಂದಲ ನಿವಾರಣೆ ಆಗುವುದು. ಸಮಾಜದಲ್ಲಿ ಪ್ರಮುಖ ವ್ಯಕ್ತಿಗಳ ಸಂಪರ್ಕದಿಂದ ವ್ಯವಹಾರಗಳು ಸಮಯಕ್ಕೆ ಸರಿಯಾಗಿ ಪೂರ್ಣಗೊಳ್ಳುತ್ತವೆ. ಹೊಸ ವಾಹನ ಖರೀದಿಯ ಕನಸು ನನಸಾಗುವುದು. ನಿರುದ್ಯೋಗಿಗಳಿಗೆ ಹೊಸ ಅವಕಾಶಗಳು ದೊರೆಯುತ್ತವೆ. ವಾರಾಂತ್ಯಕ್ಕೆ ಮನೆಯಲ್ಲಿ ಮಂಗಳ ಕಾರ್ಯಗಳು ಜರುಗುವುದು.

ನವಗ್ರಹ ಸ್ತೋತ್ರ ಪಾರಾಯಣ. ಶುಭ ಸಂಖ್ಯೆ-2.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ

ಗುರುಬಲವಿದೆ. ನಿರೀಕ್ಷಿತ ವ್ಯವಹಾರಗಳು ಯೋಜಿಸಿದಂತೆ ಸಂಪನ್ನಗೊಳ್ಳುವುದು. ಸಂಬಂಧಿಕರೊಂದಿಗಿನ ಭಿನ್ನಾಭಿಪ್ರಾಯಗಳು ಬಗೆಹರಿಯುತ್ತವೆ. ದೀರ್ಘ ಕಾಲದ ಆರೋಗ್ಯ ಸಮಸ್ಯೆಗಳಿಂದ ಪರಿಹಾರ ದೊರೆಯುತ್ತದೆ. ಉನ್ನತ ಹುದ್ದೆಯಲ್ಲಿರುವವರು ತಮ್ಮ ದಕ್ಷತೆಯನ್ನು ಸಾಬೀತುಪಡಿಸಿಕೊಳ್ಳುತ್ತೀರಿ. ಕಪ್ಪು ಧಾನ್ಯ ವ್ಯಾಪಾರಿಗಳಿಗೆ ಇದು ಹೆಚ್ಚು ಅನುಕೂಲಕರ ಸಮಯವಾಗಿದೆ.

ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ-7.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಸಪ್ತಾಹದ ಆದಿಗೆ ಬಯಸಿದ್ದನ್ನು ಗಳಿಸಿಕೊಳ್ಳುವ ಯೋಗ ಕರುಣಿಸಿದ್ದಾರೆ ಶ್ರೀ ಗುರು. ರೆಡಿಮೇಡ್ ವಸ್ತ್ರ ವಿನ್ಯಾಸ, ರಫ್ತುದಾರರಿಗೆ ಉತ್ತಮ ಆರ್ಡರ್‌ಗಳು ದೊರೆಯುವುದು. ಅಪ್ರತಿಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಸೆಲೆಕ್ಷನ್ ಆಗುವ ಸಾಧ್ಯತೆ ಇದೆ. ನಿಮ್ಮ ರಾಶಿಯಲ್ಲಿ ನಡೆದಿರುವ ತ್ರಿಗ್ರಹಯೋಗ ಮನೆಯಲ್ಲೇ ಒಡಕುಗಳು ಉಂಟಾಗಲು ಕಾರಣವಾಗಬಹುದು.

ಶ್ರೀ ಗುರು ಆರಾಧನೆ. ಶುಭ ಸಂಖ್ಯೆ-8.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ವಾರದಾರಂಭಕ್ಕೆ ಆಟೋಮೊಬೈಲ್ ಉದ್ಯಮಿಗಳಿಗೆ ಹೊಸ ಒಡಂಬಡಿಕೆಗಳು ಉಂಟಾಗುವುದರ ಜೊತೆಗೆ ಧನ ಲಾಭವನ್ನು ಹೊಂದುವರು. ನಿರೀಕ್ಷೆಯಂತೆ ಹಣ ಕೈ ಸೇರಿದರೂ ಕೈ ಬರಿದಾಗಲು ಕ್ಷಣ ಮಾತ್ರ. ಗೃಹ ಕಲಹಗಳನ್ನು ಮನೆಯಲ್ಲೇ ಇತ್ಯರ್ಥ ಮಾಡಿಕೊಳ್ಳಿ. ಆರೋಗ್ಯ ಸಮರ್ಪಕವಾಗಿರದೆ ವೈದ್ಯರ ದರ್ಶನ ಅನಿವಾರ್ಯವಾದೀತು. ಯಾವುದೇ ಗುರುತರ ಕೆಲಸವಿಲ್ಲದೆ ಸುತ್ತಾಡಬೇಡಿ.

ಶ್ರೀ ಸತ್ಯನಾರಾಯಣ ಆರಾಧನೆ. ಶುಭ ಸಂಖ್ಯೆ-3.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಈ ಸಪ್ತಾಹದಲ್ಲಿ ಹೆಚ್ಚಿನ ಗ್ರಹಗಳು ನಿಮ್ಮ ಅನುಕೂಲಕ್ಕಿಲ್ಲದ ಕಾರಣ ತಾಳ್ಮೆಯಿಂದಲೂ ಜಾಣ್ಮೆಯಿಂದಲೂ ಮುಂದಿನ ಹೆಜ್ಜೆ ಇಡಬೇಕಿದೆ. ಸುಖದ ಬದುಕು ತನ್ನಿಂದ ತಾನೇ ಸೃಷ್ಟಿ ಆಗುವುದಿಲ್ಲ. ಅದಕ್ಕೆ ದೈವಕೃಪೆ ಜೊತೆಗೆ ಕಠಿಣ ಪರಿಶ್ರಮದ ಅಗತ್ಯವೂ ಬೇಕು. ವಾರದ ಕಡೆಗೆ ಧನ ಸಂಪಾದನೆಯ ಹೊಸ ಮಾರ್ಗ ತೆರೆದುಕೊಳ್ಳಲಿದೆ. ವಾಹನ ಜೊತೆ ಆತುರ ಗಂಡಾಂತರ.

ಶ್ರೀ ಹನುಮಂತನಿಗೆ ತುಳಸಿ ಸಮರ್ಪಣೆ. ಶುಭ ಸಂಖ್ಯೆ-5.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವೃತ್ತಿಪರ ವ್ಯವಹಾರಗಳಲ್ಲಿ ಉತ್ತಮ ಲಾಭವನ್ನು ಪಡೆಯುತ್ತೀರಿ. ಕುಟುಂಬ ಸದಸ್ಯರಲ್ಲಿ ಉಂಟಾಗಿದ್ದ ಭಿನ್ನಾಭಿಪ್ರಾಯಗಳು ನಿವಾರಣೆಯಾಗುವುದು. ವಾರ ಮಧ್ಯಾಂತರ ನಿಮ್ಮ ದೀರ್ಘ ಪರಿಶ್ರಮದ ಫಲ ದೊರೆತು ಸಂತಸಪಡುವಿರಿ. ನೂತನ ವಸ್ತ್ರಾಭರಣ ಕೊಳ್ಳುವುದರಿಂದ ಶ್ರೀಮತಿಗೆ ಸಂತಸ. ಉದ್ಯೋಗಾರ್ಥಿಗಳು ಸಂದರ್ಶನದಲ್ಲಿ ಯಶಸ್ವಿಯಾಗುವರು. ವಾಯು ಸಂಬಂಧಿ ಕಾಯಿಲೆ ಕಾಡುವುದು.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-2.

ಸರ್ಕಾರಿ ನೌಕರರ ಹೋರಾಟಕ್ಕೆ ನನ್ನ ಬೆಂಬಲ

ಸರ್ಕಾರದ ಜೊತೆ ಮಾತಾಡಿ ಬೇಡಿಕೆ ಈಡೇರಿಸುವೆ ಎಂದ ಶಾಸಕ ದರ್ಶನ್ ಧ್ರುವನಾರಾಯಣ್


ಪ್ರತಿಭಾನ್ವಿತ ಸರ್ಕಾರಿ ನೌಕರರ ಮಕ್ಕಳನ್ನು ಶಾಸಕ ದರ್ಶನ್ ಧ್ರುವನಾರಾಯಣ್ ಅಭಿನಂದಿಸಿದರು

ನಂಜನಗೂಡು, ಜ.20– ರಾಜ್ಯ ಸರ್ಕಾರಿ ನೌಕರರು ಎನ್‌ಪಿಎಸ್ ರದ್ದುಗೊಳಿಸಿ ಹಳೇ ಪಿಂಚಣಿ ಸೌಲಭ್ಯ ಕಲ್ಪಿಸುವಂತೆ ನಡೆಸುತ್ತಿರುವ ನಿರಂತರ ಹೋರಾಟಕ್ಕೆ ನಾನು ಸಹ ಒಬ್ಬ ಶಾಸಕನಾಗಿ ನಿಮ್ಮ ಬೆನ್ನೆಲುಬಾಗಿ ನಿಂತು ಸರ್ಕಾರದ ಗಮನ ಸೆಳೆದು ಸರ್ಕಾರಿ ನೌಕರರ ಬೇಡಿಕೆ ಈಡೇರಿಕೆಗೆ ಪ್ರಾಮಾಣಿಕ ಪ್ರಯತ್ನ ನಡೆಸುತ್ತೇನೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಹೇಳಿದರು.

ನಗರದ ಗುರುಭವನದಲ್ಲಿ ಕರ್ನಾಟಕ ಸರ್ಕಾರಿ ನೌಕರರ ಸಂಘದ ವತಿಯಿಂದ ಏರ್ಪಡಿಸಿದ್ದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಮತ್ತು ಸರ್ವಸದಸ್ಯರ ವಾರ್ಷಿಕ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ಸಾರ್ವಜನಿಕರಿಗೆ ಸೇವೆ ಒದಗಿಸುವಲ್ಲಿ ಸರ್ಕಾರಿ ನೌಕರರಿಗೆ ಜವಾಬ್ದಾರಿ ಹೆಚ್ಚಾಗಿದೆ. ಪ್ರಾಮಾಣಿಕವಾಗಿ ನಿರಂತರ ಸೇವೆಯಲ್ಲಿ ತೊಡಗಿರುವ ಸರ್ಕಾರಿ ನೌಕರರು ನಿವೃತ್ತಿಯಾದಾಗ ಗೌರವದಿಂದ ಬದುಕಲು ಪಿಂಚಣಿ ಸೌಲಭ್ಯ ಅಗತ್ಯವಾಗಿದೆ. ಪಿಂಚಣಿ ಸೌಲಭ್ಯ ಪಡೆದುಕೊಳ್ಳುವುದು ಸರ್ಕಾರಿ ನೌಕರರ ಹಕ್ಕು. ಆದ್ದರಿಂದ ನಿಮ್ಮ ಪ್ರಮುಖ ಬೇಡಿಕೆಗಳಾದ ಎನ್‌ಪಿಎಸ್ ರದ್ದುಗೊಳಿಸಿ ಹಳೇ ಪಿಂಚಣಿ ಯೋಜನೆ ಜಾರಿಗೊಳಿಸುವುದು, 7ನೇ ವೇತನ ಆಯೋಗದ ಸಂಪೂರ್ಣ ಜಾರಿ, ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯ ಜಾರಿಗಾಗಿ ಮುಖ್ಯಮಂತ್ರಿಗಳ ಗಮನ ಸೆಳೆದು ಬೇಡಿಕೆ ಈಡೇರಿಕೆಗೆ ಸಹಕಾರ ನೀಡುತ್ತೇನೆ ಎಂದು ಭರವಸೆ ನೀಡಿದರು.

ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ರಂಗಸ್ವಾಮಿ ಮಾತನಾಡಿ ಸರ್ಕಾರ ಸರ್ಕಾರಿ ನೌಕರರಿಗೆ ನೀಡಬೇಕಾದ ಸವಲತ್ತುಗಳನ್ನು ಸಕಾಲದಲ್ಲಿ ಒದಗಿಸಿದಲ್ಲಿ ಸರ್ಕಾರಿ ನೌಕರರು ಪ್ರಾಮಾಣಿಕವಾಗಿ ತಮ್ಮ ವೃತ್ತಿಯನ್ನು ಸಂತೋಷದಿಂದ ಮಾಡುತ್ತಾರೆ. ಸರ್ಕಾರಿ ನೌಕರರು ಎನ್‌ಪಿಎಸ್ ರದ್ದುಗೊಳಿಸಿ ಒಪಿಎಸ್ ಜಾರಿಗೊಳಿಸುವಂತೆ ನಿರಂತವಾಗಿ ಹೋರಾಟ ನಡೆಸುತ್ತಾ ಬಂದಿದ್ದರೂ ಸಹ ಸರ್ಕಾರ ಸರ್ಕಾರಿ ನೌಕರರ ಬೇಡಿಕೆ ಈಡೇರಿಸಲು ಮುಂದಾಗದಿರುವುದು ಸರಿಯಲ್ಲ, ಆದ್ದರಿಂದ ಶಾಸಕರು ಸರ್ಕಾರಿ ನೌಕರರ ಬೇಡಿಕೆ ಈಡೇರಿಕೆಗೆ ಸರ್ಕಾರದ ಹಂತದಲ್ಲಿ ಧ್ವನಿ ಎತ್ತಬೇಕು ಅಲ್ಲದೆ ರಾಜ್ಯ ಸರ್ಕಾರಿ ನೌಕರರ ಕಟ್ಟೆ ದುರಸ್ತಿಗೆ ಅನುದಾನ ಬಿಡುಗಡೆಗೊಳಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ವಾರ್ಷಿಕ ಸಭೆಯನ್ನು ಯಶಸ್ವಿಗೊಳಿಸಲಾಯಿತು.

ಸಮಾರಂಭದಲ್ಲಿ ಡಿವೈಎಸ್ಪಿ ಗೋವಿಂದರಾಜು, ಬಿಇಓ ಎ.ಟಿ.ಶಿವಲಿಂಗಯ್ಯ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಗೋವಿಂದರಾಜು, ಪ್ರೌಢಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಕಾರಯ್ಯ, ಸತೀಶ್ ದಳವಾಯಿ, ಸರ್ಕಾರಿ ನೌಕರರ ಸಂಘದ ಮಲ್ಲಿಕಾರ್ಜುನ್, ಆಸ್ಲೆಸಿರಿ, ಸಿದ್ದರಾಜು, ಪ್ರಸನ್ನ, ತಿರುಮಲ್ಲೇಶ್, ಕೆ.ಬಿ.ಸತೀಶ್, ಶಿವಕುಮಾರ್, ಮಹೇಶ್, ಮಂಜುನಾಥ್, ಯಶೋಧರ, ಯದುಗಿರೀಶ್, ವೃಂದ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗುಂಟೂರು ಖಾರಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಹನುಮಾನ್(ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಟೇರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಂಗಸಮುದ್ರ (ಕ)	4 ಪ್ರದರ್ಶನಗಳು
ರಾಜಕಮಲ್	
ಹನುಮಾನ್ (ಹಿ)	4 ಪ್ರದರ್ಶನಗಳು
ಸಂಗಂ	
ಹನುಮಾನ್ (ಕ)	4 ಪ್ರದರ್ಶನಗಳು
ಲಿಡೋ	
ಹನುಮಾನ್ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಆಯಲನ್ (ತ)	4 ಪ್ರದರ್ಶನಗಳು
ಪ್ರಭಾ	
ಗುಂಟೂರು ಖಾರಂ(ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಗುಂಟೂರು ಕಾರಂ (ತೆ): ಬೆ.9.05ಕ್ಕೆ, ಮ.3.50ಕ್ಕೆ, ಕಾಟೇರ (ಕ): ಮ.12.15ಕ್ಕೆ, ರಾ.7ಕ್ಕೆ, ರಾ.10.25ಕ್ಕೆ.
ಸ್ಕ್ರೀನ್ 2	ಅಯಲಾನ್ (ತ): ಬೆ.10ಕ್ಕೆ, ಸಂ.4.05ಕ್ಕೆ, ಮೇರಿ ಕ್ರಿಸ್‌ಮಸ್ (ತ): ಮ.1.10ಕ್ಕೆ, ಮೇರಿ ಕ್ರಿಸ್‌ಮಸ್ (ಹಿಂ): ರಾ.7.15ಕ್ಕೆ, ಅಬ್ರಾಹಂ ಓಜ್ಲರ್ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಕ್ಯಾಪ್ಟನ್ ಮಿಲ್ಲರ್ (ಕ): ಬೆ.9.55ಕ್ಕೆ, ಕ್ಯಾಪ್ಟನ್ ಮಿಲ್ಲರ್ (ತ): ಮ.1ಕ್ಕೆ, ರಾ.10.20ಕ್ಕೆ, ಹನುಮಾನ್ (ತೆ): ಸಂ.4.05ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 4	ಕಾಟೇರ (ಕ): ಬೆ.9.35ಕ್ಕೆ, ಗುಂಟೂರು ಕಾರಂ (ತೆ): ಮ.1ಕ್ಕೆ, ರಾ.7.15ಕ್ಕೆ, ರಾ.10.25ಕ್ಕೆ, ಕ್ಯಾಪ್ಟನ್ ಮಿಲ್ಲರ್ (ತ): ಸಂ.4.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಗುಂಟೂರು ಕಾರಂ (ತೆ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಮೇರಿ ಕ್ರಿಸ್‌ಮಸ್ (ಹಿಂ): ಬೆ.8.55ಕ್ಕೆ, ಕಾಟೇರ (ಕ): ಬೆ.11.50ಕ್ಕೆ, ಸಂ.6.50ಕ್ಕೆ, ರಾ.10.30ಕ್ಕೆ, ಅಯಲಾನ್ (ತ): ಮ.3.30ಕ್ಕೆ.
ಸ್ಕ್ರೀನ್ 3	ಕಾಟೇರ (ಕ): ಬೆ.8.50ಕ್ಕೆ, ಕ್ಯಾಪ್ಟನ್ ಮಿಲ್ಲರ್ (ತ): ಮ.12.25ಕ್ಕೆ, ರಾ.10.10ಕ್ಕೆ, ಕ್ಯಾಪ್ಟನ್ ಮಿಲ್ಲರ್ (ಕ): ಮ.3.45ಕ್ಕೆ, ಮೇರಿ ಕ್ರಿಸ್‌ಮಸ್ (ಹಿಂ): ರಾ.7.05ಕ್ಕೆ.
ಸ್ಕ್ರೀನ್ 4	ಸೈಂಧವ್ (ತೆ): ಬೆ.9.10ಕ್ಕೆ, ಮ.3.35ಕ್ಕೆ, ಹನುಮಾನ್ (ತೆ): ಮ.12.10ಕ್ಕೆ, ರಾ.10ಕ್ಕೆ, ಅಯಲಾನ್ (ತ): ಸಂ.6.40ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮ ಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಬೆ.9.35ಕ್ಕೆ, ಮ.3.55ಕ್ಕೆ, ರಾ.10ಕ್ಕೆ, ಡಂಕಿ (ಹಿಂ): ಬೆ.9ಕ್ಕೆ, ಬೆ.11.40ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ಸಂ.6.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ನೆರು (ಮ): ರಾ.10.10ಕ್ಕೆ, ಸಲಾರ್ –1 (ಮ): ಸಂ.6.35ಕ್ಕೆ, ಸಲಾರ್–1 (ಹಿಂ): ಮ.2.50ಕ್ಕೆ, ಸಂ.5.55ಕ್ಕೆ, ರಾ.10ಕ್ಕೆ, ಸಲಾರ್–1 (ಕ): ಬೆ.8.05ಕ್ಕೆ, ಬೆ.11.15ಕ್ಕೆ, ಮ.3ಕ್ಕೆ, ಸಂ.6.25ಕ್ಕೆ, ಸಲಾರ್– 1(ತೆ): ಬೆ.7.10ಕ್ಕೆ, ಬೆ.7.40ಕ್ಕೆ, ಬೆ.8.10ಕ್ಕೆ, ರಾ.10.45ಕ್ಕೆ, ಬೆ.11.45ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಮ.2.20ಕ್ಕೆ, ಸಂ.6.55ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಚಾಕುವಿನಿಂದ ಹಲ್ಲೆ ನಡೆಸಿ ಮಹಿಳೆಯರನ್ನು ದೋಚಿದ್ದ ಪ್ರಕರಣ

ಬೆಂಗಳೂರಿನ ನಾಲ್ವರು ಆರೋಪಿಗಳ ಬಂಧನ


ಆರೋಪಿಗಳನ್ನು ಬಂಧಿಸಿದ ಬೆಟ್ಟದಪುರ ಪೊಲೀಸರು

ಬೆಟ್ಟದಪುರ,ಜ.20– ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದವರಿಗೆ ಕಾಫಿ ತೆಗೆದುಕೊಂಡು ಹೋಗುತ್ತಿದ್ದ ಮಹಿಳೆಯರಿಬ್ಬರ ಮೇಲೆ ಚಾಕುವಿನಿಂದ ಹಲ್ಲೆ ನಡೆಸಿ ಒಡವೆಗಳನ್ನು ದೋಚಿ ಪರಾರಿಯಾಗಿದ್ದ ನಾಲ್ವರನ್ನು ಬೆಟ್ಟದಪುರ ಪೊಲೀಸರು ಬಂಧಿಸಿ, ಅವರಿಂದ ಚಿನ್ನದ ಆಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

ಬೆಂಗಳೂರಿನ ಬ್ಯಾಡರ ಹಳ್ಳಿಯ ನಿವಾಸಿಗಳು ಬಂಧಿತರಾದವರಾಗಿದ್ದು, ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಜ.12ರಂದು ಸಂಘರ ಶೆಟ್ಟರಹಳ್ಳಿಯ ಸ್ವಾತಿ ಮತ್ತು ರಮ್ಯ ಅವರುಗಳು ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದ ತಮ್ಮ ಕುಟುಂಬದವರಿಗೆ ಕಾಫಿ ತೆಗೆದುಕೊಂಡು ಹೋಗುತ್ತಿದ್ದಾಗ ಗ್ರಾಮದ ಹೊರವಲಯದಲ್ಲಿ ಹೆಲ್ಮೆಟ್ ಧರಿಸಿಕೊಂಡು ಎರಡು ಬೈಕ್‌ಗಳಲ್ಲಿ ಬಂದ ನಾಲ್ವರು ಖದೀಮರು ವಿಳಾಸ ಕೇಳುವ ನೆಪದಲ್ಲಿ ಬಂಗಾರದ ಸರ ಮತ್ತು ಉಂಗುರವನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದ್ದಾರೆ.

ಖದೀಮರ ಪ್ಲಾನ್‌ಗೆ ಪ್ರತಿರೋಧ ತೋರಿದ ಇವರಿಬ್ಬರ ಮೇಲೆ ಚಾಕುವಿನಿಂದ ಹಲ್ಲೆ ನಡೆಸಿ ಸರ ಮತ್ತು ಉಂಗುರವನ್ನು ಕಿತ್ತುಕೊಂಡು ಪರಾರಿಯಾಗಿದ್ದರು. ಇವರಿಬ್ಬರ ಗಲಾಟೆ ಕೇಳಿ ಮತ್ತು ವಿಷಯ ತಿಳಿದ ಗ್ರಾಮಸ್ಥರು ಸುತ್ತ–ಮುತ್ತ ಹುಡುಕಾಡಿದರಾದರೂ ಆರೋಪಿಗಳು ಪರಾರಿಯಾಗಿದ್ದರು.

ಈ ವೇಳೆ ಸ್ಥಳಕ್ಕೆ ಭೇಟಿ ನೀಡಿದ ಹಿರಿಯ ಪೊಲೀಸ್ ಅಧಿಕಾರಿಗಳು ಸರ್ಕಲ್ ಇನ್ಸ್‌ಪೆಕ್ಟರ್ ಎಂ.ಕೆ.ದೀಪಕ್ ನೇತೃತ್ವದಲ್ಲಿ ತಂಡವನ್ನು ರಚಿಸಿದ್ದರು. ಘಟನೆ ನಡೆದ ಒಂದೇ ವಾರದಲ್ಲಿ ಆರೋಪಿಗಳನ್ನು ಬಂಧಿಸಿ, ಅವರಿಂದ 6ಲಕ್ಷ ರೂ. ಮೌಲ್ಯದ ಆಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

ಈ ಕಾರ್ಯಾಚರಣೆಯಲ್ಲಿ ಸಿಬ್ಬಂದಿಗಳಾದ ಗಿರೀಶ್, ಅಲ್ಲಂಪಾಶ, ರವೀಶ್, ಸತೀಶ್, ಚೇತನ್, ವಸಂತ್, ಕುಮಾರ್, ಸುನಿತಾ ಅವರುಗಳು ಪಾಲ್ಗೊಂಡಿದ್ದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಟ್ಕರ್ ಅವರು ಪೊಲೀಸರ ಈ ಕಾರ್ಯಾಚರಣೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

ಬಗರ್ ಹುಕುಂ ಸಾಗುವಳಿ ಪತ್ರಕ್ಕೆ ಒತ್ತಾಯಿಸಿ, ರಾಜ್ಯ ಪ್ರಾಂತೀಯ ರೈತ ಸಂಘ ಪ್ರತಿಭಟನೆ


ರಾಜ್ಯ ಪ್ರಾಂತೀಯ ರೈತ ಸಂಘದ ಪದಾಧಿಕಾರಿಗಳು ಬಗರ್ ಹುಕುಂ ರೈತರ ಸಾಗುವಳಿ ಪತ್ರಕ್ಕಾಗಿ ಒತ್ತಾಯಿಸಿ ಪ್ರತಿಭಟನೆ ನಡೆಸಿದರು.

ಹುಣಸೂರು, ಜ.20– ರಾಜ್ಯ ಪ್ರಾಂತೀಯ ರೈತ ಸಂಘದ ಪದಾಧಿಕಾರಿಗಳು ಬಗರ್ ಹುಕುಂ ರೈತರ ಸಾಗುವಳಿ ಪತ್ರಕ್ಕಾಗಿ ಒತ್ತಾಯಿಸಿ ನಗರದ ಉಪವಿಭಾಗಾಧಿಕಾರಿಗಳ ಕಛೇರಿ ಮುಂದೆ ಪ್ರತ್ರಿಭಟನೆ ನಡೆಸಿದರು.

ಜಿಲ್ಲಾದ್ಯಕ್ಷ ಚಿಕ್ಕಣ್ಣೇಗೌಡ ಪ್ರತಿಭಟನಕಾರರನ್ನು ಉದ್ದೇಶಿಸಿ ಮಾತನಾಡಿ ಕಳೆದ 50–60 ವರ್ಷಗಳಿಂದ ಗೋಮಾಳ, ಗುಂಡು ತೋಪು, ಅರಣ್ಯ ಭೂಮಿಗಳಲ್ಲಿ ಬಡ ಬಗರ್ ಹುಕುಂ ಸಾಗುವಳಿದಾರರು ಉಳುಮೆ ಮಾಡುತ್ತಾ ತಮ್ಮ ಜೀವನ ಸಾಗಿಸುತ್ತಿದ್ದಾರೆ. ಅಲ್ಲದೆ ಕರ್ನಾಟಕ ಪಾಂತ್ರ ರೈತ ಸಂಘದ ಹೋರಾಟದ ಒತ್ತಡಕ್ಕೆ ಮಣಿದು ಸರ್ಕಾರ ಫಾರಂ ನಂಬರ್ 57 ರಲ್ಲಿ ಅರ್ಜಿ ಸಲ್ಲಿಸಲು ಅವಕಾಶ ನೀಡಿತ್ತು. ಈ ಹಿಂದೆ ಫಾರಂ ನಂಬರ್ 50–57 ರಲ್ಲಿ ಅರ್ಜಿ ಸಲ್ಲಿಸಿದ್ದರೂ ಆ ಅರ್ಜಿಗಳನ್ನು ಇನ್ನೂ ಸಹ ವಿಲೇವಾರಿ ಮಾಡಿಲ್ಲ. ಸಾಗುವಳಿ ಪತ್ರ ಇಲ್ಲದ ಕಾರಣ ಸರ್ಕಾರಿ ಸವಲತ್ತುಗಳು, ಸಾಲ ಸೌಲಭ್ಯ, ಬರ ಪರಿಹಾರ ಇತ್ಯಾದಿ ಸೌಲಭ್ಯಗಳಿಂದ ಈ ಸಾಗುವಳಿ ರೈತರು ವಂಚಿತರಾಗಿದ್ದಾರೆ ಎಂದರು

ಹಕ್ಕೊತ್ತಾಯಗಳು: ಗೋಮಾಳ, ಅರಣ್ಯ ಭೂಮಿ, ಸರ್ಕಾರಿ ಜಾಗಗಳಲ್ಲಿ ಕಳೆದ 50–60 ವರ್ಷಗಳಿಂದ ಸಾಗುವಳಿ ಮಾಡುತ್ತಿರುವ ಬಡ ಸಾಗುವಳಿದಾರರಿಗೆ ಸಾಗುವಳಿ ಪತ್ರ ನೀಡಬೇಕು.

ತಾಲೂಕಿನ ಎಲ್ಲಾ ಗ್ರಾಮಗಳಲ್ಲಿರುವ ಗೋವುಗಳ ಸಮೀಕ್ಷೆ ಮಾಡಿ ಆ ಹಸುಗಳಿಗೆ ಬೇಕಾದ ಭೂಮಿಯನ್ನು ಬಿಟ್ಟು ಉಳಿದ ಭೂಮಿಯನ್ನು ಗೋಮಾಳದ ಭೂಮಿಯಲ್ಲಿ ಸಾಗುವಳಿ ಮಾಡುತ್ತಿರುವ ರೈತರಿಗೆ ಹಂಚಲು ಕ್ರಮವಹಿಸಬೇಕು.

ಆದಿವಾಸಿಯೇತರ ಅರಣ್ಯ ಭೂಮಿ ಬಡ ಸಾಗುವಳಿದಾರರಿಗೆ ಹಕ್ಕು ಪತ್ರ ದೊರೆಯುವಂತೆ ಅರಣ್ಯ ಹಕ್ಕು ಮಾನ್ಯತಾ ಕಾಯ್ದೆಗೆ ತಿದ್ದುಪಡಿ ಮಾಡಿ ಹಕ್ಕು ಪತ್ರ ನೀಡಬೇಕು.

ಪ್ರತಿಭಟನೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಗದೀಶ್ ಸೂರ್ಯ, ತಾಲೂಕು ಅಧ್ಯಕ್ಷ ಚಂದ್ರಶೇಖರ್, ತಾಲೂಕು ಕಾರ್ಯದರ್ಶಿ ಪುಟ್ಟರಾಜು ಹಾಗೂ ನೂರಾರು ರೈತರು ಭಾಗವಹಿಸಿದ್ದರು.

ಮಾದೇಗೌಡನಹುಂಡಿ ಡೇರಿ ಕಾಂಗ್ರೆಸ್ ಮಡಿಲಿಗೆ


ನೂತನ ಅಧ್ಯಕ್ಷರಾಗಿ ಪುನೀತ್ ಕುಮಾರ್, ಉಪಾಧ್ಯಕ್ಷರಾಗಿ ಎಸ್.ಅಂಬಿಕಾ ಆಯ್ಕೆಯಾದವರನ್ನು ಅಭಿನಂದಿಸಲಾಯಿತು.

ತಿ.ನರಸೀಪುರ, ಜ.20– ತಾಲೂಕಿನ ಮಾದೇಗೌಡನಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘದ ವರಿಷ್ಠರ ಸ್ಥಾನ ಕಾಂಗ್ರೆಸ್ ಪಕ್ಷದ ಬೆಂಬಲಿತರ ಪಾಲಾಗಿದ್ದು ನೂತನ ಅಧ್ಯಕ್ಷರಾಗಿ ಪುನೀತ್ ಕುಮಾರ್, ಉಪಾಧ್ಯಕ್ಷರಾಗಿ ಎಸ್. ಅಂಬಿಕಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಆವರಣದಲ್ಲಿ ಶನಿವಾರ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನದ ಆಯ್ಕೆಗಾಗಿ ನಡೆದ ಚುನಾವಣೆಯಲ್ಲಿ ಈ ಇಬ್ಬರನ್ನು ಹೊರತು ಪಡಿಸಿ ಬೇರೆ ಯಾರು ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿ ಮಂಜು ಅಧ್ಯಕ್ಷ –ಉಪಾಧ್ಯಕ್ಷರ ಅವಿರೋಧ ಆಯ್ಕೆಯನ್ನು ಪ್ರಕಟಿಸಿದರು.

ಸಂಘದ ನಿರ್ದೇಶಕರುಗಳಾದ ಎಂ.ಪಿ. ಪ್ರಭಾಕರ್, ಸಂಪತ್ ಕುಮಾರ್, ನವೀನ್, ನಾಗರಾಜು, ಗಣಪತಿಚಾರಿ, ರಾಮಚಂದ್ರ, ರತ್ನಮ್ಮ ಚುನಾವಣಾ ಸಭೆಯಲ್ಲಿ ಹಾಜರಿದ್ದು ಸಹಕಾರ ಸಂಘದ ವರಿಷ್ಠರ ಆಯ್ಕೆಗೆ ಅನುಮೋದನೆ ನೀಡಿದರೇ ಮತ್ತೊಬ್ಬ ನಿರ್ದೇಶಕ ಚುಂಚೇಗೌಡ ಸಭೆಗೆ ಗೈರಾಗಿದ್ದರು.

ಈ ವೇಳೆ ನೂತನ ಅಧ್ಯಕ್ಷ–ಉಪಾಧ್ಯಕ್ಷರನ್ನುಅಭಿನಂದಿಸಿ ಮಾತನಾಡಿದ ಎಪಿಎಂಸಿ ಮಾಜಿ ಅಧ್ಯಕ್ಷ ಅನಿಲ್ ಕುಮಾರ್ ಡೈರಿ ಅಧ್ಯಕ್ಷ–ಉಪಾಧ್ಯಕ್ಷರನ್ನು ಒಮ್ಮತದಿಂದ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಸರ್ಕಾರದಿಂದ ಯಾವುದೇ ಸೌಲಭ್ಯಗಳು ಬಂದರೂ ಹಾಲು ಉತ್ಪಾದಕರಿಗೆ ಸಮರ್ಪಕವಾಗಿ ತಲುಪಿಸುವ ಕೆಲಸ ಮಾಡಬೇಕು. ಮೈಮುಲ್‌ನಿಂದ ಹಾಲು ಸರಬರಾಜುದಾರರಿಗೆ ಬರುವ ಬೋನಸ್ ಹಣವನ್ನು ನೇರವಾಗಿ ತಲುಪಿಸುವುದು ಹಾಗೂ ರೈತರಿಗೆ ಹೈನುಗಾರಿಕೆ ಸಾಲವನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುವಂತೆ

ಈ ವೇಳೆ ಡೇರಿ ಮಾಜಿ ಅಧ್ಯಕ್ಷ ಮಾದೇಗೌಡ ಗ್ರಾಪಂ. ಸದಸ್ಯೆ ಸುಧಾರಾಜ್, ವೈರಮುಡಿ ಮಾಜಿ ಸದಸ್ಯ ಹೊಂಬೇ ಗೌಡ, ಮಾಜಿ ಅಧ್ಯಕ್ಷ ಚುಂಚೇಗೌಡ, ಪ್ರೇಮಕುಮಾರ್, ಮಾದೇಗೌಡನಹುಂಡಿ ಪಿಎಸಿಸಿ ಮಾಜಿ ಉಪಾಧ್ಯಕ್ಷನಾಗೇಂದ್ರ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರೇವಣ್ಣ ಸೇರಿದಂತೆ ಗ್ರಾಮಸ್ಥರು, ಯಜಮಾನರು ಮತ್ತಿತರರಿದ್ದರು.

ಕುಡಿದ ಮತ್ತಿನಲ್ಲಿ ಪತ್ನಿಯನ್ನು ಕೊಂದ ಪತಿರಾಯ


ಮಾಚಿ

ಮಲ್ಕುಂಡಿ, ಜ.20– ಕುಡಿದ ಮತ್ತಿನಲ್ಲಿ ಪತಿರಾಯನೊಬ್ಬ ಪತ್ನಿಯನ್ನು ಕೊಲೆ ಮಾಡಿರುವ ಘಟನೆ ನಂಜನಗೂಡು ತಾಲೂಕಿನ ಕೊತ್ತನಹಳ್ಳಿ ಕಾಲೋನಿಯಲ್ಲಿ ಶುಕ್ರವಾರ ರಾತ್ರಿ ಸಂಭವಿಸಿದೆ.

ಗ್ರಾಮದ ವಾಸಿ ಮಾಚಿ(23) ತನ್ನ ಗಂಡನಿಂದ ಕೊಲೆಯಾದ ದುರ್ದೈವಿ. ಮಾಚಿ ಪತಿ ರವಿ ಶುಕ್ರವಾರ ರಾತ್ರಿ ಕುಡಿದು ಮನೆಗೆ ಬಂದಿದ್ದಾನೆ. ಕುಡಿದ ಮತ್ತಿನಲ್ಲಿದ್ದ ಪತಿಯನ್ನು ಮಾಚಿ ಕೆಣಕಿದ್ದಾಳೆ. ಈ ವೇಳೆ ಇಬ್ಬರಿಗೂ ಮಾತಿನ ಚಕಮಕಿ ನಡೆದಿದೆ. ಕುಡಿದ ಅಮಲಿನಲ್ಲಿದ್ದ ರವಿ ಪತ್ನಿ ಮಾಚಿ ಮೇಲೆ ಹಲ್ಲೆ ನಡೆಸಿದ್ದಾನೆ. ಹೊಡೆದ ರಭಸಕ್ಕೆ ಮಾಚಿ ಸ್ಥಳದಲ್ಲೇ ಮೃತಪಟ್ಟಿದ್ದಾಳೆ. ವಿಷಯ ತಿಳಿದ ಮೈಸೂರಿನ ಅಡಿಷನಲ್ ಎಸ್ಪಿ ನಂದಿನಿ, ಹುಲ್ಲಹಳ್ಳಿ ಠಾಣೆಯ ಪಿಎಸ್‌ಐ ರಮೇಶ್ ಕಟ್ಟಿ, ಡಿವೈಎಸ್ಪಿ ಗೋವಿಂದರಾಜು ಸ್ಥಳಕ್ಕೆ ಭೇಟಿ ನೀಡಿ ಆರೋಪಿ ರವಿಯನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಹೊಸೂರು ಕಲ್ಲಹಳ್ಳಿ ಡೇರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಕೆ.ಆರ್.ನಗರ, ಜ.20– ತಾಲೂಕಿನ ಹೊಸೂರು ಕಲ್ಲಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆಯಲ್ಲಿ ಮಹೇಂದ್ರ ಅಧ್ಯಕ್ಷರಾಗಿ, ಕರಿಯಯ್ಯ ಉಪಾಧ್ಯಕ್ಷರಾಗಿ ಅಯ್ಕೆಯಾದರು. ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಮಹೇಂದ್ರ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಕರಿಯಯ್ಯ ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಇವರ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ರವಿ ಘೋಷಿಸಿದರು.

ಅಧ್ಯಕ್ಷರಾಗಿ ಆಯ್ಕೆಯಾದ ಮಹೇಂದ್ರ ಅವರು ಮಾತನಾಡಿ, ಅಧ್ಯಕ್ಷರಾಗಿ ಆಯ್ಕೆ ಮಾಡಲು ಕಾರಣರಾದ ಸಂಘದ ಸರ್ವ ಸದಸ್ಯರಿಗೂ ಅಭಿನಂದನೆ ಸಲ್ಲಿಸಿದರು. ತಮ್ಮ ಆಡಳಿತ ಅವಧಿಯಲ್ಲಿ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಂಘವನ್ನು ಅಭಿವೃದ್ಧಿ ಮಾಡುವ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಕಾರ್ಯದರ್ಶಿ ಬಸವಣ್ಣ ಕೆ.ಎನ್, ಸದಸ್ಯರಾದ ಪುರುಷೋತ್ತಮ, ಮಹದೇವ, ಶಿವನಾಯಕ, ಬಸವರಾಜೇಗೌಡ, ಶಿವಮ್ಮ, ಕುಮಾರ, ಹರೀಶ್ ಕೆ.ಜಿ, ಚಂದ್ರೇಗೌಡ ಗ್ರಾಮದ ಮುಖಂಡರಾದ ನಟರಾಜು, ಮಹೇಂದ್ರ ಸುರೇಶ್, ಮಹದೇವಯ್ಯ, ದೇವರಾಜೇಗೌಡ, ಕೆಂಪರಾಜು, ಮೋಹನ್ ಕುಮಾರ್ ಸೇರದಿಂತೆ ಇನ್ನಿತರರು ಹಾಜರಿದ್ದರು.

ನೇಮಕ



ಮೈಸೂರು, ಜ. 20– ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆದೇಶದ ಮೇರೆಗೆ ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಸಮಿತಿಯ ಹೆಚ್ಚುವರಿ ಕಾರ್ಯದರ್ಶಿಯಾಗಿ ಜಯನಗರದ ಎಸ್.ಶಿವಪ್ಪ ಅವರನ್ನು ನೇಮಕ ಮಾಡಲಾಗಿದೆ ಎಂದು ಸಮಿತಿ ಅಧ್ಯಕ್ಷ ಆರ್.ಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಲ್ಟ್‌ನಿಂದ ಪತ್ನಿಗೆ ಮಾರಣಾಂತಿಕ ಹಲ್ಲೆ ನಡೆಸಿ ಜೈಲು ಸೇರಿದ ಪತಿ


ಅಂಬ್ರೀನ್


ಯಾಸಿನ್

ಹುಣಸೂರು, ಜ.20– ಅಕ್ರಮ ಸಂಭಂಧ ಪ್ರಶ್ನಿಸಿದ ಪತ್ನಿಗೆ ಬೆಲ್ಟ್‌ನಿಂದ ಮಾರಣಾಂತಿಕವಾಗಿ ಥಳಿಸಿದ್ದ ಪತಿರಾಯನನ್ನು ಹುಣಸೂರು ಪೊಲೀಸರು ಬಂಧಿಸಿ ನ್ಯಾಯಾಂಗ ಬಂದನಕ್ಕೆ ಒಪ್ಪಿಸಿದ್ದಾರೆ. ಈ ಘಟನೆ ತಾಲೂಕಿನ ಹಂಚ್ಯಾ ಗ್ರಾಮದಲ್ಲಿ ಸಂಭವಿಸಿದೆ. ಗ್ರಾಮದ ಸಯ್ಯದ್ ಮೊಕಿದೀನ್ ಅವರ ಮಗ ಸಯ್ಯದ್ ಯಾಸಿನ್ (32) ಜೈಲು ಸೇರಿದ ಆರೋಪಿಯಾಗಿದ್ದು, ಈತನ ಪತ್ನಿ ಅಂಬ್ರೀನ್ ಭಾನು(31) ಥಳಿತದಿಂದ ಗಾಯಗೊಂಡಿದ್ದು, ಹುಣಸೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಅಂಬ್ರೀನಾ ಕಳೆದ 8 ವರ್ಷಗಳ ಹಿಂದೆ ಸಯ್ಯದ್ ಯಾಸಿನ್‌ನೊಂದಿಗೆ ಮದುವೆಯಾಗಿದ್ದು, ಮೂವರು ಮಕ್ಕಳಿದ್ದಾರೆ. ಈಕೆಯ ಪತಿ ಕೆಲವು ಟೂರಿಸ್ಟ್ ಬಸ್‌ಗಳನ್ನು ಇಟ್ಟುಕೊಂಡು ಬಾಡಿಗೆಗೆ ಕಳುಹಿಸುತ್ತಿದ್ದ. ಈತ ಮಹಿಳೆಯೊಬ್ಬರೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದು, ಪತ್ನಿ ಮತ್ತು ಮಕ್ಕಳನ್ನು ನಿರ್ಲಕ್ಷಿಸುತ್ತಿದ್ದ. ಇದನ್ನು ಪ್ರಶ್ನಿಸಿದ ಪತ್ನಿಗೆ ಆರೋಪಿ ಬೆಲ್ಟ್‌ನಿಂದ ಥಳಿಸಿದ್ದು, ಇದರಿಂದ ತೀವ್ರವಾಗಿ ಗಾಯಗೊಂಡ ಅಂಬ್ರೀನಾ ಗ್ರಾಮಾಂತರ ಪೊಲೀಸರಿಗೆ ದೂರು ನೀಡಿದರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಈಕೆ ತನ್ನ ಹೇಳಿಕೆ ದಾಖಲಿಸಿದ್ದಾರೆ.

ಪತ್ನಿಯ ಮೇಲೆ ಮಾರಣಾಂತಿವಾಗಿ ಹಲ್ಲೆ ನಡೆಸಿ ಪರಾರಿಯಾಗಿದ್ದ ಸಯ್ಯದ್ ಯಾಸಿನ್ ಇಂದು ಹುಣಸೂರು ಬಸ್ ನಿಲ್ದಾಣದಲ್ಲಿ ಬಸ್ಸಿಗಾಗಿ ಕಾಯುತ್ತಿದ್ದಾಗ ಪೊಲೀಸರು ಆರೋಪಿಯನ್ನು ಬಂಧಿಸಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ನ್ಯಾಯಾಧೀಶರು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಅಯೋಧ್ಯೆಯ ಬಾಲ ರಾಮನ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ

ಬೈರಾಪುರ ಗ್ರಾಮ ದೇವತೆ ದೇವಸ್ಥಾನ ಸ್ವಚ್ಛತೆ


ಬಿಜೆಪಿ ಕಾರ್ಯಕರ್ತರಿಂದ ಹಿತ್ತಲ ಮಾರಮ್ಮ ದೇವಸ್ಥಾನದ ಸ್ವಚ್ಛತಾ ಕಾರ್ಯ

ತಿ.ನರಸೀಪುರ, ಜ.20– ಅಯೋಧ್ಯೆಯ ಶ್ರೀರಾಮ ಮಂದಿರದ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಮಕರ ಸಂಕ್ರಾಂತಿಯಿಂದ ರಾಜ್ಯದ ಎಲ್ಲಾ ದೇವಾಲಯಗಳಲ್ಲಿ ಸ್ವಚ್ಛತಾ ಕಾರ್ಯ ನಡೆಸಲು ಪ್ರಧಾನಿ ನರೇಂದ್ರ ಮೋದಿ ಅವರು ಕರೆ ನೀಡಿರುವುದರಿಂದ ಪಟ್ಟಣದ ಬೈರಾಪುರ ಗ್ರಾಮ ದೇವತೆ ಹಿತ್ತಲ ಮಾರಮ್ಮ ದೇವಸ್ಥಾನದ ಸ್ವಚ್ಛತಾ ಕಾರ್ಯವನ್ನು ಜಿಲ್ಲಾ ಬಿಜೆಪಿ ಗ್ರಾಮಾಂತರ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ ನೇತೃತ್ವದಲ್ಲಿ ನಡೆಸಲಾಯಿತು.

ಸ್ವಚ್ಛತಾ ಕಾರ್ಯದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಯೋಧ್ಯೆಯಲ್ಲಿ ಜ.22ರಂದು ಅಯೋಧ್ಯೆ ಶ್ರೀರಾಮ ಮಂದಿರ ಉದ್ಘಾಟನೆಗೆ ಭವ್ಯ ಸ್ವಾಗತ ಕೋರಲು ಬಿಜೆಪಿ ಕಾರ್ಯಕರ್ತರು ಪ್ರತಿನಿತ್ಯ ತಮ್ಮ ತಮ್ಮ ಗ್ರಾಮಗಳ ವ್ಯಾಪ್ತಿಯಲ್ಲಿರುವ ದೇವಾಲಯಗಳನ್ನು ಸ್ವಚ್ಛಗೊಳಿಸುವಂತೆ ಪ್ರಧಾನಿ ನರೇಂದ್ರ ಮೋದಿಯವರು ಕರೆ ಕೊಟ್ಟಿದ್ದಾರೆ, ಅದರಂತೆ ನಾವುಗಳು ಪ್ರತಿನಿತ್ಯ ದೇವಾಲಯಗಳ ಸ್ವಚ್ಛತಾ ಕಾರ್ಯದಲ್ಲಿ ತೊಡಗಿಸಿಕೊಂಡು ರಾಮ ರಾಮ ಎಂದು ಮನದಟ್ಟು ಮಾಡುವ ಮೂಲಕ ರಾಮನ ಹುಟ್ಟುಹಬ್ಬಕ್ಕೆ ಇಡೀ ರಾಜ್ಯವೇ ಸಿಂಗಾರ ಗೊಳ್ಳುವಂತೆ ಜನತೆಯಲ್ಲಿ ಉತ್ಸಾಹ ಮೂಡಿಸಲಾಗುತ್ತಿದೆ ಎಂದರು,

ಮೈಸೂರು ಜಿಲ್ಲೆಯಲ್ಲಿ ಬಾಲ ರಾಮನ ಪ್ರತಿಷ್ಠಾಪನೆಯ ದಿನ ಪ್ರತಿ ಮನೆಮನೆಗಳಲ್ಲೂ ದೀಪ ಹಚ್ಚಿ, ದೀಪಾವಳಿಯನ್ನು ಆಚರಿಸುವ ರೀತಿಯಲ್ಲಿ ಜಿಲ್ಲೆಯ ಜನತೆ ಮನೆ ಮುಂಭಾಗ ರಂಗೋಲಿಗಳನ್ನು ಬಿಡಿಸಿ ಸಂಭ್ರಮದಿಂದ ಆಚರಿಸುವಂತೆ ಮಹದೇವಸ್ವಾಮಿ ಮನವಿ ಮಾಡಿದರು,

ಬಿಜೆಪಿ ರಾಜ್ಯಾದ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಆದೇಶದಂತೆ ಅವರು ಕೂಡ ಪಕ್ಷದ ಕಾರ್ಯಕರ್ತರೊಡಗೂಡಿ ಪ್ರತಿದಿನ ದೇವಾಲಯ ಸ್ವಚ್ಛತಾ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ, ರಾಜ್ಯಾಧ್ಯಕ್ಷರ ಸೂಚನೆಯಂತೆ ನಾವು ಸಹ ಪ್ರತಿ ದೇವಾಲಯಗಳಿಗೆ ತೆರಳಿ ಸ್ವಚ್ಛತಾ ಕಾರ್ಯದಲ್ಲಿ ತೊಡಿಸಿಕೊಂಡು ಮತ್ತೊಮ್ಮೆ ಮೋದಿ ಎಂಬ ಗೋಡೆ ಬರಹಗಳನ್ನು ಬರೆಯುವ ಮೂಲಕ ಜನರಲ್ಲಿ ರಾಮಮಂದಿರದ ಉದ್ಘಾಟನೆಯ ಅರಿವು ಮೂಡಿಸಲಾಗುತ್ತಿದೆ ಎಂದರು,

ಜಿಲ್ಲಾ ಬಿಜೆಪಿ ಕಾರ್ಯದರ್ಶಿ ವೆಂಕಟರಮಣ ಶೆಟ್ಟಿ, ಭಾಗಳೀ ಯೋಗೇಶ್ ಮಣಿಕಂಠರಾಜ್ ಗೌಡ ಎಸ್ ಟಿ ಮೋರ್ಚಾ ಉಪಾಧ್ಯಕ್ಷ ಮುದ್ದುಕೃಷ್ಣ (ಕಿಟ್ಟಿ), ಕೀಳನಪುರಪ್ರಕಾಶ್, ಬೈರಾಪುರ ದಿಲೀಪ್, ಭರತ್, ತಿರುಮಕೂಡಲು ದೀಪು, ಹೇಮಂತ್, ಅಜಿತ್, ಸಾಗರ್, ರಾಜೇಶ್, ಆನಂದ್, ದಿನಿ ಮತ್ತಿತರರು ಉಪಸ್ಥಿತರಿದ್ದರು,


ತಿ. ನರಸೀಪುರ ತಾಲೂಕಿನ ಯಡದೊರೆ ಸರ್ಕಾರಿ ಪ್ರೌಢಶಾಲೆಯ ವಿಜೇತ ಥ್ರೋಬಾಲ್ ಕ್ರೀಡಾಪಟುಗಳಿಗೆ ಕ್ರೀಡಾ ಉಡುಪುಗಳನ್ನು ವರುಣ ವಿಧಾನಸಭಾ ಕ್ಷೇತ್ರದ ಎಸ್‌ಟಿ ಮೋರ್ಚಾ ಉಪಾಧ್ಯಕ್ಷ ಮುದ್ದುಕೃಷ್ಣ ನೀಡಿದರು. ಮುಖ್ಯ ಶಿಕ್ಷಕಿ ಎಂ.ಎನ್.ಪವಿತ್ರ, ದೈಹಿಕ ಶಿಕ್ಷಕ ಎಂ.ಜಯಪ್ಪ, ವಿಜಯಾನಂದ ಕುಮಾರ್, ಯೋಗೇಶ್, ಜ್ಯೋತಿ, ರುಕ್ಸಾನ ತಬಸಮ್, ಮನೋರ ಮ.ಶೋಭಾ, ವನಿತಾ ಅವರುಗಳು ಉಪಸ್ಥಿತರಿದ್ದರು.

ಯಾವುದೇ ಪಕ್ಷದ ಚಿಹ್ನೆ ಬಳಸದಂತೆ ಸಿಎಂ ಇಬ್ರಾಹಿಂಗೆ ಕೋರ್ಟ್ ಆದೇಶ



ಬೆಂಗಳೂರು: ಯಾವುದೇ ಪಕ್ಷದ ಚಿಹ್ನೆ ಬಳಸದಂತೆ ಸಿಎಂ ಇಬ್ರಾಹಿಂಗೆ ಸಿಟಿ ಸಿವಿಲ್ ಕೋರ್ಟ್ ಆದೇಶ ನೀಡಿದೆ.

ಹೆಚ್‌ಡಿಡಿ ಕುಟುಂಬದ ವಿರುದ್ಧವೇ ಸಿಎಂ ಇಬ್ರಾಹಿಂ ತೊಡೆ ತಟ್ಟಿದರು. ಈ ಹಿನ್ನೆಲೆಯಲ್ಲಿ ಹೆಚ್.ಡಿ. ದೇವೇಗೌಡರ ನೇತೃತ್ವದಲ್ಲಿ ಜೆಡಿಎಸ್ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ನಡೆಸಿ ಸಿಎಂ ಇಬ್ರಾಹಿಂ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಲಾಗಿತ್ತು ಆದರೆ ಜೆಡಿಎಸ್‌ನಿಂದ ಉಚ್ಚಾಟನೆಯಾದರೂ ಸಿಎಂ ಇಬ್ರಾಹಿಂ ಜೆಡಿಎಸ್ ಪಕ್ಷದ ಚಿನ್ಹೆ ಬಳಸುತ್ತಿದ್ದರು. ಈ ಪ್ರಕರಣ ಕೋರ್ಟ್ ಮೆಟ್ಟಿಲೇರಿತ್ತು.

ಇದೀಗ ಯಾವುದೇ ಪಕ್ಷದ ಚಿಹ್ನೆ ಬಳಸದಂತೆ ಆದೇಶ ನೀಡುವುದರ ಜೊತೆಗೆ ಜೆಡಿಎಸ್ ಪಕ್ಷದ ಚಿಹ್ನೆ, ಲೆಟರ್ ಹೆಡ್ ಬಳಕೆ ಮಾಡುವಂತಿಲ್ಲ ಹಾಗೂ ಪಕ್ಷದ ಕುರಿತಾಗಿ ಮಾಧ್ಯಮ ಗೋಷ್ಠಿ ನಡೆಸುವಂತಿಲ್ಲ. ಇಷ್ಟು ಮಾತ್ರವಲ್ಲದೇ ಪದಾಧಿಕಾರಿಗಳನ್ನೂ ನೇಮಕ ಮಾಡುವಂತಿಲ್ಲ ಎಂದು ಕೋರ್ಟ್ ಆದೇಶ ನೀಡಿದೆ

ಜ. 22 ರಂದು ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆ

ಸರ್ಕಾರಿ ರಜೆ ಘೋಷಣೆ ಬಗ್ಗೆ ಇನ್ನೂ ನಿರ್ಧಾರವಾಗಿಲ್ಲ: ಸಿಎಂ ಸಿದ್ದರಾಮಯ್ಯ



ಬೆಂಗಳೂರು: ಅಯೋಧ್ಯೆಯಲ್ಲಿ ಜನವರಿ 22ರಂದು ನಡೆಯುವ ಶ್ರೀರಾಮನ ಪ್ರಾಣ ಪ್ರತಿಷ್ಠಾಪನೆ ಸಮಾರಂಭ ಅಂದು ರಾಜ್ಯದಲ್ಲಿ ಸರ್ಕಾರಿ ರಜೆ ಘೋಷಿಸುವ ಬಗ್ಗೆ ಯಾವುದೇ ನಿರ್ಧಾರ ಕೈಗೊಂಡಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಜನವರಿ 22ರಂದು ರಜೆ ನೀಡಬೇಕೆಂಬ ಬಿಜೆಪಿಯ ಬೇಡಿಕೆ ಕುರಿತು ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ಮನವಿ ಪತ್ರವನ್ನು ಇನ್ನೂ ನೋಡಿಲ್ಲ ನೋಡುತ್ತೇನೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ರಾಮ ಪ್ರಾಣ ಪ್ರತಿಷ್ಠಾಪನೆ ದಿನದಿಂದು ರಾಜ್ಯದಲ್ಲಿ ರಜೆ ನೀಡಬೇಕೆಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಕೋಟಾ ಶ್ರೀನಿವಾಸ್ ಪೂಜಾರಿ ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ ವೈ ವಿಜಯೇಂದ್ರ ಕೂಡಾ ಇದೇ ಬೇಡಿಕೆಯನ್ನು ಮುಂದಿಟ್ಟಿದ್ದಾರೆ.

ಅಯೋಧ್ಯೆಗೆ ಹೋಗುತ್ತೀರಾ ಎಂಬ ಪ್ರಶ್ನೆಗೆ ಉತ್ತರಿಸಿದ ಸಿದ್ದರಾಮಯ್ಯ, 'ಇನ್ನೊಂದು ದಿನ ಅಲ್ಲಿಗೆ ಹೋಗುತ್ತೇನೆ ಎಂದು ಮೊದಲೇ ಹೇಳಿದ್ದೇನೆ. ನೀವು ಈ ಪ್ರಶ್ನೆಯನ್ನು ಏಕೆ ಪುನರಾವರ್ತಿಸುತ್ತೀರಿ' ಎಂದು ಸುದ್ದಿಗಾರರನ್ನೇ ಕೇಳಿದರು.

ಈ ಮಧ್ಯೆ ಬೆಂಗಳೂರಿನಲ್ಲಿಂದು ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ವಿಜಯೇಂದ್ರ ಕಿಷ್ಕಿಂಧಾ ಕ್ಷೇತ್ರವು ವಿಜಯನಗರ ಜಿಲ್ಲೆಯ ಹಂಪಿಯಲ್ಲಿರುವುದರಿಂದ ಶ್ರೀರಾಮನ ಸಂಬಂಧವನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕ ಸರ್ಕಾರ ಜನವರಿ 22 ರಂದು ರಜೆ ಘೋಷಿಸಲು ಪರಿಗಣಿಸಬೇಕು ಎಂದು ಹೇಳಿದರು. ರಾಮಾಯಣ ಮಹಾಕಾವ್ಯದ ಪ್ರಕಾರ, ಕಿಷ್ಕಿಂಧಾ ಕ್ಷೇತ್ರವು ವಾನರ ಸಾಮ್ರಾಜ್ಯವಾಗಿತ್ತು. ನೆರೆಯ ಕೊಪ್ಪಳ ಜಿಲ್ಲೆಯ ಅಂಜನಾದ್ರಿ ಬೆಟ್ಟವು ಶ್ರೀರಾಮನ ಕಟ್ಟಾ ಭಕ್ತ ಹನುಮಂತನ ಜನ್ಮಸ್ಥಳವಾಗಿತ್ತು.

ಶ್ರೀರಾಮ ಮಂದಿರ ಉದ್ಘಾಟನೆ ಭಾರತಕ್ಕೆ ಮಾತ್ರವಲ್ಲದೆ ಪ್ರಪಂಚದಾದ್ಯಂತ ಐತಿಹಾಸಿಕ ಸಂದರ್ಭವಾಗಿದೆ, ಏಕೆಂದರೆ ಅನೇಕ ದೇಶಗಳು ಇದರ ಬಗ್ಗೆ ಸಂತೋಷಪಡುತ್ತಿವೆ. ಆಚರಣೆಗೆ ಅಡ್ಡಿಪಡಿಸುವ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ರಾಜ್ಯ ಸರ್ಕಾರ ಎಚ್ಚೆತ್ತುಕೊಳ್ಳಬೇಕು ಎಂದು ವಿಜಯೇಂದ್ರ ಮನವಿ ಮಾಡಿದರು.

ನೆರೆ ಮನೆ ಮಹಿಳೆಗೆ ನಾಯಿ ಕಚ್ಚಿದ ಪ್ರಕರಣ

ಚಾರ್ಜ್‌ಶೀಟ್‌ನಲ್ಲಿ ನಟ ದರ್ಶನ್ ಹೆಸರು ಕೈಬಿಟ್ಟ ಪೊಲೀಸರು




ಬೆಂಗಳೂರು: ಚಾಲೆಂಜಿಂಗ್ ಸ್ಟಾರ್ ದರ್ಶನ್ ಮನೆಯ ನಾಯಿ ಕಚ್ಚಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಆರ್.ಆರ್ ನಗರ ಪೊಲೀಸರು ನ್ಯಾಯಾಲಯಕ್ಕೆ ಚಾರ್ಜ್ ಶೀಟ್ ಸಲ್ಲಿಸಿದ್ದು ಚಾರ್ಜ್‌ಶೀಟ್‌ನಲ್ಲಿ ದರ್ಶನ್ ಹೆಸರು ಕೈಬಿಡಲಾಗಿದೆ.

ಆರ್.ಆರ್ ನಗರ ಪೊಲೀಸರು ಸಿಟಿ ಸಿವಿಲ್ ಕೋರ್ಟ್‌ಗೆ 150ಕ್ಕೂ ಹೆಚ್ಚು ಪುಟಗಳ ಚಾರ್ಜ್ ಶೀಟ್ ಅನ್ನು ಸಲ್ಲಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಐದಕ್ಕೂ ಹೆಚ್ಚು ಮಂದಿಯನ್ನು ಸಾಕ್ಷಿಗಳಾಗಿ ಪೊಲೀಸರು ಪರಿಗಣಿಸಿದ್ದರು.

ಅಲ್ಲದೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ದರ್ಶನ್ ಅವರ ಹೇಳಿಕೆಯನ್ನೂ ಪೊಲೀಸರು ದಾಖಲಿಸಿಕೊಂಡಿದ್ದರು. ಇದೀಗ ಚಾರ್ಜ್ ಶೀಟ್‌ನಲ್ಲಿ ದರ್ಶನ್ ಹೆಸರು ಕೈಬಿಟ್ಟಿದ್ದು ಘಟನೆಗೂ ದರ್ಶನ್‌ಗೂ ಯಾವುದೇ ಸಂಬಂಧ ಇಲ್ಲವೆಂದು ಉಲ್ಲೇಖಿಸಿದ್ದಾರೆ.

ನಡೆದಿದ್ದು ಏನು: ಕಳೆದ ವರ್ಷ ಅಕ್ಟೋಬರ್ 28ರಂದು ದರ್ಶನ್ ಮನೆಯ ಮುಂದೆ ಈ ಘಟನೆ ನಡೆದಿದ್ದು, ಅಮಿತಾ ಜಿಂದಾಲ್ ಎಂಬ ಮಹಿಳೆಗೆ ದರ್ಶನ್ ಮನೆಯ ನಾಯಿ ಕಚ್ಚಿತ್ತು. ಅಂದು ಅಮಿತಾ ಜಿಂದಾಲ್ ಕೊಟ್ಟ ದೂರಿನ ಮೇಲೆ ಎಫ್ಐಆರ್ ದಾಖಲಾಗಿತ್ತು. ಕೇರ್ ಟೇಕರ್ ಹೇಮಂತ್ ಹಾಗೂ ನಟ ದರ್ಶನ್ ಆರೋಪಿಗಳಾಗಿ ಮಾಡಿ ಎಫ್ಐಆರ್ ದಾಖಲಾಗಿತ್ತು

ಬಹುಭಾಷಾ ನಟಿ ರಶ್ಮಿಕಾ ಮಂದಣ್ಣ ಡೀಪ್‌ಫೇಕ್ ವೀಡಿಯೋ: ಆರೋಪಿ ಬಂಧನ!



ಬೆಂಗಳೂರು: ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ವೈರಲ್ ಆಗಿದ್ದ ಬಹುಭಾಷಾ ನಟಿ ರಶ್ಮಿಕಾ ಮಂದಣ್ಣ ಡೀಪ್‌ಫೇಕ್ ವಿಡಿಯೋಗೆ ಸಂಬಂಧಿಸಿದಂತೆ ವ್ಯಕ್ತಿಯೊಬ್ಬನನ್ನು ಬಂಧಿಸಲಾಗಿದೆ ಎಂದು ದೆಹಲಿ ಪೊಲೀಸರು ಶನಿವಾರ ತಿಳಿಸಿದ್ದಾರೆ.

ಈ ವಿಡಿಯೋದ ಸೃಷ್ಟಿಕರ್ತ ಎಂದು ಶಂಕಿಸಲಾಗಿರುವ ಆರೋಪಿಯನ್ನು ದಕ್ಷಿಣ ಭಾರತದಿಂದ ಬಂಧಿಸಲಾಗಿದ್ದು, ದೆಹಲಿಗೆ ಕರೆತಂದು ಆತನ ವಿಚಾರಣೆ ನಡೆಸಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆರೋಪಿಯನ್ನು ಡಿಜಿಟಲ್ ಮಾರ್ಕೆಟರ್ ಈಮನಿ ನವೀನ್ ಎಂದು ಗುರುತಿಸಲಾಗಿದೆ. ಡೀಪ್‌ಫೇಕ್ ವೀಡಿಯೊಗೆ ಸಂಬಂಧಿಸಿದ 500ಕ್ಕೂ ಹೆಚ್ಚು ಸಾಮಾಜಿಕ ಮಾಧ್ಯಮ ಖಾತೆಗಳನ್ನು ಪರಿಶೀಲಿಸಿದ ನಂತರ ದೆಹಲಿ ಪೊಲೀಸರು ನವೀನ್‌ನನ್ನು ಆಂಧ್ರಪ್ರದೇಶದಲ್ಲಿ ಬಂಧಿಸಿದ್ದಾರೆ. ವಿಚಾರಣೆ ವೇಳೆಯಲ್ಲಿ ಆತ ತಪ್ಪೊಪ್ಪಿಕೊಂಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ರಶ್ಮಿಕಾ ಮಂದಣ್ಣ ಅವರ ಡೀಪ್‌ಫೇಕ್ ವಿಡಿಯೋ ಸಂಬಂಧ ನವೆಂಬರ್ 10 ರಂದು ದೆಹಲಿಯ ವಿಶೇಷ ಪೊಲೀಸ್ ಘಟಕವಾದ ಇಂಟೆಲಿಜೆನ್ಸ್ ಫ್ಯೂಷನ್ ಮತ್ತು ಸ್ಟ್ರಾಟೆಜಿಕ್ ಆಪರೇಷನ್ಸ್ (IFSO)ನಲ್ಲಿ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 465 (ನಕಲಿಗೆ ಶಿಕ್ಷೆ) ಮತ್ತು 469 (ಪ್ರತಿಷ್ಠೆಗೆ ಹಾನಿ ಮಾಡುವ ಉದ್ದೇಶದಿಂದ ನಕಲಿ) ಮತ್ತು ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 66ಅ ಮತ್ತು 66ಇ ಅಡಿಯಲ್ಲಿ ಎಫ್ಐಆರ್ ದಾಖಲಿಸಲಾಗಿದೆ.

ಎಫ್ಐಆರ್ ದಾಖಲಿಸಿದ ಕೂಡಲೇ ನಕಲಿ ವಿಡಿಯೋ ಮಾಡಿ ಅದನ್ನು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಮಾಡಿದ್ದ ಆರೋಪಿಯನ್ನು ಗುರುತಿಸಲು ಮತ್ತು ಯುಆರ್‌ಎಲ್ ಮತ್ತಿತರ ವಿವರ ಪಡೆಯಲು ಮೆಟಾಗೆ ಐಎಫ್‌ಎಸ್‌ಒ ಘಟಕ ಪತ್ರ ಬರೆದಿತ್ತು ಎಂದು ಅಧಿಕಾರಿ ಮಾಹಿತಿ ನೀಡಿದ್ದಾರೆ

5ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಮಗ, ಸೊಸೆ, ಮತ್ತು ಮೊಮ್ಮಕ್ಕಳು, ಮುಮ್ಮಕ್ಕಳು, ಕುಟುಂಬವರ್ಗದವರು ಹಾಗೂ ಬಂಧುಮಿತ್ರರು, ಹೆರಗನಹಳ್ಳಿ ಗ್ರಾಮ, ಕೆ.ಆರ್.ಪೇಟೆ ತಾ॥, ಮಂಡ್ಯ ಜಿಲ್ಲೆ

ಶ್ರೀಮತಿ ಲಕ್ಷ್ಮಮ್ಮ
ನಿಧನ: 21.01.2019

ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

USED LAPTOP
Corporate used refurbished Lenovo core i5 laptops in very good condition @ 16000/-
Call: 9880599937

WANTED
For a boutique
- Cutting Master - 1No.
- Tailors - 4 Nos
- Hand embroidery workers - 4 Nos

Call: 9880599937



Hi! TAXI
ONLY ONE WAY TAXI CHARGE
MYSORE to BANGALORE
City drop or Pick up
BANGALORE to MYSORE Airport drop or Pick up MYSURU
9611177599

WANTED
MALE / FEMALE
SALES & ACCOUNTING
For: MATTRESSES MANUFACTURING COMPANY IN NAGAWALA, MYSURU
Contact: 9880512047
Email: admin@comfortsleep.in

ರೂಮ್ ಬಾಯ್ಸ್ ಬೇಕಾಗಿದ್ದಾರೆ
ಮೈಸೂರು ಗೋಕುಲಂನಲ್ಲಿ ಕೆಲಸ ಮಾಡಲು ತಕ್ಷಣ ಬೇಕಾಗಿದ್ದಾರೆ
ವಯಸ್ಸು 18-30, ಊಟ ವಸತಿ ಉಚಿತ
Call: 98450 45401

DTCP SITES FOR SALE
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

SITE FOR SALE
35x50 East Facing
Srinagara layout
Jnanaganga House Building Co-Operative Society Limited
Mandakalli Mysore
7829969455

ಆರ್ಥೋಪೆಡಿಕ್ ಪಾದ ಮತ್ತು ಪಾದದ ಕೀಲು ಸಮಸ್ಯೆಗಳಿಗೆ ಭೇಟಿ ನೀಡಿ
ಪ್ರತಿ ಮಂಗಳವಾರ ಬೆಳಗ್ಗೆ 9.00 ರಿಂದ ಮಧ್ಯಾಹ್ನ 12.00
ಮಹಾವೀರ್ ಆರ್ಥೋಪೆಡಿಕ್ ಕ್ಲಿನಿಕ್ ಮತ್ತು ಫುಟ್ ಮತ್ತು ಆ್ಯಂಕಲ್ ಸೆಂಟರ್
ನಂ. 926, ವಿಶ್ವಧಾತ್ರಿ ರಸ್ತೆ, ವಿವೇಕಾನಂದ ನಗರ, ವಿವೇಕಾನಂದ ವೃತ್ತದ ಹತ್ತಿರ, ಮೈಸೂರು.
ನೋಂದಾಯಿಸಲು ಸಂಪರ್ಕಿಸಿ
7204080539,0821-4000961
ಮುಖ್ಯ ಕ್ಲಿನಿಕ್ ಬೆಂಗಳೂರಿನಲ್ಲಿದೆ

44 ಮೈಸೂರು ಮಿತ್ರ 44
ಜಾಹೀರಾತಿಗಾಗಿ ಸಂಪರ್ಕಿಸಿ:
Ph: 0821-2496522 / 23
Email: ad@mysurumithra.com

ನಗರಸಭಾ ಕಾರ್ಯಾಲಯ, ಹುಣಸೂರು
ಮೈಸೂರು ಜಿಲ್ಲೆ – 571105
E-mail : itstaff_ulb_hunsur@yahoo.co.in
ಫೋನ್: 08222–252048
ಸಂಖ್ಯೆ: ಹುನಕಾ/ಜೆ.ಇ/ಸಿಆರ್/ದ.ನಿ.ಕೊ/31/2023–24 ದಿ: 19.01.2024

ದರ ನಿಗಧಿಗಾಗಿ ಕೊಟೇಷನ್ ಪ್ರಕಟಣೆ

ಹುಣಸೂರು ನಗರಸಭೆಯ ಆಡಳಿತ ಕಛೇರಿಗೆ ದೈನಂದಿನ ಕೆಲಸಗಳಿಗಾಗಿ ಕಂಪ್ಯೂಟರ್, ಪ್ರಿಂಟರ್‌ಗಳು ಹಾಗೂ ನೀರು ಸರಬರಾಜು ವಿಭಾಗಕ್ಕೆ ಕೆಮಿಕಲ್‌ಗಳು, ಸಾಮಗ್ರಿಗಳು ಮತ್ತು ಬಾಡಿಗೆ ಆದಾರದಲ್ಲಿ ನೀರು ಸರಬರಾಜು ಟ್ಯಾಂಕರ್‌ಗಳ ಅವಶ್ಯಕತೆಯಿದ್ದು ಐಟಂವಾರು ದರಪಟ್ಟಿಯನ್ನು ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಅಧಿಕೃತ ಸಂಸ್ಥೆಗಳು/ಸರಬರಾಜುದಾರರು ಐಟಂವಾರು ವಿವರಗಳಂತೆ ತಾವು ಸರಬರಾಜು ಮಾಡುವ ಐಟಂಗಳಿಗೆ ತಮ್ಮ ಕನಿಷ್ಠ ದರಗಳನ್ನು ನಮೂದಿಸಿದ ದರಪಟ್ಟಿಗಳನ್ನು (ಕೊಟೇಷನ್‌ಗಳನ್ನು) ಸೀಲ್ ಮಾಡಿದ ಲಕೋಟೆಯಲ್ಲಿಟ್ಟು ದಿನಾಂಕ:30.01.2024ರ ಸಂಜೆ 11.00ಗಂಟೆಯ ಒಳಗೆ 'ಪೌರಾಯುಕ್ತರು, ನಗರಸಭೆ, ಹುಣಸೂರು' ಇವರಿಗೆ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಐಟಂವಾರು ವಿವರಗಳನ್ನು ಕಛೇರಿಯ ವೇಳೆಯಲ್ಲಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿರುತ್ತದೆ.

ಸಹಿ/– ಆಡಳಿತಾಧಿಕಾರಿಗಳು ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು ಮೈಸೂರು ಜಿಲ್ಲೆ, ಮೈಸೂರು

ಸಹಿ/– ಪೌರಾಯುಕ್ತರು ನಗರಸಭೆ, ಹುಣಸೂರು

DIPR/DDMYS/KSMCA/931/2023-24

ಎಲ್ಲಾ ರೀತಿಯ ವಾಣಿಜ್ಯ ವಸತಿ ಕೆಲಸಗಳಿಗಾಗಿ ಪರಿಣಿತ ಉತ್ತರ ಭಾರತದ ಕಾರ್‌ಪೆಂಟರ್ಸ್
9631714888

STAR OF MYSORE
SPECIAL ISSUE

Star of Mysore is completing 46 years of service on 16th February 2024 and entering 47th year of publication. As in the past, this year too we will be publishing a Special Issue.

We request our advertisers and patrons to release their advertisements before 12th February to facilitate printing as per schedule.

HEAD OFFICE
0821-2496520 (5-LINES)
Ad Dept. - 0821-2496522 / 23
Email : ad@starofmysore.com

Maria G. Fernandes
Advt. Manager: 94485-25060

Joy Anthony Dove
Sr. Executive-Ad Sales
89516-68960

Prema
Sr. Executive Advertising
98805-49879

K.R. Circle Office : 0821-2431774
D.D. Urs Road Office : 0821-2428695
Kodagu Office : 97314-69871
Mandya Office : 87629-60325
Chamarajanagar : 92422-65657
Nanjangud : 98805-09200 / 99016-02226
T.N. Pura : 94483-05750
Hassan : 94484-01175
Bengaluru : 98440-46761

REGISTER TODAY CONSTRUCT TOMORROW
MUDA APPROVED SITES
30X40 - West Facing
Near JSS Layout
Sardar Vallabh Bhai Patel Nagar,
T Narsipura Road
Bank Loan Upto 80%
Price Rs. 45 Lakhs - Negotiable
91082 92727

WANTED
PRE-SCHOOL TEACHERS AND HELPERS
Minimum Qualification : For Teachers - any Degree/NTT For Helpers - SSLC
Contact Radiant School of Excellence, Gundlupet
9980777633
mail id: info@radiantschoolofexcellence.com

SITE FOR SALE
Muda Approved
Corner, North-West facing
Area : 1365.72sqft
Chamundeshwari Railway layout
Shyadanahall. Opp. J.K. Tyres,
KRS Road. Mysuru-570016
8105599555
Brokers Excuse

SITE FOR SALE
Srirampura
(BEML Layout) 1265 Sqft
(Actual Muda 1162 Sft)
North Facing MUDA
Rs.7250000/-
DIRECT OWNER
SERIOUS BUYER ONLY
9916273662

HOUSE FOR SALE
Newly Built 2bhk House Muda Property For Sale 60X40 Site Dimension Gopal Gowda Extension. Call For Price
9741552380

LOOKING FOR PROPERTIES
Site Measuring
30x40 / 40x60
N/E Facing only for investment purpose
6364003399 (BLR)
Direct Owners Only
Brokers / Resellers Excuse

VISIT TODAY
NAVAKARNATAKA
BOOK FAIR
Grand Festival of Kannada and English Books on all Subjects
INSTITUTION OF ENGINEERS
J. L. B. ROAD, MYSURU
15% to 50% DISCOUNT
19.01.2024 TO 28.01.2024
9.30 AM TO 8.30 PM

HP HYLAND PROPERTIES
DTCP APPROVAL
ನಿಸರ್ಗ ಇಕೋ ಪ್ಯಾರಡೈಸ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
ನಿಮ್ಮ ಕನಸಿನ ನಿವೇಶನ ಮೈಸೂರಿನಲ್ಲಿ
ಸುಲಭ 4 ಕಂತುಗಳ ಸೌಲಭ್ಯವಿದೆ
ಕೇವಲ ₹650/ ಪ್ರತಿ ಚದರ ಅಡಿ
30x40 | 30x50 | 40x60 | 50x80
ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಕೆಲವೇ ಸೈಟ್‌ಗಳು ಮಾತ್ರ ಲಭ್ಯ
ಹೈಲ್ಯಾಂಡ್ ಪ್ರಾಪರ್ಟೀಸ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
90713 86615
95133 01854

ನಗರಸಭಾ ಕಾರ್ಯಾಲಯ, ಮಡಿಕೇರಿ, ಕೊಡಗು ಜಿಲ್ಲೆ
ದೂರವಾಣಿ: 08272-228323, ಫ್ಯಾಕ್ಸ್ : 08272-223998
e-mail: itstaff_ulb_madikeri1@yahoo.com
ಕಾವೇರಿ ಕಲಾಕ್ಷೇತ್ರದ ಹತ್ತಿರ, ಮಡಿಕೇರಿ– 571201

ಸಂ:ಮನಸ/ತಾಂತ್ರಿಕ/ಜೆಇ.4/ಟೆಂಡರ್–05/2023–24/ಕರೆ–2 ದಿನಾಂಕ: 19/01/2024

ಕೆಪಿಪಿಪಿ, ಟೆಂಡರ್ ಪ್ರಕಟಣೆ

ಮಡಿಕೇರಿ ನಗರಸಭಾ ವ್ಯಾಪ್ತಿಯಲ್ಲಿ 2023–24ನೇ ಸಾಲಿನ ನಗರಸಭೆ ನಿಧಿಯಡಿ ಸಿವಿಲ್ ಕಾಮಗಾರಿಯನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಆದ್ಯಾದೇಶ 1999 ಹಾಗೂ ನಿಯಮ 2000ಕ್ಕೆ ಒಳಪಟ್ಟು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿ ಗುತ್ತಿಗೆದಾರರು ಟೆಂಡರ್ ವಿವರಗಳನ್ನು KPPP ವೆಬ್ ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು. ಹೆಚ್ಚಿನ ಮಾಹಿತಿ, ಕಾಮಗಾರಿ ವಿವರಣೆ, ನಿಬಂಧನೆ ಹಾಗೂ ಷರತ್ತುಗಳಿಗೆ ಕಛೇರಿ ವೇಳೆಯಲ್ಲಿ ಈ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು. ಟೆಂಡರ್ ಡೌನ್ ಲೋಡ್, ಅಪ್ ಲೋಡ್, ಟೆಂಡರ್ ಪ್ರೊಸೆಸಿಂಗ್ ಶುಲ್ಕ ಮತ್ತು ಇ.ಎಂ.ಡಿ. ಪಾವತಿ ಬಗ್ಗೆ ಸಂಬಂಧಪಟ್ಟಂತೆ ವಿವರಗಳನ್ನು ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಪಡೆಯಬಹುದು.

ಸಹಿ/– ಶ್ರೀ ಸತೀಶ್.ಎಸ್.ಸಿ, ಸ್ಥಾಯಿ ಸಮಿತಿ ಅಧ್ಯಕ್ಷರು, ನಗರಸಭೆ, ಮಡಿಕೇರಿ,

ಸಹಿ/– ಶ್ರೀಮತಿ ಸವಿತಾ ರಾಕೇಶ್, ಉಪಾಧ್ಯಕ್ಷರು, ನಗರಸಭೆ, ಮಡಿಕೇರಿ

ಸಹಿ/– ಶ್ರೀ ವಿಜಯ ಪೌರಾಯುಕ್ತರು, ನಗರಸಭೆ, ಮಡಿಕೇರಿ.

ಸಹಿ/– ಶ್ರೀಮತಿ ಅನಿತಾ ಪೂವಯ್ಯ, ಅಧ್ಯಕ್ಷರು, ನಗರಸಭೆ, ಮಡಿಕೇರಿ.

ಸಾರ್ವಜನಿಕರ ಒತ್ತಾಯದ ಮೇರೆಗೆ ಹಾಗೂ ಒಳ್ಳೆಯ ಪ್ರತಿಕ್ರಿಯೆಯಿಂದ ಜಯಮ್ಮ ಗೋವಿಂದಗೌಡ ಕಲ್ಯಾಣಮಂಟಪದಲ್ಲಿದ್ದ ಸೇಲ್‌ನ್ನು ಸಾಮ್ರಾಟ್ ಕಲ್ಯಾಣ ಭವನಕ್ಕೆ ಸ್ಥಳಾಂತರಿಸಲಾಗಿದೆ

2023 ನೇ ವರ್ಷದ ಸ್ಟಾಕ್ ಕ್ಲಿಯರೆನ್ಸ್ ಸೇಲ್ ಮೆಗಾ ಡಿಸ್ಕೌಂಟ್. ಇದೀಗ ಎಲ್ಲಾ ಬ್ರಾಂಡೆಂಡ್ ಬಟ್ಟೆಗಳನ್ನು ಶೇ. 80% ತನಕ ರಿಯಾಯಿತಿ ದರದಲ್ಲಿ ನೀಡಲು ತೀರ್ಮಾನಿಸಿದ್ದಾರೆ

ಗಮನಿಸಿ: ಹಣಕಾಸಿನ ಬಿಕ್ಕಟ್ಟಿನ ಕಾರಣದಿಂದಾಗಿ ಕಂಪನಿಯು ನಗದು ಪಡೆಯಲು ಸ್ಟಾಕ್ ಅನ್ನು ತೆರವುಗೊಳಿಸಲು ನಿರ್ಧರಿಸಿದೆ ಆದ್ದರಿಂದ ಮೈಸೂರಿನ ಗ್ರಾಹಕರಿಗೆ ಭಾರಿ ರಿಯಾಯಿತಿಯನ್ನು ನೀಡಲಾಗುತ್ತದೆ

Surplus Factory Seconds



upto 80% OFF

PUMA, benetton, Levi's, PARK AVENUE, Raymond, ColorPlus, Pepe Jeans, FCUK, U.S. POLO ASSN., adidas, dhuni by avaasa, DNMX, HAUTE curry, MODA RAPIDO, FLYING MACHINE, PARK AVENUE

Pepe Jeans LONDON

ಲೇಡೀಸ್ ಮತ್ತು ಜೆಂಟ್ಸ್, ಕಿಡ್ಸ್ ಕ್ಯಾಶುವಲ್ । ಫಾರ್ಮಲ್ ಫುಟ್‌ವೇರ್ ಅಕ್ಸೆಸರೀಸ್ । ಶರ್ಟ್ಸ್, ಟಿ–ಶರ್ಟ್ಸ್, ಜೀನ್ಸ್, ಟಾಪ್ಸ್, ಕುರ್ತಿ, ಸ್ಯಾರಿ, ಬೆಡ್ ಶೀಟ್, ಅಂಡರ್ ಗಾರ್ಮೆಂಟ್ಸ್, ಲೇಡೀಸ್ ಮತ್ತು ಜೆಂಟ್ಸ್ ಜಾಕೇಟ್

ಲೇಡಿಸ್ ಟಾಪ್ಸ್ ರೂ. 250, ಬ್ರಾಂಡೆಡ್ ಲೆಗ್ಗಿಂನ್ಸ್ ರೂ. 250

ಎಲ್ಲಾ ಬಟ್ಟೆಗಳು ಅತ್ಯಂತ ಕಡಿಮೆ ನಂಬಲಾಗದ ದರದ ರೀತಿಯಲ್ಲಿ ಬನ್ನಿ ಮತ್ತು ನೋಡಿ ನಿಮಗೆ ಇಷ್ಟವಾದರೆ ಮಾತ್ರ ತೆಗೆದುಕೊಳ್ಳಿ

ಸೇಲ್ ಕೊನೆಯ 4 ದಿನಗಳು ಮಾತ್ರ, ಯಾವುದೇ ವಿಸ್ತರಣೆ ಇರುವುದಿಲ್ಲ

ಸೇಲ್ 4 ದಿನಗಳು ಮಾತ್ರ ಭಾನು 21 ಸೋಮ 22 ಮಂಗಳ 23 ಬುಧ 24 ಜನವರಿ 2024

ಸಾಮ್ರಾಟ್ ಕಲ್ಯಾಣ ಭವನ
ಜಯಮ್ಮ ಗೋವಿಂದಗೌಡ ಕಲ್ಯಾಣಮಂಟಪ ಎದುರು, ರಿಲೆಯನ್ಸ್ ಸ್ಮಾರ್ಟ್ ಪಾಯಿಂಟ್ ಹಿಂಭಾಗ, ನಂ.1/ ಎಸ್‌ಎಂಟಿ, ಉದಯಗಿರಿ ರಸ್ತೆ, ಕುವೆಂಪು ನಗರ, ಮೈಸೂರು

ಸಮಯ: ಬೆಳಗ್ಗೆ 10 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ

FREE PARKING ENTRANCE
All Major Debit/Credit Cards.
G Pay PhonePe Paytm

ಸೂಚನೆ: ಜಾಹಿರಾತು ಪ್ರಕಟಣೆಯ ಪೇಪರ್ ಕಟಿಂಗ್ ತನ್ನಿ.. ರೂ 500 ಬೆಲೆಯ ಲಕ್ ಸ್ಯಾರಿಯನ್ನು ಕೇವಲ 150 ರೂಪಾಯಿಗೆ ಕೊಂಡುಕೊಳ್ಳಿ
(ಒಂದು ಪೇಪರ್ ಕಟಿಂಗ್‌ಗೆ 1 ಸ್ಯಾರಿ ಮಾತ್ರ)